Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–14 | ಏಪ್ರಿಲ್ 1–7, 2024 | ಪುಟ 16 | ರೂ.10/–
Volume-18 | Issue-14 | April 1-7, 2024 | Pages:16 | Price: 10/-


ಕೇಜ್ರಿವಾಲ್ ಬಂಧನ
ಸಂಸದೀಯ ಪ್ರಜಾಪ್ರಭುತ್ವಕ್ಕೆ ಕುತ್ತು





ಮೋದಿ ಸರಕಾರದ
ಸುಳ್ಳು
ಹಸಿ ಸುಳ್ಳುಗಳು
ಭರ್ಜರಿ ಸುಳ್ಳುಗಳು

ಬರ ಪರಿಹಾರ:
ತ್ವರಿತ ನ್ಯಾಯ ಸಿಗಲಿ




ಕ್ಲಾರಾ ಜೆಟ್ಕಿನ್ ಮತ್ತು ರೋಸಾ ಲಕ್ಸಂಬರ್ಗ್



ಮಹಿಳೆಯರ ಬೃಹತ್ ಮೆರವಣಿಗೆ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಭವ್ಯ ಇತಿಹಾಸ ಮತ್ತು ಪರಂಪರೆ

ಮಹಿಳಾ ದಿನಾಚರಣೆಯ ವಿಶೇಷ ಲೇಖನ


ಡಾ. ಕೆ. ಹೇಮಲತ,
ಸಿ.ಐ.ಟಿ.ಯು.
ಅಖಿಲ ಭಾರತ ಅಧ್ಯಕ್ಷರು

ವಿಶ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನದ ಆಚರಣೆಯನ್ನು ಮಾಡಲು ಶುರು ಮಾಡಿ ಈಗ ನೂರು ವರ್ಷಗಳನ್ನೂ ಮೀರಿದೆ. 26ನೇ ಆಗಸ್ಟ್ 1910 ರಲ್ಲಿ ಕೊಪನ್ ಹೆಗನ್‌ನಲ್ಲಿ ನಡೆದ ಎರಡನೇಯ ಸಮಾಜವಾದಿ ಮಹಿಳೆಯರ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ, ಇಡೀ ವಿಶ್ವದಲ್ಲಿ ಮಹಿಳೆಯರ ಬೇಡಿಕೆಗಳಿಗಾಗಿ ಗಮನಹರಿಸಲು ಒಂದು ದಿನದ ಆಚರಣೆಯನ್ನು ಕೈಗೊಳ್ಳುವಂತೆ ತೀರ್ಮಾನಿಸಲಯಿತು. ಈ ಸಮ್ಮೇಳನದಲ್ಲಿ 17 ರಾಷ್ಟ್ರಗಳಿಂದ, 100 ಕ್ಕೂ ಅಧಿಕ ಮಹಿಳೆಯರು ಭಾಗವಹಿಸಿದ್ದರು.

ಫಿನ್ನಿಶ್ ಸಂಸತ್ತಿಗೆ ಆಯ್ಕೆಯಾದ 3 ಮಹಿಳೆಯರನ್ನು ಒಳಗೊಂಡು ಸಂಘಗಳಿಂದ, ಸಮಾಜವಾದಿ ಪಕ್ಷಗಳಿಂದ ಪ್ರತಿನಿಧಿಯಾದ ಮಹಿಳೆಯರು ಭಾಗವಹಿಸಿದ್ದರು. ಕ್ಲಾರಾಜೆಟ್‌ಕಿನ್, ಅಂತರ ರಾಷ್ಟ್ರೀಯ ಮಹಿಳಾ ಸಂಘಟನೆಯ ಕಾರ್ಯದರ್ಶಿ ಹಾಗೂ ಪ್ರಮುಖ ಮಹಿಳಾ ಸಾಮ್ಯವಾದಿಯಾದ ಅವರು ಈ ಪ್ರಸ್ತಾವನೆಯನ್ನಿಟ್ಟರು. ಇದನ್ನು ಅತಿ ಉತ್ಸಾಹದಿಂದ ಸರ್ವಾನುಮತದಿಂದ ಒಪ್ಪಿಕೊಳ್ಳಲಾಯಿತು. ಅಂತರಾಷ್ಟ್ರೀಯ ಮಹಿಳಾ ದಿನದ ಮೂಲವು ಶೋಷಿತ ಕೆಲಸದ ಪರಿಸ್ಥಿತಿಗಳ ವಿರುದ್ಧ ಮಹಿಳಾ ಕಾರ್ಮಿಕರ ಹೋರಾಟದಲ್ಲಿ ಮತ್ತು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದರಲ್ಲಿ ಅಡಗಿದೆ.

ಇಂದು, ಅಂತರಾಷ್ಟ್ರೀಯ ಮಹಿಳಾ ದಿನದ ವರ್ಗ ಹಿನ್ನೆಲೆಯ ಒಳಾಂಶವನ್ನು ಕಿತ್ತು ಹಾಕುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ಅವಕಾಶವನ್ನು–ಮಾರುಕಟ್ಟೆಯ ಉತ್ಪನ್ನಗಳನ್ನು, ಅದರಲ್ಲಿಯೂ ರೆಫ್ರಿಜರೇಟರ್, ವಾಷಿಂಗ್ ಮೆಷಿನ್ ಮತ್ತು ಮೈಕ್ರೋವೇವ್ ಒವೆನ್‌ಗಳನ್ನೊಳಗೊಂಡು ಹೂವುಗಳನ್ನು, ಸುಗಂಧಗಳನ್ನು, ಆಭರಣಗಳನ್ನು, ವಸ್ತ್ರಗಳನ್ನು, ಚಾಕ್ಲೇಟ್ ಮುಂತಾದವುಗಳನ್ನು ಮಾರಾಟ ಮಾಡುವ ಸಂದರ್ಭವಾಗಿ ಮಾಡಿ, ಮಹಿಳಾ ದಿನಾಚರಣೆಯನ್ನೇ ಕ್ಷುಲಕಗೊಳಿಸುವ ಮತ್ತು ಅಸಂಜಸಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ.

ಪುರುಷರು ಮತ್ತು ಮಹಿಳೆಯರು ಪ್ರಾರಂಭಿಸಿದ ಮಹಿಳೆಯರ ಹಕ್ಕುಗಳಿಗಾಗಿನ ಭವ್ಯ ಹೋರಾಟಗಳನ್ನು ಮತ್ತು ಅಂತರಾಷ್ಟ್ರೀಯ ಮಹಿಳಾ ದಿನದ ಚಾರಿತ್ರ್ಯತೆಯನ್ನು ಅಪಹಾಸ್ಯಕ್ಕೆ ಗುರಿ ಮಾಡುವ ಪ್ರಯತ್ನಗಳನ್ನು ಧಿಕ್ಕರಿಸಬೇಕಿದೆ. ಅಂತರಾಷ್ಟ್ರೀಯ ಮಹಿಳಾ ದಿನದ ಶತಮಾನೋತ್ಸವದ ಈ ಸಂದರ್ಭದಲ್ಲಿ ಅದರ ಕ್ರಾಂತಿಕಾರಿ ಸಂಪ್ರದಾಯಗಳನ್ನು ಪುನಃ ಪ್ರತಿಪಾದಿಸಲು ಮತ್ತು ಮಹಿಳೆಯರ ವಿಮೋಚನೆಗಾಗಿ ಹೋರಾಟಗಳಲ್ಲಿ ನಮನ್ನು ಪುನರ್ಸಮರ್ಪಣೆ ಮಾಡಿಕೊಳ್ಳುವ ಅವಶ್ಯಕತೆ ಬಂದಿದೆ.

ಹೋರಾಟಗಳ ಭವ್ಯ ಇತಿಹಾಸ

ಇತಿಹಾಸದ ಎಲ್ಲಾ ಸಂದರ್ಭಗಳಲ್ಲಿ, ಮಹಿಳೆಯರು ಪುರುಷರೊಂದಿಗೆ ಎಲ್ಲಾ ಕಾರ್ಯಗಳಲ್ಲಿ, ಎಲ್ಲಾ ಸಾಮಾಜಿಕ ವರ್ಗದ ಪ್ರತಿರೋಧಗಳಲ್ಲಿಯೂ, ಬಂಡಾಯಗಳಲ್ಲಿಯೂ ಮತ್ತು ಕ್ರಾಂತಿಗಳಲ್ಲಿಯೂ, ಗುಲಾಮಗಿರಿಯ ಸಮಾಜದಲ್ಲಾಗಲಿ, ಊಳಿಗಮಾನ್ಯ ಸಮಾಜದಲ್ಲಾಗಲಿ ಅಥವಾ ಇಂದಿನ ಬಂಡವಾಳಶಾಹಿ ಸಮಾಜದಲ್ಲಿಯೇ ಆಗಲಿ ಸಕ್ರಿಯವಾಗಿ ಭಾಗವಹಿಸುತ್ತಲೇ ಇದ್ದಾರೆ.

ಬಂಡವಾಳಶಾಹಿ ಬೆಳವಣಿಗೆಯಿಂದೀಚೆಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವೇತನ ಪಡೆಯುವ ಕೆಲಸದಲ್ಲಿ ತೊಡಗಿಸಿಕೊಂಡರು ಮತ್ತು ಮನೆಗಳಲ್ಲಿಯ ನಿರ್ಬಂಧಗಳಿಂದ ಹೊರಬಂದು ಬಟ್ಟೆ ಮತ್ತು ಇತರ ಗಿರಣಿಗಳಲ್ಲಿ ಮತ್ತು ಮನೆಗಳಲ್ಲಿ ಕೆಲಸಗಾರರಾಗ ತೊಡಗಿದರು. ಅವರ ಕೆಲಸದ ಪರಿಸ್ಥಿತಿಗಳು ಅತ್ಯಂತ ಶೋಚನೀಯವಾಗಿದ್ದಿತು ಮತ್ತು ವೇತನವೂ ಕೂಡ ನಿಕೃಷ್ಟವಾಗಿದ್ದವು.

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ, ಇಂಗ್ಲೆಂಡಿನಲ್ಲಿ ಮಹಿಳಾ ಕಾರ್ಮಿಕರು ಸಂಘಟನೆಗಳನ್ನು ಸ್ವಇಚ್ಛೆಯಿಂದಲೇ ಸೇರುತ್ತಿದ್ದರು. ತಮ್ಮದೇ ಆದ ಸಂಘಗಳನ್ನು ಸ್ಥಾಪಿಸಿದರು ಮತ್ತು ಮುಷ್ಕರಗಳನ್ನು ಹಮ್ಮಿಕೊಂಡರಲ್ಲದೆ, ಕೈಗಾರಿಕಾ ಪ್ರತಿಭಟನೆಗಳಲ್ಲಿ ಭಾಗಿಯಾದರು. ಮಹಿಳಾ ಕಾರ್ಮಿಕರು ಸಾಮಾನ್ಯವಾಗಿ ಪುರುಷ ಕಾರ್ಮಿಕರಿಗಿಂತ ಹೆಚ್ಚು ತೀವ್ರವಾದಿಗಳಾಗಿ ಹೆಚ್ಚು ಪ್ರಬಲ ಹಾಗು ಉಗ್ರವಾಗಿ ಚಳುವಳಿಯಲ್ಲಿ ತೊಡಗಿದ್ದರು ಎಂಬ ವರದಿಗಳಿವೆ. ಮಹಿಳೆಯರು ಬಹುತೇಕ ಎಲ್ಲಾ ಸಾರ್ವಜನಿಕ ಪ್ರತಿಭಟನೆಗಳಲ್ಲಿ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುತ್ತಿದ್ದರು, 1833ರ ಡರ್ಬಿ ಸಿಲ್ಕ್‌ನ ಗಲಭೆಗಳು ಇದರಲ್ಲಿ ಒಂದಾಗಿದೆ.

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಗೊಂದು ಭವ್ಯವಾದ ಇತಿಹಾಸ ಹಾಗೂ ಪರಂಪರೆ ಇದೆ. ಕೆಚ್ಚೆದೆಯ ಹೋರಾಟಗಳು, ತ್ಯಾಗ ಬಲಿದಾನಗಳ ಹಿನ್ನೆಲೆ ಇದೆ. ಈ ಹಿನ್ನೆಲೆಯನ್ನು ಮಸುಕು ಮಾಡುವ ಸಂಚುಗಳೂ ಇವೆ. ಈ ಸನ್ನಿವೇಶದಲ್ಲಿ ಚರಿತ್ರೆಯ ಹೆಜ್ಜೆ ಗುರುತುಗಳನ್ನು ನೆನಪಿಸಿಕೊಳ್ಳುವ ಒಂದು ಲೇಖನ.

ಉತ್ತರ ಅಮೆರಿಕಾದಲ್ಲಿ ಮೊದಲಿನಿಂದಲೂ ಮಹಿಳೆಯರು, ಪುರುಷರು ರೂಪಿಸುತ್ತಿದ್ದ ಕಾರ್ಮಿಕ ಸಂಘಗಳನ್ನು ಬೆಂಬಲಿಸುತ್ತಿದ್ದರು ಮತ್ತು ಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಯಾವಾಗ ಮಹಿಳೆಯರ ಬೇಡಿಕೆಗಳನ್ನು ಇದ್ದ ಈ ಸಂಘಟನೆಗಳು ನಿರ್ಲಕ್ಷಿಸುವುದನ್ನು ಅರಿತುಕೊಂಡರೊ, ಮಹಿಳೆಯರ ಒಕ್ಕೂಟವನ್ನೊ ಅಥವಾ ಪ್ರತ್ಯೇಕವಾದ ಮಹಿಳಾ ಸಂಘಗಳನ್ನೋ ರಚಿಸಿಕೊಂಡರು. ಡಾಟರ್ಸ್ ಆಫ್ ಸೇಂಟ್ ಕ್ರಿಸ್ಪಿನ್, ಮಹಿಳಾ ಚಮ್ಮಾರರ ಸಂಘ, ಮಹಿಳಾ ಸಿಗಾರ್ ತಯಾರಕರರು, ಛತ್ರಿ ತಯಾರಕರು, ಮುದ್ರಕರು, ಮಹಿಳಾ ದರ್ಜಿಗಳು ಮತ್ತು ಅಗಸಗಿತ್ತಿಯರು ತಮ್ಮದೇ ಆದ ಸಂಘಗಳನ್ನು ಸ್ಥಾಪಿಸಿದರು. 1820 ರಲ್ಲಿ ನ್ಯೂ ಇಂಗ್ಲೆಂಡಿನ ಮಹಿಳಾ ದರ್ಜಿಗಳು ಮೊದಲ ಮಹಿಳಾಯುಕ್ತ ಮುಷ್ಕರವನ್ನು ತಮ್ಮ ಬೇಡಿಕೆಗಳಾದ ಯೋಗ್ಯ ವೇತನ, ಕಡಿಮೆ ಸಮಯದ ಅವಧಿ ಮತ್ತು ಉತ್ತಮ ಕೆಲಸದ ಪರಿಸ್ಥಿತಿಗಳಿಗಾಗಿ ಆಯೋಜಿಸಿದ್ದರು.

ಮಹಿಳಾ ಕಾರ್ಮಿಕರ ಮುಂದಾಳತ್ವದಲ್ಲಿ ಅತೀ ಪ್ರಾಮುಖ್ಯವಾದ ಮೊದಲಿನ ಮುಷ್ಕರ ಮೆಸೆಚುಸ್ಸೆಟ್ಸ್‌ನ ಲಾವೆಲ್ ಕಾಟನ್ ಮಿಲ್‌ನಲ್ಲಿ ಜರುಗಿದ್ದುದ್ದಾಗಿದೆ. ಲಾವೆಲ್ ಮಿಲ್‌ನಲ್ಲಿ ಯುವ ಮಹಿಳೆಯರನ್ನು ದಿನದಲ್ಲಿ 11–12 ಗಂಟೆಗಳ ಕಾಲ ಅತ್ಯಲ್ಪ ವೇತನ ನೀಡಿ ದುಡಿಸಿಕೊಳ್ಳುತ್ತಿದ್ದರು, ಅದರಲ್ಲಿಯೂ ಊಟ ಮತ್ತು ವಸತಿಗಾಗಿ ಸಂಸ್ಥೆಯು ವೇತನದಲ್ಲಿ ಕಡಿತಗೊಳಿಸುತ್ತಿತ್ತು. ಪುರುಷರು ಮುಂಜಾನೆ 7 ರಿಂದ ಕೆಲಸ ಶುರು ಮಾಡುತ್ತಿದ್ದರೆ, ಮಹಿಳೆಯರನ್ನು ಅವರು ಕೆಲಸದ ಮುಂಚಿತವಾಗಿ ತಿಂದಿದ್ದಲ್ಲಿ ಕಡಿಮೆ ಉತ್ಸಾಹವುಳ್ಳವರಾಗಿರುತ್ತಾರೆಂಬ ನೆಪ ಮಾಡಿ ಮುಂಜಾನೆ 5 ರಿಂದಲೇ ಕೆಲಸಕ್ಕೆ ಒತ್ತಾಯಕ್ಕೊಳಪಡಿಸುತ್ತಿದ್ದರು. ಸಂಸ್ಥೆಯು ಪುನರಾವರ್ತಿಸುತ್ತಿದ್ದ ವೇತನ ಕಡಿತದಿಂದ ಬೇಸತ್ತು 1834 ರಲ್ಲಿ ಲಾವೆಲ್‌ನ ಮಹಿಳಾ ಕಾರ್ಮಿಕರು ಮುಷ್ಕರಕ್ಕೆ ಹೊರಟರು. ಆದರೆ, ಕೆಲವು ದಿನಗಳ ನಂತರ ಕಡಿಮೆ ವೇತನಕ್ಕೆ ಒಪ್ಪಿಕೊಂಡು ಕೆಲಸಕ್ಕೆ ಹಾಜರಾಗುವಂತಾಯಿತು. 1936 ರಲ್ಲಿ ಮತ್ತೊಮ್ಮೆ ಮುಷ್ಕರಕ್ಕೆ ಇಳಿದು, ನಗರದ ಪ್ರಮುಖ ಬೀದಿಗಳಲ್ಲಿ 'ಓ, ದಯೆ ಇಲ್ಲವೆ, ನನ್ನಂತ ಚೆಂದದ ಹುಡುಗಿಯನ್ನು ಕಾರ್ಖಾನೆಗಳಿಗೆ ಕಳುಹಿಸಿ ಬಾಡುವಂತೆ ಮಾಡಲು ಮತ್ತು ಸಾಯಿಸಲು' ಎಂದು ಹಾಡುತ್ತಾ ಸಾಗಿದ್ದರು. ಆದರೆ, ಮತ್ತೆ ಕೆಲವೇ ದಿನಗಳಲ್ಲಿ ಕೆಲಸಕ್ಕೆ ಹಿಂದಿರುಗಬೇಕಾಯಿತು. 1844 ರಲ್ಲಿ ಸತತವಾದ ಪ್ರಯತ್ನಗಳಿಂದಾಗಿ, ಲಾವೆಲ್‌ನ ಮಹಿಳಾ ಕಾರ್ಮಿಕರ ಸುಧಾರಣೆಯ ಸಂಘವನ್ನು ಸ್ಥಾಪಿಸಲಾಯಿತು. ಹತ್ತು ಗಂಟೆಗಳ ಕೆಲಸದ ಕಾಲಾವಧಿಯು ಇದರ ಪ್ರಮುಖ ಬೇಡಿಕೆಯಾಗಿತ್ತು. ಈ ಸಂಘವು ಜವಳಿ ಉದ್ಯಮದಲ್ಲಿ ತೊಡಗಿದ್ದ ಕಾರ್ಮಿಕರ ಸ್ಥಿತಿಗಳನ್ನು ಉತ್ತಮಗೊಳಿಸುವಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿತ್ತು.

8 ಮಾರ್ಚ್ 1857

ಮಹಿಳಾ ಕಾರ್ಮಿಕರ ಒಂದು ಪ್ರಮುಖವಾದ ದಿನ, ಅಂತರ ರಾಷ್ಟ್ರೀಯ ಮಹಿಳಾ ದಿನದ ಅಸ್ತಿತ್ವಕ್ಕೆ ಬುನಾದಿಯಾದ ಹೋರಾಟವು 8ನೇ ಮಾರ್ಚ್ 1857ರಲ್ಲಿ ನಡೆಯಿತು. ಆ ದಿನದಂದು ಮೆರವಣಿಗೆಯಲ್ಲಿ ನ್ಯೂಯಾರ್ಕ್ ನಗರದ ಗಾರ್ಮೆಂಟ್ ನೌಕರರು ಹೊರಟು, ದಾರಿಗಟ್ಟಿ, ಉತ್ತಮವಾದ ಕೆಲಸದ ಸ್ಥಿತಿಗಳನ್ನು, ಹತ್ತು ಗಂಟೆಗಳ ಕೆಲಸದ ಕಾಲಾವಧಿ ಮತ್ತು ಮಹಿಳೆಯರಿಗೆ ಸಮನಾದ ಹಕ್ಕುಗಳ ಬೇಡಿಕೆಯನ್ನು ಎತ್ತಿದರು. ಪ್ರತಿಭಟನಾಕಾರರ ಮೇಲೆ ಪೋಲಿಸರ ದೌರ್ಜನ್ಯದಿಂದಾಗಿ ಹಲವರು ಗಾಯಗೊಂಡರು.

ಸಾರ್ವಜನಿಕ ಚಟುವಟಿಕೆಗಳಲ್ಲಿ, ಕಾರ್ಮಿಕ ಸಂಘಟನೆಯಲ್ಲಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆಯಿಂದಾಗಿ ಮಹಿಳೆಯರು ರಾಜಕೀಯ ನಿರ್ಬಂಧನೆಗಳನ್ನು ವಿರೋಧಿಸುವುದನ್ನು ಪ್ರಾರಂಭಿಸಿದ್ದಲ್ಲದೆ ಸಮಾನ ಹಕ್ಕುಗಳಿಗಾಗಿ ಹಕ್ಕು ಮಂಡಿಸಿದರು. ಯೂರೋಪ್ ಹಾಗು ಅಮೆರಿಕಾದಲ್ಲಿ ಮಹಿಳೆಯರು ಮತ ಚಲಾಯಿಸುವ ಹಕ್ಕಿಗಾಗಿ ಪ್ರಚಾರವನ್ನು ಪ್ರಾರಂಭಿಸಿದರು.

ನ್ಯೂಯಾರ್ಕ್‌ನಲ್ಲಿನ ಗಾರ್ಮೆಂಟ್‌ನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಸಾವಿರಾರು ಮಹಿಳೆಯರ ಪರಿಸ್ಥಿತಿಯು ದಾರುಣವಾಗಿತ್ತು. ಕಾರ್ಮಿಕರು 15 ವರ್ಷದ ಎಳೆ ವಯಸ್ಸಿನವರೂ, ಸಾಕಾಗುವಷ್ಟು ಬೆಳಕಿಲ್ಲದೆ, ಕಿವಿ ಕಿವುಡಾಗಿಸುವ ಯಂತ್ರೋಪಕರಣಗಳ ಸದ್ದಿನಲ್ಲಿ, ಹತ್ತಿಯ ಧೂಳು ಬೆರೆತ ಗಾಳಿಯಲ್ಲಿ ಕೆಲಸ ಮಾಡಬೇಕಾಗಿತ್ತು. ಬೆಂಕಿಯ ಅವಘಡಗಳೂ ಸರ್ವೇ ಸಾಮಾನ್ಯವಾಗಿ ನಡೆಯುವುದರಿಂದ ಹಲವಾರು ಸಾವುಗಳು ಉಂಟಾಗುತ್ತಿದ್ದುದಲ್ಲದೆ, ಹೆಚ್ಚಿನವರು ಅಂಗವಿಕಲತೆಗೆ ಒಳಗಾಗುತ್ತಿದ್ದರು. ಮಹಿಳಾ

ಪುಟ 4 ಕ್ಕೆ

ಸಂಪಾದಕೀಯ

ಬರ ಪರಿಹಾರ: ತ್ವರಿತ ನ್ಯಾಯ ಸಿಗಲಿ

ಬರದ ಭೀಕರ ಸಂಕಷ್ಟವನ್ನು ಎದುರಿಸುತ್ತಿರುವ ಕರ್ನಾಟಕವು ಭಾರತ ಸರ್ಕಾರ ನೀಡಬೇಕಾದ ಪರಿಹಾರವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ನಿರ್ದೇಶನ ನೀಡುವಂತೆ ಭಾರತದ ಸರ್ವೋಚ್ಛ ನ್ಯಾಯಾಲಯವನ್ನು ಕೋರಿ ಮನವಿಯ ಅರ್ಜಿ ಸಲ್ಲಿರುವುದು ಸನ್ನಿವೇಶದ ಗಂಭೀರತೆಯನ್ನು ಎತ್ತಿ ತೋರುತ್ತದೆ. ಬರದ ಪರಿಸ್ಥಿತಿಯ ಕುರಿತು ವಿವರವಾಗಿ ಅಧ್ಯಯನ ಮಾಡಿರುವ ಕೇಂದ್ರ ಸರ್ಕಾರ ತಾನು ಅಂದಾಜಿಸಿದಂತೆಯೂ ಕೂಡ ಹಣವನ್ನು ಬಿಡುಗಡೆ ಮಾಡಲಿಲ್ಲ. ಈ ಕುರಿತು ಹಲವು ಬಾರಿ ಕೇಂದ್ರದ ಮಂತ್ರಿಗಳನ್ನು, ಪ್ರಧಾನಮಂತ್ರಿಯನ್ನು ಕರ್ನಾಟಕ ಸರ್ಕಾರದ ಮಂತ್ರಿಗಳು ಮುಖ್ಯಮಂತ್ರಿಗಳು, ನಿಯೋಗಗಳು ಕಂಡು ಮನವಿ ಮಾಡಿದರೂ ಅದನ್ನು ತೀರಾ ಕಡೆಗಣಿಸಿದೆ. ಪರಿಹಾರ ನೀಡಲು ವಿಳಂಬಿಸಿದೆ. ರಾಜ್ಯದಲ್ಲಿ ಕುಡಿಯಲು, ಕನಿಷ್ಠ ಅಗತ್ಯಗಳಿಗೆ ನೀರು ಬಳಸಲು ಕೂಡ ತತ್ವಾರವಿದೆ. ದನ ಕರುಗಳಿಗೆ ನೀರು ಮೇವು ಸಿಗುತ್ತಿಲ್ಲ. ಎಲ್ಲ ಜಿಲ್ಲೆಗಳಲ್ಲೂ ವಾತಾವರಣದಲ್ಲಿ ಬಿಸಿಲಿನ ತಾಪಮಾನ ಅತ್ಯಧಿಕವಿದೆ. ಈ ಅತ್ಯಂತ ಕಠಿಣ, ಕಡು ವಾಸ್ತವಿಕ ಪರಿಸ್ಥಿತಿಯನ್ನು ಮುಕ್ತ ಮನಸ್ಸಿನಿಂದ ಪರಿಗಣಿಸಲು ಭಾರತ ಸರ್ಕಾರ ನಿರಾಕರಿಸುತ್ತಿದೆ. ಜನ ಮತ್ತು ಜಾನುವಾರುಗಳನ್ನು ಸಂರಕ್ಷಿಸಬೇಕಾದ ಆದ್ಯ ಹೊಣೆಗಾರಿಕೆಗಿಂತ ಕ್ಷುಲ್ಲಕ ಒಣ ರಾಜಕೀಯವನ್ನು ಮಾಡುವಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ್ತು ಮೋದಿ ಪರಿವಾರ ಪ್ರಯತ್ನಿಸುತ್ತಿದೆ. ಇಂಥ ಸನ್ನಿವೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ತಮ್ಮ ಅಹವಾಲನ್ನು ಮಂಡಿಸಲು ಸಿದ್ದರಾಮಯ್ಯನವರು ಮುಂದಾಗಿರುವುದು ಇಂತಹ ಅಸಹಾಯಕ ಸ್ಥಿತಿಯಲ್ಲಿಯೇ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಕಳೆದ ವರ್ಷದಲ್ಲಿನ ಮಳೆ ಕೊರತೆಯಿಂದಾಗಿ 196 ತಾಲೂಕುಗಳು ಅತಿಯಾದ ಸಂಕಷ್ಟಕ್ಕೆ ಸಿಲುಕಿವೆ. ಒಟ್ಟು 240 ತಾಲೂಕುಗಳಲ್ಲಿ ಬರ ವ್ಯಾಪಿಸಿದೆ.

ಒಟ್ಟು ಸುಮಾರು 48 ಲಕ್ಷ ಹೆಕ್ಟರ್ ಬೆಳೆ ಹಾನಿಗೊಳಗಾಗಿದೆ. ರೈತರು ಮತ್ತು ಕೃಷಿ ಆಧಾರಿತ ಸಮುದಾಯಗಳನ್ನು ಒಳಗೊಂಡು ವಿವಿಧ ವಿಭಾಗಗಳು ತೀವ್ರ ಕಷ್ಟದಲ್ಲಿ ನರಳುತ್ತಿವೆ. ಬೆಂಗಳೂರಿನಂತಹ ಮಹಾನಗರಗಳನ್ನು ಒಳಗೊಂಡು ಅನೇಕ ನಗರಗಳಲ್ಲಿ ನೀರಿನ ತೀವ್ರ ಕೊರತೆಯಿಂದ ತಲ್ಲಣಿಸುತ್ತಿದ್ದಾರೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ 18,171 ಕೋಟಿ ರೂಪಾಯಿಗಳನ್ನು ಪರಿಹಾರ ನೀಡಬೇಕೆಂದು ರಾಜ್ಯ ಸರ್ಕಾರವು ಒಕ್ಕೂಟ ಸರ್ಕಾರಕ್ಕೆ ಪದೇ ಪದೇ ಮನವಿ ಮಾಡಿದರೂ ಭಾರತದ ಸರಕಾರ ಕಿಂಚಿತ್ತೂ ನೆರವಿನ ಹಸ್ತ ಚಾಚಲಿಲ್ಲ.

ಹಾಗೆಯೇ ಬರ ಪೀಡಿತ ಪ್ರದೇಶಗಳಲ್ಲಿ ಸಮೀಕ್ಷೆ ಮಾಡುವಾಗ, ಅನುದಾನವನ್ನು ನಿಗದಿ ಮಾಡುವಾಗಲೂ ಈಗಿರುವ ಇರುವ ಮಾನದಂಡಗಳು ರಾಜ್ಯಗಳ ನೆರವಿಗೆ ಬರುವಂತಿಲ್ಲ. ಅವುಗಳನ್ನು ಬದಲಾಯಿಸಬೇಕು ಎನ್ನುವ ರಾಜ್ಯಗಳ ಆಗ್ರಹಕ್ಕೂ ಕೇಂದ್ರ ಕಿವಿ ಕೊಡುತ್ತಿಲ್ಲ. ಹೀಗಾಗಿ ನಿಯಮಗಳ ಕುಣಿಕೆಯಲ್ಲಿಯೇ ಸಿಕ್ಕಿ ಬೀಳುವ ಸ್ಥಿತಿ ಮುಂದುವರಿದಿದೆ.

ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯಗಳು ಸಂಕಷ್ಟಕ್ಕೆ ನೈಸರ್ಗಿಕ ವಿಕೋಪಗಳಿಂದ ಸಿಲುಕಿರುವಾಗ ಉಂಟಾಗಬಹುದಾದ ಸಮಸ್ಯೆಗಳ ಗಹನತೆಯನ್ನು ಗಮನದಲ್ಲಿರಿಸಿ ರಾಷ್ಟ್ರೀಯ ವಿಪತ್ತು ನಿಧಿ ಮತ್ತು ರಾಜ್ಯ ವಿಪತ್ತು ನಿಧಿಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಲಾಗಿದೆ. ಈ ನಿಧಿಗೆ ಸಂಪನ್ಮೂಲಗಳು ಆಯಾ ರಾಜ್ಯಗಳ ಜನತೆಯ ತೆರಿಗೆ ಹಣದಿಂದಲೇ ಸಂದಾಯವಾಗಿರುತ್ತದೆ ಎನ್ನುವುದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹೀಗಾಗಿ ಜನತೆ ಸಂಕಷ್ಟದಲ್ಲಿರುವಾಗ ಒಕ್ಕೂಟದ ಸರ್ಕಾರ ರಾಜ್ಯಗಳಿಗೆ ಕೂಡಲೇ ನೆರವಿನ ಹಸ್ತವನ್ನ ಚಾಚುವುದು ಅದರ ಆದ್ಯ ಕರ್ತವ್ಯ.

ಆದರೆ ಇದನ್ನು ಕಡೆಗಣಿಸಿ ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳಿಗೆ ಹಣಕಾಸಿನ ನೆರವು ನೀಡದೆ ಆರ್ಥಿಕ ದಿಗ್ಬಂಧನವನ್ನು ವಿಧಿಸಿ ಜನತೆ ತೀವ್ರ ಅತೃಪ್ತಿಗೊಂಡು ಆ ಸರ್ಕಾರದ ವಿರುದ್ಧ ತಿರುಗಿ ಬೀಳುವಂತಹ ಸನ್ನಿವೇಶ ಸೃಷ್ಟಿಸಲು, ದುರ್ಲಾಭ ಪಡೆಯಲು ಪ್ರಯತ್ನಿಸುವುದೇ ಅಮಾನವೀಯ. ದೇಶದ ಜನತೆ ತೆರಿಗೆ ಇತ್ಯಾದಿಗಳ ಮೂಲಕ ನೀಡುವ ಎಲ್ಲ ಸಂಪನ್ಮೂಲವನ್ನು ತಾನೇ ಕಬಳಿಸಬೇಕು ಎನ್ನುವ ಕಾರ್ಪೋರೇಟ್ ಚಿಂತನೆ ಅತ್ಯಂತ ಜನದ್ರೋಹದ್ದು, ಪ್ರಜಾಪ್ರಭುತ್ವ ವಿರೋಧಿಯೂ ಆಗಿದೆ. ಇಂತಹ ದುರ್ನಡತೆಯನ್ನು ಜನತೆ ಎಂದು ಕ್ಷಮಿಸಬಾರದು.

ಕರ್ನಾಟಕ ಸರ್ಕಾರ ಸಂವಿಧಾನದ 32ನೇ ವಿಧಿಯನ್ನು ಅನುಸರಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಮಾಡಿರುವುದು ನ್ಯಾಯ ಸಮ್ಮತವಾದದ್ದು. ತಾಳ್ಮೆಯಿಂದ ಕಾದಿದ್ದ ಕರ್ನಾಟಕ ಸರ್ಕಾರ ಕೊನೆಗೆ ಈ ಹಾದಿಯನ್ನು ಅನುಸರಿಸಬೇಕಾಗಿ ಬಂತು. ಹಾಗೆಯೇ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿ ನ್ಯಾಯದಾನಕ್ಕೆ ಮನವಿ ಮಾಡಿರುವ ಕರ್ನಾಟಕ ಸರ್ಕಾರದ ನಡೆ ಮಹತ್ವದ ಹೆಜ್ಜೆಯಾಗಿದೆ.

ಹೀಗೆ ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರುವ ವಿಷಯದಲ್ಲಿ ಕರ್ನಾಟಕ ಪ್ರಥಮವೇನಲ್ಲ. ಕೇರಳ ಎಲ್.ಡಿ.ಎಫ್. ಸರ್ಕಾರವು ರಾಜ್ಯದ ಹಕ್ಕುಗಳಿಗಾಗಿ ಸುಪ್ರಿಂಕೋರ್ಟ್‌ಗೆ ಮೊರೆ ಹೋಗಿದೆ. ಸಂಪನ್ಮೂಲಗಳ ಹಂಚಿಕೆ, ಅಲ್ಲದೇ ಕೇರಳದ ವಿಧಾನಸಭೆ ಅಂಗೀಕರಿಸಿದ 4 ಮಸೂದೆಗಳನ್ನು ರಾಷ್ಟ್ರಪತಿಯವರ ಅಂಕಿತಕ್ಕೆ ಕಳಿಸದೇ ತಮ್ಮಲ್ಲೇ ಉಳಿಸಿಕೊಂಡಿದ್ದ ರಾಜ್ಯಪಾಲರ ವರ್ತನೆಯನ್ನು ಪ್ರಶ್ನಿಸಿ ಮುಂದಿನ ಕ್ರಮಕ್ಕಾಗಿ ಪಿಣರಾಯಿ ವಿಜಯನ್ ನೇತೃತ್ವ ದ ಕೇರಳ ಸರ್ಕಾರ ನ್ಯಾಯಾಲಯದ ಮೆಟ್ಟಿಲೇರಿದೆ.

ಜನತೆಯ ಬದುಕು, ಭಾವನೆಗಳು ಅತ್ಯಂತ ತೀವ್ರ ತಲ್ಲಣದಲ್ಲಿರುವಾಗ ಆಡಳಿತ, ವಿರೋಧ ಪಕ್ಷಗಳೆಂಬ ಬೇಧವಿಲ್ಲದೆ ಪರಿಹಾರ ಒದಗಿಸಲು ಪ್ರಯತ್ನಿಸಬೇಕು. ಆದರೆ ಬಿಜೆಪಿ ಪಕ್ಷ ಈ ವಿಷಯದಲ್ಲಿ ಕೇವಲ ಕ್ಷುಲ್ಲಕ ರಾಜಕೀಯವನ್ನೇ ಮಾಡುತ್ತಾ ಬಂದಿದೆ. ಪ್ರತಿ ಬಾರಿಯೂ ಕೇಂದ್ರಕ್ಕೆ ರಾಜ್ಯ ಸರ್ಕಾರ ನೆರವು ನೀಡಲು ಕೋರಿದಾಗೆಲ್ಲ ರಾಜ್ಯ ಸರ್ಕಾರದ ಮೇಲೆಯೇ ದಾಳಿಯನ್ನು ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರ ತನ್ನ ಪಾಲನ್ನು ವಿನಿಯೋಗಿಸಿರುವುದನ್ನೂ ಬಿಜೆಪಿ ಮರೆ ಮಾಚುತ್ತಿದೆ.

ಪುಟ 15 ಕ್ಕೆ

ಜನಾರ್ದನರೆಡ್ಡಿ ಬಿಜೆಪಿಗೆ ಆನೆ ಬಲವೇ? ಭಾರವೇ?

ಈ ವಾರ

ಎಸ್.ವೈ.ಗುರುಶಾಂತ್

ಅನ್ನ ಹಳಸಿತ್ತು, ನಾಯಿ ಹಸಿದಿತ್ತು ಎನ್ನುವ ಗಾದೆ ಮಾತು ಆಗಾಗ ಅರ್ಥವಂತಿಕೆಯನ್ನು ಪಡೆಯುತ್ತಲೇ ಇರುತ್ತದೆ. ಗಣಿಗಳ್ಳ ಆರೋಪಿ, ಗಂಗಾವತಿ ಶಾಸಕ ಗಾಲಿ ಜನಾರ್ದನರೆಡ್ಡಿ ಮತ್ತೇ ಬಿಜೆಪಿ ಪಕ್ಷವನ್ನು ಸೇರ್ಪಡೆಯಾಗಿದ್ದಾರೆ. ಬಿಜೆಪಿ ಸಿದ್ಧಾಂತದ ರಕ್ತ ಯಾವಾಗಲೂ ಮೈಯ್ಯಲ್ಲಿ ಹರಿಯುತ್ತಿರುವುದರಿಂದ ಇವರಿಗೆ 'ಇ.ಡಿ.' ಸಿ.ಬಿ.ಐ. ನಂತಹ ಬೆದರಿಕೆಯ ತನಿಖಾ ಸಂಸ್ಥೆಗಳ ಭಯ ಇದೆ ಎಂದು ಹೇಳಲು ಆಗದು! ಮೇಲಾಗಿ ಬಿಜೆಪಿ–ಸಂಘಪರಿವಾರ ಎಂಬ' ವಾಷಿಂಗ್ ಮಶೀನಿನಲ್ಲಿ ಮುಳುಗಿ ಎದ್ದು, ಕಮಲ ಮಾಲಾಧಾರಿಯೂ ಆಗಿರುವುದರಿಂದಲೂ ಅವರ ಮೈ, ವ್ಯಕ್ತಿತ್ವಕ್ಕೆ ಅಂಟಿದ್ದ ಕಳಂಕದ ಕೊಳೆ ತಾನೇ ತಾನಾಗಿ ತೊಳೆದು ಹೋಗಿರುತ್ತದೆ!

ವಿಚಿತ್ರ ಎಂದರೆ ಇದೇ ಗಾ.ಜ.ರೆಡ್ಡಿ ಇತ್ತೀಚೆಗೆ ವಿಧಾನಸಭೆಯಿಂದ ರಾಜ್ಯ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿದ್ದರು. ಈ 'ಸೆಕ್ಯುಲರ್' ರೆಡ್ಡಿ ತನ್ನ ಕ್ಷೇತ್ರದಲ್ಲಿಯೇ ಬರುವ 'ಅಂಜನಾದ್ರಿ ಅಭಿವೃದ್ಧಿ'ಗೆ 100 ಕೋಟಿ ಹಣವನ್ನು ಸಿದ್ಧರಾಮಯ್ಯನವರ ಬಜೆಟ್ ನಿಂದ ಪಡೆಯುವಲ್ಲಿ ಯಶಸ್ವಿಯೂ ಆಗಿದ್ದರು. ಭಾರತ ಸರಕಾರ ಆಗಲೇ 500 ಕೋಟಿಯನ್ನು ಅಭಿವೃದ್ದಿಗೆ ಹಂಚಿದೆ.

ಈಗ ಮೋದಿಯವರನ್ನು ಪ್ರಧಾನಿ ಮಾಡಿದ ಮೇಲೆ ಮತ್ತಷ್ಟೂ ಅಭಿವೃದ್ದಿ ಗಂಗಾವತಿಗೆ ಹರಿಯಬಹುದು! ರೆಡ್ಡಿಯವರು ಅಭಿವೃದ್ದಿಯ ಹರಿಕಾರರೂ ಆಗಬಹುದು!

ಜನಾರ್ಧನರೆಡ್ಡಿಯವರು ಬಿಜೆಪಿ ಸೇರ್ಪಡೆಯಿಂದ ಬಿಜೆಪಿ ಪಕ್ಷಕ್ಕೆ, ತಮಗೂ ಆನೆಬಲ ಬಂದಂತಾಗಿದೆ ಎಂದು ಒಂದು ಕಾಲದ ಆಪ್ತಮಿತ್ರ ಬಿ.ಶ್ರೀರಾಮುಲು ಹೇಳಿದ್ದಾರೆ. ಬಳ್ಳಾರಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಅವರು ಈ ಅರಂಭಿಕ ಸ್ವಾಗತ ಹೇಳದೇ ವಿಧಿ ಇಲ್ಲ ಕೂಡ. ಒಂದು ಕಾಲದಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರಿಲ್ಲ, ಎರಡು ದೇಹ ಒಂದೇ ವ್ಯಕ್ತಿತ್ವ ಎನ್ನುವಂತಿದ್ದ ಆ ಇಬ್ಬರು 'ಕುಚುಕೋ' ಗೆಳೆಯರು ಹಿಂದಿನಂತೆ ಈಗಿಲ್ಲ ಎಂಬುದೂ ಅಷ್ಟೇ ಸತ್ಯ. ಈ ಜೀವದ ಗೆಳೆಯರು ಪರಸ್ಪರರ ಮಗಳ ಮದುವೆಗೆ ಒಬ್ಬರನ್ನೊಬ್ನರು ಆಹ್ವಾನಿಸಲಿಲ್ಲ, ಹೋಗಲಿಲ್ಲ ಎನ್ನುವುದು ಆ ಸಂಬಂಧ ಎಷ್ಟು ಹಳಸಿದೆ ಎನ್ನುವುದನ್ನು ಎತ್ತಿ ತೋರಿಸುತ್ತದೆ!

ಈ ವ್ಯತ್ಯಾಸ, ಭಿನ್ನಾಭಿಪ್ರಾಯಗಳು ಅವರವರು ಹೇಳಿಕೊಳ್ಳುತ್ತಿರುವಂತೆ ರಾಜಕೀಯ ಭಿನ್ನಾಭಿಪ್ರಾಯಗಳು ಅಥವಾ ಪಕ್ಷ ಬಿಟ್ಟು ಬೇರೆಯಾದ ಕಾರಣದವು ಎಂದು ಹೇಳುವುದು, ಹಾಗೆಂದು ನಂಬುವುದು ಕಷ್ಟಕರ ಮಾತ್ರವಲ್ಲ ಮೂರ್ಖತನವೂ ಕೂಡ. ಒಂದೆಡೆ ಹಗರಣಗಳು, ಕೇಸುಗಳುಗಳ ಕುಣಿಕೆಯಿಂದ ಜೈಲು, ಗಡಿಪಾರು, ರಾಜಕೀಯ ವನವಾಸ ಅನುಭವಿಸುತ್ತಿದ್ದ ಗಾ.ಜ.ರೆಡ್ಡಿ, ಆದರೆ ಇನ್ನೊಂದೆಡೆ ಸಚಿವನಾಗಿ, ಕ್ಷೇತ್ರ ಬದಲಾಯಿಸಿ ಅಸೆಂಬ್ಲಿ ಅಭ್ಯರ್ಥಿಯಾಗಿ, ಸೋತರೂ ಈಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಮೆರೆಯುತ್ತಿದ್ದ ಶ್ರೀರಾಮುಲು ನಡುವೆ ಅಪಾರ ಸಂಪನ್ಮೂಲ (ಅ)ವ್ಯವಹಾರಗಳ ಅಂಶಗಳನ್ನು ತಳ್ಳಿ ಹಾಕುವುದು ಸಾಧ್ಯವಿಲ್ಲ. ಜನಾರ್ಧನರೆಡ್ಡಿ ಮರು ಸೇರ್ಪಡೆಯ ಬಗ್ಗೆ ಮಾಧ್ಯಮಗಳ ಎದುರು ತೋರ್ಪಡಿಸಿದಂತೆ ಅವರ ಸಹೋದರ ಗಾಲಿ ಸೋಮಶೇಖರೆಡ್ಡಿ ಯವರ ನಗುವಿನ ಸ್ವಾಗತ ಸಹೋದರರ ನಡುವಿನ ಸಂಬಂಧಗಳ ನಡುವಿನ ಬಿರುಕು ಮುಚ್ಚಿದ, ಮುಗಿದ ಅಧ್ಯಾಯವೇನಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರದಿಂದ ಸ್ಪರ್ದಿಸಿದ್ದ ಬಿಜೆಪಿ ಅಭ್ಯರ್ಥಿ ಗಾ.ಸೋ.ರೆಡ್ಡಿಯ ವಿರುದ್ದ ಗಾ.ಜನಾ.ರೆ. ಪತ್ನಿ ಅರುಣ ಅವರನ್ನು ಕಣಕ್ಕಿಳಿಸಿದ್ದನ್ನು ಯಾರೂ ಮರೆತಿಲ್ಲ. ಅಂದರೆ ಜನಾರ್ಧನರೆಡ್ಡಿ ಮತ್ತು ಗಾಲಿ ಕುಟುಂಬ, ಅವರ ಮಿತ್ರ ಪರಿವಾರದ ನಡುವಿನ ಭಿನ್ನಾಭಿಪ್ರಾಯಗಳು ಕೇವಲ ಭಿನ್ನ ಪಕ್ಷಗಳಲ್ಲಿ ಅವರು ಇರುವುದರಿಂದಲೇ ಎಂದು ಭಾವಿಸಬೇಕಿಲ್ಲ.

ಇನ್ನು ಜನಾರ್ಧನರೆಡ್ಡಿ ಸೇರ್ಪಡೆಯಿಂದ ಬಿಜೆಪಿಗೆ ನಿಜಕ್ಕೂ ಹೆಚ್ಚಿನ ಬಲ ಬಂದಿದೆಯೇ ಎಂದರೆ ಈ ಹಂತದಲ್ಲಿ ನಿಖರವಾಗಿ ಹೇಳುವುದು ಕಷ್ಟ. ಕೊಪ್ಪಳ ಕ್ಷೇತ್ರದಲ್ಲಿ ಒಂದಿಷ್ಟು ಲಾಭ ಬಿಜೆಪಿಗೆ ಸಿಗಬಹುದು. ಬಳ್ಳಾರಿಯಲ್ಲಿ ಅಲ್ಪ ಆಗಬಹುದಾದರೂ ಸುಲಭದಲ್ಲಿ ಬಿಜೆಪಿ ಶ್ರೀರಾಮುಲು ಅವರನ್ನು ಗೆಲ್ಲಿಸಿಕೊಳ್ಳಬಹುದು ಎನ್ನಲಾಗುವುದಿಲ್ಲ.

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಹೆಚ್ಚಿನ ಶಾಸಕರು, ಸಂಘಟನೆ, ಸಂಪನ್ಮೂಲಗಳ ಬಲದಲ್ಲಿ ಕಾಂಗ್ರೆಸ್ ಒಂದು ತೂಕ ಅಧಿಕವೇ ಆಗಿದೆ. ಬಳ್ಳಾರಿ ಲೋ.ಸ. ಎಸ್.ಟಿ.ಮೀಸಲು ಕ್ಷೇತ್ರ ವ್ಯಾಪ್ತಿಯಲ್ಲಿ 8 ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಇದರಲ್ಲಿ 6 ಶಾಸಕರು ಕಾಂಗ್ರೆಸ್ ಪಕ್ಷದವರು. ಇದರಲ್ಲಿ ಹೊಸಪೇಟೆ, ಬಳ್ಳಾರಿ ಸಾಮಾನ್ಯ ಕ್ಷೇತ್ರಗಳು. ಒಂದು ಬಿಜೆಪಿ, ಒಂದು ಜೆ.ಡಿ.ಎಸ್. ಈ ಜಿದ್ದಾ ಜಿದ್ದಿಯಲ್ಲಿ ಸಂಪನ್ಮೂಲ ಕ್ರೋಢೀಕರಣ, ಎಲ್ಲರ ಸಮಭಾಗಿತ್ವ ಕಾಂಗ್ರೆಸ್ ಗೂ, ಅದರಂತೆ ಬಿಜೆಪಿಗೂ ಅತೀ ಅಗತ್ಯ. ಆ ಕ್ರೋಢೀಕರಣದ ಶಕ್ತಿಯೂ ಕಾಂಗ್ರೆಸ್ ಗೆ ಇದೆ. ಎಲ್ಲಾ ನಾಯಕರಲ್ಲಿ ಇನ್ನಷ್ಟು ಸಮನ್ವಯದ ಅಗತ್ಯವಿದೆ. ಬಿಜೆಪಿಯ ಹಾಲಿ ಸ್ಥಾನವನ್ನು ಕಾಂಗ್ರೆಸ್ ಮತ್ತೇ ಮರಳಿ ಪಡೆಯಬೇಕಿದೆ. ಅದರ ಸಾಧ್ಯತೆಗಳೂ ಇದ್ದೇ ಇವೆ.

ಹೀಗಾಗಿಯೇ ಸಂಡೂರು ಶಾಸಕ ತುಕರಾಂ ಅವರನ್ನು ಹಾರ್ಡ್ ಬಾರ್ಗೆನ್ ಬಳಿಕ ಕಣಕ್ಕೆ ಕಾಂಗ್ರೆಸ್ ಇಳಿಸಿದೆ. ಹಿಂದಿನಂತೆ ಈಗಲೂ ಚುನಾವಣಾ ಕ್ಷೇತ್ರದಲ್ಲಿ ಜಾತಿಗಳ ಬಲ ಸಮೀಕರಣವೇ ಪ್ರಧಾನ ಆಗಬಹುದು. ಇಬ್ಬರೂ ಎಸ್.ಟಿ.– ವಾಲ್ಮೀಕಿ ಜನಾಂಗಕ್ಕೆ ಸೇರಿದವರಾದರೂ ಇಲ್ಲಿ ನ್ಯಾಸ ಬೇಡರು, ಊರ ಬೇಡರು ಎಂಬ ವಿಭಜನೆಯೂ ಸೂಕ್ಷ್ಮವಾಗಿ ಇದೆ. ಈಗ ಹೇಳಲಾಗುತ್ತಿರುವಂತೆ ಶ್ರೀರಾಮುಲು ಎಸ್.ಟಿ. ನ್ಯಾಸ ಬೇಡರಲ್ಲಿ ಹೆಚ್ಚಿನ ಓಟು ಪಡೆಯಲು ಯತ್ನಿಸುತ್ತಿರುವಂತೆ ಮರೆಲುಗ್ಯೆ ಪಡೆಯಬಹುದೇ? ಲಿಂಗಾಯತರು ಯಡ್ಯೂರಪ್ಪ ನವರಿಗೇ ಸಾಲಿಡ್ ಬೆಂಬಲ ನೀಡುತ್ತಾರೆಯೇ? ಹೀಗಾದರೆ ಕಾಂಗ್ರೆಸ್ ನ ಜಾತಿ ಸಮೀಕರಣದ ಸೂತ್ರ ಹೇಗಿರುತ್ತದೆ? ಕುರುಬರು, ಕೆಲವು ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರ ಮತಗಳ ಕ್ರೋಢೀಕರಣ ಆಗಲಿದೆಯೇ? ಇವೆಲ್ಲವುಗಳ ಜೊತೆ ಅಥವಾ ಆಚೆ ಗಣಿ ಲಾಬಿಯ ಪಾತ್ರ ಬಹಳ ಮಹತ್ವವನ್ನು ವಹಿಸಲಿದೆ. ಆ ಮಟ್ಟಿನಲ್ಲಿ ಈ ಲಾಬಿಗಳ ಹಿಡಿತವಿನ್ನೂ ಸಡಿಲಿಸಿಲ್ಲ.

ಕಾಂಗ್ರೆಸ್ ಪಕ್ಷವು ಅಭ್ಯರ್ಥಿ ಆಯ್ಕೆಯ ಸಂಧಾನ ಸೂತ್ರದಲ್ಲಿ ಇರುವಾಗ ಶ್ರೀರಾಮುಲು ಬಹುತೇಕ ಒಂದು ಸುತ್ತಿನ ಸಂಪರ್ಕ ಸಿದ್ಧತೆ, ಪ್ರಚಾರ ಮಾಡಿಯಾಗಿತ್ತು. ಈಗ ಕಾಂಗ್ರೆಸ್

ಪುಟ 15 ಕ್ಕೆ

ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಭವ್ಯ ಇತಿಹಾಸ ಮತ್ತು ಪರಂಪರೆ.......

ಪುಟ 2 ರಿಂದ

ಕಾರ್ಮಿಕರಿಗೆ ಮಾತನಾಡಿದರೆ, ನಕ್ಕರೆ, ಹಾಡಿದರೆ ಅಥವಾ ಬಟ್ಟೆಗಳ ಮೇಲೆ ಯಂತ್ರಕ್ಕೆ ಬಳಸುವ ತೈಲದ ಕಲೆಗಳಿದ್ದರೆ, ಹೊಲಿಗೆ ದೊಡ್ಡದಾದರೆ ಅಥವಾ ಚಿಕ್ಕದಾದರೆ ವಾಸ್ತವವಾಗಿ ಯಾವುದೇ ಕಾರಣಕ್ಕಾದರೂ ದಂಡ ವಿಧಿಸಲಾಗುತ್ತಿತ್ತು. ಅವರನ್ನು ಬಲವಂತವಾಗಿ ಅಧಿಕಾವಧಿಗಳಲ್ಲಿ ಯಾವುದೇ ಹೆಚ್ಚುವರಿ ಗಂಟೆಗಳಿಗೆ (ಓ.ಟಿ.) ಭತ್ಯೆ ನೀಡದೆ ಕೆಲಸ ಮಾಡಿಸಿಕೊಳ್ಳಲಾಗುತ್ತಿತ್ತು. ಮಹಿಳೆಯರು ಶೌಚಾಲಯವನ್ನು ಉಪಯೋಗಿಸಲು ಕಟ್ಟಡದಿಂದ ಹೊರ ಹೋಗಬೇಕಾಗಿದುದ್ದರಿಂದ, 'ಕೆಲಸದಲ್ಲಿನ ಅಡಚಣೆ'ಯನ್ನು ತಡೆಯಲು ವ್ಯವಸ್ಥಾಪಕರು ಹೊರಗೆ ಹೋಗುವ ಬಾಗಿಲಿಗೆ ಬೀಗ ಹಾಕಿ ಮೇಲ್ವಿಚಾರಕರ ಬಳಿ ನೀಡುತ್ತಿದ್ದರು.

ಅಮೆರಿಕಾದ ಇತಿಹಾಸದಲ್ಲಿಯೇ ಗಾರ್ಮೆಂಟ್ ಕಾರ್ಮಿಕರು ಅತಿ ವಿಖ್ಯಾತವಾದ ಸಂಘಗಳನ್ನು ಸ್ಥಾಪಿಸಿದರು, ಇದರಲ್ಲಿ ಇಂಟರ್ ನ್ಯಾಷನಲ್ ಲೇಡೀಸ್ ಗಾರ್ಮೆಂಟ್ ಯೂನಿಯನ್ ಒಳಗೊಂಡಿದೆ. ದಿ ಶರ್ಟ್ ವೈಸ್ಟ್ (ಮಹಿಳೆಯರ ಕುಪ್ಪಸ) ತಯಾರಿಸುವ ಲೀಸರ್ಸನ್ ಮತ್ತು ಕಂಪನಿ. ಹಾಗು ಟ್ರೈಯಾಂಗಲ್ ವೈಸ್ಟ್ ಕಂಪನಿ, ಎರಡೂ ನ್ಯೂಯಾರ್ಕ್‌ನ ಕುಖ್ಯಾತ ಸಂಸ್ಥೆಗಳು. ಇದರಲ್ಲಿನ ಕಾರ್ಮಿಕರು ತಮ್ಮ ವೇತನದಲ್ಲಿ ಪರಿಷ್ಕರಣೆಯನ್ನು ಮತ್ತು ಉತ್ತಮ ಕೆಲಸದ ಸ್ಥಿತಿಗಳ ಬೇಡಿಕೆಗಳಿಗಾಗಿ ಸರಣಿ ಮುಷ್ಕರಗಳನ್ನು ಪ್ರಾರಂಭಿಸಿದರು. ಈ ಮುಷ್ಕರಗಳು 1909ರ '20000 ರ ದಂಗೆ'ಯಲ್ಲಿ ಅಂತ್ಯಗೊಂಡಿತು. ಇದು ಮಹಿಳೆಯರು ಮುಷ್ಕರ ಸಂಘಟಿಸುವುದರಲ್ಲಿ ಹಾಗೂ ದೀರ್ಘಾವಧಿಯ ಕಾರ್ಮಿಕ ಸಂಘಟನೆಯ ಹೋರಾಟವನ್ನು ನಡೆಸುವಲ್ಲಿ ಅಸಮರ್ಥರು ಮತ್ತು ಕಾರ್ಮಿಕ ಸಂಘದ ಮುಂದಾಳತ್ವವು ಪುರುಷರ ಕೆಲಸ ಎಂಬ ವಾದವನ್ನು ಧೃಡವಾಗಿ ಕೊನೆಗೊಳಿಸಿತು.

16 ರಿಂದ 25 ವರ್ಷ ವಯಸುಳ್ಳ ಯುವ ಮಹಿಳಾ ಕಾರ್ಮಿಕರು ಕೊರೆಯುವ ಚಳಿಯಲ್ಲಿ 13 ವಾರಗಳ ಕಾಲ ಕಾರ್ಖಾನೆಯ ದ್ವಾರದಲ್ಲಿ ದಿನವೂ ಮುತ್ತಿಗೆ ಹಾಕಿದರು. ಮಾಲೀಕರು ರಾಜಕೀಯವಾದ ಒತ್ತಡಗಳನ್ನು ತರುವುದಲ್ಲದೇ, ಬಾಡಿಗೆಯ ಗೂಂಡಾಗಳನ್ನು ಉಪಯೋಗಿಸಿಕೊಂಡು ಮುಷ್ಕರ ನಿರತ ಮಹಿಳೆಯರ ಮೇಲೆ ಹಲ್ಲೆ ನಡೆಸಿದರು. ದಿನವೂ ಪೊಲೀಸರು ಮಹಿಳೆಯರನ್ನು ಚಚ್ಚುತ್ತಿದ್ದರು ಮತ್ತು ಬಂಧನಕ್ಕೆ ಒಳಪಡಿಸುತ್ತಿದ್ದರು. ನ್ಯಾಯಾಧೀಶರು ದಂಡ ವಿಧಿಸಿ ಅವರನ್ನು ಕಾರ್ಮಿಕ ಶಿಬಿರಗಳಿಗೆ ಕಳುಹಿಸುತ್ತಿದ್ದರು. ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಖಾನೆಗಳು ಮುಷ್ಕರನಿರತರೊಂದಿಗೆ ರಾಜಿ ಮಾಡಿಕೊಂಡರು. ದೊಡ್ಡ ಕಾರ್ಖಾನೆಗಳವರು ವೇತನ ಹೆಚ್ಚಿಸಲು ಮತ್ತು ಕೆಲಸದ ಅವಧಿಯನ್ನು ತಗ್ಗಿಸಲು ತಯಾರಾದರೆ ಹೊರತು ನೌಕರರ ಕಾರ್ಮಿಕ ಸಂಘಟನೆಯ ಹಕ್ಕನ್ನು ಗುರುತಿಸಲು ನಿರಾಕರಿಸಿದರು.



ಮಹಿಳೆಯರ ಟ್ರಯಾಂಗಲ್ ಶರ್ಟ್‌ವೈಸ್ಟ್ ಕಾರ್ಖಾನೆ ಬೆಂಕಿ ದುರಂತದ ವಿರುದ್ಧ ಪ್ರತಿಭಟನೆ–1911

'ಕೆಲಸ ಮಾಡಿ ಉಪವಾಸವಿರುವುದಕ್ಕಿಂತ ಹೋರಾಟ ಮಾಡಿ ಉಪವಾಸವಿರುವುದೇ ಮೇಲು'

ಮಹಿಳೆಯರ ಮೇಲಿನ ದಬ್ಬಾಳಿಕೆ ಮತ್ತು ಅಸಮಾನತೆಯಿಂದಾಗಿ ಅಮೆರಿಕಾದ ಮಹಿಳೆಯರನ್ನು ಧ್ವನಿ ಎತ್ತುವಂತೆ ಮತ್ತು ಬದಲಾವಣೆಗಾಗಿ ಪ್ರಚಾರಗಳಲ್ಲಿ ಸಕ್ರಿಯವಾಗುವಂತೆ ಹುರಿದುಂಬಿಸಿತು. 1857ರ ಗಾರ್ಮೆಂಟ್ ಕಾರ್ಮಿಕರ ಹೋರಾಟದ ಐವತ್ತೊಂದು ವರ್ಷ ಕಳೆದ ಸ್ಮಾರಕೋತ್ಸವದ ಅಂಗವಾಗಿ 8 ಮಾರ್ಚ್ 1908 ರಂದು ನ್ಯೂಯಾರ್ಕಿನ ಸುಮಾರು 30,000 ಮಹಿಳಾ ಕಸೂತಿ ಕೆಲಸಗಾರರು ಉತ್ತಮ ವೇತನ, ಉತ್ತಮ ಕೆಲಸದ ಸ್ಥಿತಿಗಾಗಿ, ಎಂಟು ಗಂಟೆಗಳ ಕೆಲಸದ ಅವಧಿಗಾಗಿ, ಕಳಪೆ ಪರಿಸ್ಥಿತಿಗಳ ಮತ್ತು ಬಾಲಕಾರ್ಮಿಕತನದ ನಿರ್ಮೂಲನೆಗಾಗಿ ಮತ್ತು ಮತ ಚಲಾಯಿಸುವ ಹಕ್ಕಿಗಾಗಿ ಬೇಡಿಕೆಯನ್ನಿಟ್ಟುಕೊಂಡು ರಸ್ತೆಗಳಲ್ಲಿ ಮೆರವಣಿಗೆ ಹೊರಟರು. 'ಕೆಲಸ ಮಾಡಿ ಉಪವಾಸವಿರುವುದಕ್ಕಿಂತ ಹೋರಾಟ ಮಾಡಿ ಉಪವಾಸವಿರುವುದೇ ಮೇಲು, ಎಂಬ ಘೋಷಣೆಯನ್ನು ಕೂಗಿದರು. ಅವರ ಮೆರವಣಿಗೆಯ ಮೇಲೆ ಪೊಲೀಸರು ಕ್ರೂರವಾದ ದಾಳಿಯನ್ನು ಮಾಡಿದರು ಮತ್ತು ಇದರಿಂದಾಗಿ ಅನೇಕ ಮಹಿಳೆಯರು ತೀವ್ರವಾಗಿ ಗಾಯಗೊಂಡರು.

1912ರ ಜನವರಿಯಂದು, ಸುಮಾರು 25,000 ಲಾರೆನ್ಸ್, ಮೆಸಾಚುಸ್ಸೆಟ್‌ನ ಜವಳಿ ಕಾರ್ಮಿಕರು ಹತ್ತು ವಾರಗಳ ಮುಷ್ಕರವನ್ನು ಶೇ.15 ರಷ್ಟು ವೇತನದಲ್ಲಿ ಬಡ್ತಿ, ಅಧಿಕಾವಧಿ ಕೆಲಸ ದ್ವಿಗುಣ ಸಂಭಾವನೆ ಮತ್ತು ಮುಷ್ಕರದಲ್ಲಿ ಪಾಲ್ಗೊಳ್ಳುವ ಕಾರ್ಮಿಕರ ಮೇಲೆ ಯಾವುದೇ ರೀತಿಯ ಪಕ್ಷಪಾತವಿರಬಾರದು ಎಂಬ ಬೇಡಿಕೆಗಳೊಂದಿಗೆ ಹೊರಟರು. ಈ ಮುಷ್ಕರವು 'ಬ್ರೆಡ್ ಅಂಡ್ ರೋಸಸ್' ಮುಷ್ಕರವೆಂದು ಕರೆಯಲ್ಪಡುತ್ತದೆ ಏಕೆಂದರೆ, ಮಹಿಳೆಯರು ಒಟ್ಟಾಗಿ ದಾರಿಗಟ್ಟಿ, ಹಾಡುತ್ತಾ ಮತ್ತು ಭಿತ್ತಿ ಚಿತ್ರವನ್ನು ತೆಗೆದುಕೊಂಡು ಆಹಾರ ಮತ್ತು ಘನತೆಯುಳ್ಳ ಬ್ರೆಡ್ ಹಾಗೂ ಗುಲಾಬಿಗಳೆರಡೂ ಬೇಕೆಂಬ ಬೇಡಿಕೆಯೊಂದಿಗೆ ಪಾಲ್ಗೊಂಡರು. ಪೊಲೀಸರು ಕಾರ್ಮಿಕರ ಮೇಲೆ ಅಗ್ನಿಶಾಮಕ ನಾಲಗಳನ್ನು ಪಕ್ಕದ ಚಾವಡಿಗಳಿಂದ ಬಳಸಿ ತೋಯಿಸಿದರು. ಮೂವತ್ತಾರು ಮಹಿಳಾ ಕಾರ್ಮಿಕರನ್ನು ಬಂಧಿಸಲಾಯಿತು ಮತ್ತು ಹಲವರನ್ನು ಒಂದು ವರ್ಷದ ಕಾಲ ಜೈಲು ಶಿಕ್ಷೆಗೆ ಗುರಿಪಡಿಸಲಾಯಿತು.

ಅನೇಕ ಮಹಿಳಾ ಕಾರ್ಮಿಕ ಸಂಘಗಳ ಮುಖಂಡರು ಮದರ್ ಜೋನ್ಸ್, ಎಲಾ ರೀವಿ ಬ್ಲೋರ್, ಸೊಜೋನುರ್ ಟ್ರುತ್ ಮತ್ತು ಎಲೆಜಬತ್ ಗರ್ಲಿ ಫ್ಲಿನ್ ರನ್ನು ಒಳಗೊಂಡು ಮಹಿಳಾ ಕಾರ್ಮಿಕರನ್ನು ಒಗ್ಗೂಡಿಸುವಲ್ಲಿ ಅವರನ್ನು ಕಾರ್ಮಿಕ ಸಂಘಟನೆಗಳಲ್ಲಿ ಸಂಯೋಜಿಸುವಲ್ಲಿ ಮತ್ತು ಅಮೆರಿಕಾದಲ್ಲಿ ಅನೇಕ ಪ್ರತಿಕೂಲತೆಗಳನ್ನು ಮತ್ತು ಕಷ್ಟಗಳನ್ನು ಎದುರಿಸಿ ಅವರ ಹೋರಾಟದ ನೇತೃತ್ವವನ್ನು ವಹಿಸಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ರಷ್ಯದಲ್ಲಿ, ಹೊಸ ಕೈಗಾರಿಕಾ ಕಾರ್ಮಿಕ ಪಡೆಯಲ್ಲಿ ಮಹಿಳೆಯರು ಗಣನೀಯವಾದ ಭಾಗವಾಗಿದ್ದರು. 1905–07 ರ ಮೊದಲ ಸಾಮೂಹಿಕ ಮುಷ್ಕರಗಿಂತಲೂ ಮೊದಲೇ ನಿರ್ದಿಷ್ಟವಾದ ಮಹಿಳೆಯರ ಬೇಡಿಕೆಗಳಿಗಾಗಿಯೇ ಮುಷ್ಕರದ ಕ್ರಮಗಳನ್ನು ಕೈಗೊಳ್ಳಲು ಪ್ರಾರಂಭಿಸಿದ್ದರು. ಪ್ರಸೂತಿ ಹಕ್ಕುಗಳು, ಎದೆಹಾಲು ಉಣಿಸಲು ಕಾಲಾವಕಾಶ, ಲಾಂಡ್ರಿ ದಿನಗಳನ್ನು ಮತ್ತು ವ್ಯವಸ್ಥಾಪಕರ ಲೈಂಗಿಕ ಕಿರುಕುಳವನ್ನು ತಡೆಯಬೇಕೆಂಬುದು ಅವರ ಬೇಡಿಕೆಗಳಲ್ಲಿ ಒಳಗೊಂಡಿದ್ದವು. ಮೊದಲ ವಿಶ್ವ ಯುದ್ಧದ ಪ್ರಾರಂಭದ ವರ್ಷಗಳಲ್ಲಿ, ಮಹಿಳೆಯರು ವೇತನ ಕುಸಿತ ಮತ್ತು ಕಾರ್ಖಾನೆಗಳಲ್ಲಿ ಕೆಲಸದಿಂದ ವಜಾಗೊಳಿಸುವ ವಿರುದ್ಧ ಹೋರಾಡಲು ಸಂಯೋಜಿತರಾದರು; ಮನೆ ಕೆಲಸಗಾರರ ಸಂಘವನ್ನು, ಸೈನಿಕರ ಪತ್ನಿಯರ, ಲಾಚಿಡ್ರಿ ಕೆಲಸಗಾರರ ಮತ್ತು ಬೇಕರಿ ಕೆಲಸಗಾರರ ಸಂಘಗಳನ್ನು ಹಾಗೂ ಹಳೆಚಿಬು ಜವಳಿ ಮತ್ತು ಉತ್ಪಾದನೆಗಳ ಸಂಘಗಳನ್ನು ಸ್ಥಾಪಿಸಿದರು.

ಸಮಾಜವಾದಿಗಳ ಬೆಂಬಲ

ಪ್ರಾರಂಭಿಕ ದಿನಗಳಲ್ಲಿ, ಮಹಿಳೆಯರು ತಮ್ಮ ಮನೆ ಹೊರಗಿನ ಫಲದಾಯಕ ಚಟುವಟಿಕೆಗಳಲ್ಲಾಗಲಿ ಹಾಗು ಕಾರ್ಮಿಕ ಸಂಘದ ಚಟುವಟಿಕೆಗಳಲ್ಲಾಗಲಿ ಪಾಲ್ಗೊಂಡಲ್ಲಿ ವಿಪರೀತವಾದ ವಿರೋಧವನ್ನು ಮತ್ತು ಅಪಹಾಸ್ಯವನ್ನು ಎದುರಿಸಬೇಕಾಗಿತ್ತು. ಪುರುಷರು ಅವರನ್ನು ಎದುರಾಳಿ ಅಥವಾ ಪ್ರತಿಸ್ಪರ್ಧಿಯಾಗಿ ಕೆಲಸದ ಸ್ಥಳಗಳಲ್ಲಿ ನೋಡುತ್ತಿದ್ದರು. ಬೂರ್ಜ್ವಾಗಳು(ಬಂಡವಾಳಗಾರರು) ಮತ್ತು ಸಣ್ಣ ಬೂರ್ಜ್ವಾಗಳು ಮಹಿಳೆಯರ ಸಮಾನ ಹಕ್ಕುಗಳನ್ನು ಎಂದಿಗೂ ಬೆಂಬಲಿಸದ ಸಮಯದಲ್ಲಿ ಸಮಾಜವಾದಿಗಳು ಸಮಾನ ಹಕ್ಕುಗಳ ಪರವಾಗಿ ವಾದಿಸುತ್ತಿದ್ದರು.

1866 ರಲ್ಲಿ ನಡೆದ ಮೊದಲ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘದ ಸಭೆಯಲ್ಲಿ ವೃತ್ತಿ ನಿರತ ಮಹಿಳೆಯರ ಕೆಲಸದ ಬಗೆಗಿನ ನಿರ್ಣಯವನ್ನು ಅಂಗೀಕರಿಸಲಾಯಿತು. ಇದು ಮಹಿಳೆಯರು ಮನೆ ಕೆಲಸಗಳಿಗೆ ಮಾತ್ರ ಸೀಮಿತ ಎಂಬ ಸಂಪ್ರದಾಯಕ್ಕೆ ಮುಕ್ತ ಸವಾಲನ್ನು ಹಾಕಿತು. ಮೊದಲ ಅಂತರಾಷ್ಟ್ರೀಯ ಕಾರ್ಮಿಕ ಪುರುಷರ ಸಂಘ, ಇಂಟರ್ ನ್ಯಾಶನಲ್‌ನಲ್ಲಿ ಮಾರ್ಕ್ಸ್ ಮತ್ತು ಏಂಜೆಲ್ಸ್‌ರವರು ಇತರ ರಾಜಕೀಯ ಪಕ್ಷಗಳ ಮಹಿಳಾ ವಿರೋಧಿ ಅಭಿಪ್ರಾಯಗಳನ್ನು ವಿರೋಧಿಸಿದರು. ಅವರು 1869 ರ ಲಯನ್ಸ್‌ನ ಮುಷ್ಕರ ನಿರತ ಮಹಿಳಾ ರೇಷ್ಮೆ ಕೆಲಸಗಾರರ ಸಂಯೋಜನೆಯನ್ನು ಸ್ವಾಗತಿಸಿದರು ಮತ್ತು ಒಬ್ಬ ಮುಷ್ಕರ ನಿರತ ಮಹಿಳೆಯನ್ನು ಬಾಸೆಲ್‌ನಲ್ಲಿ ನಡೆದ 'ಇಂಟರ್ ನ್ಯಾಶನಲ್'ನ ಸಭೆಗೆ ಮಹಿಳೆಯರ ಕೆಲಸ ಮಾಡುವ ಹಕ್ಕಿಗಾಗಿ ನಿರ್ಣಯದ ಬೆಂಬಲದ ಸಲುವಾಗಿ ಬರಮಾಡಿಕೊಳ್ಳಲು ಪ್ರಯತ್ನ ಮಾಡಿದರಲ್ಲದೇ, ಅವರ ಸಂಘಟನೆಗೆ ಇಂಟರ್ ನ್ಯಾಷನಲ್‌ನ ಸದಸ್ಯತ್ವವನ್ನು ನೀಡಲು ಕೂಡ ಪ್ರಯತ್ನಿಸಿದರು. ಆದರೆ, ಅರಾಜಕತಾವಾದಿಗಳ ಪ್ರಭಾವಕ್ಕೆ ಒಳಗಾಗಿ ಇದನ್ನು ಲಯನ್ಸ್‌ನ ಸ್ಥಳೀಯ ವಲಯದವರು ತಡೆದರು.

ರಷ್ಯದಲ್ಲಿ ಬೊಲ್ಶೆವಿಕ್ ಪಕ್ಷದ ಅನೇಕ ಮುಖ್ಯ ಸದಸ್ಯರು ಅಲೆಗ್ಸಾಂಡರ್ ಕೊಲ್ಲೊನ್ಟಾಯಿ, ನಡೆಜ್ದ ಕೃಪ್ಸಕ್ಯಾ, ಇನೆಸ್ಸಾ ಅರ್ಮಾಂಡ್ ಮತ್ತು ಕ್ಲಾವ್ಡಿಯ ನಿಕೊಲೆವರವರು ಮಹಿಳಾ ಹೋರಾಟಗಳಲ್ಲಿ ಭಾಗವಹಿಸಿದರು ಮತ್ತು ಮಹಿಳೆಯರನ್ನು ಪಕ್ಷಕ್ಕೆ ಸೇರಿಕೊಳ್ಳುವಂತೆ ಕೋರಿದರು. ಮಹಿಳೆಯರಿಗಾಗಿ ರಾಬೊತ್ನಿತ್ಸಾ ಅಥವ ವುಮೆನ್ ವರ್ಕರ್ ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಅವರು ದುಡಿಯುವ ಮಹಿಳೆಯರು ಅವರ ವರ್ಗದಲ್ಲೇ ಹೋರಾಟದಲ್ಲಿ ತೊಡಗಬೇಕೆಂಬ ಪ್ರಚಾರವನ್ನು ಮಾಡಿದರು.

–ಮುಂದುವರೆಯುವುದು



ಸೋವಿಯತ್ ರಷ್ಯಾದ ಪೆಟ್ರೊಗ್ರಾಡ್‌ನಲ್ಲಿ ಮಹಿಳೆಯರ ಪ್ರತಿಭಟನೆ–1917

ಬಗರ್ ಹುಕುಂ ಹಾಗೂ ಅರಣ್ಯ ಸಾಗುವಳಿ ರೈತರಿಗೆ ಭೂಮಿ ಹಕ್ಕು ನೀಡಲು ಸರ್ಕಾರಗಳು ಹಿಂದೇಟು ಹಾಕುತ್ತಿವೆ

–ಜಸ್ಟೀಸ್ ವಿ. ಗೋಪಾಲಗೌಡ



"ಬಗರ್ ಹುಕುಂ ಹಾಗೂ ಅರಣ್ಯ ಸಾಗುವಳಿ ರೈತರಿಗೆ ಭೂಮಿ ಹಕ್ಕು ನೀಡಲು ಸರ್ಕಾರಗಳು ಹಿಂದೇಟು ಹಾಕುತ್ತಿವೆ. ಸಂವಿಧಾನದ ತಿರುಳು ತಿಳಿಯದವರು ಜನಪ್ರತಿನಿಧಿಗಳಾಗುತ್ತಿದ್ದಾರೆ. ಸಂವಿಧಾನ ಬದ್ಧ, ಶಾಸನ ಬದ್ಧ ಕರ್ತವ್ಯಗಳನ್ನು ಸರಿಯಾಗಿ ಸರ್ಕಾರಗಳು ನಿರ್ವಹಿಸುತ್ತಿಲ್ಲ. ಸರ್ಕಾರಗಳು ಗ್ರಾಮಗಳ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಕಡೆಗಣಿಸಿವೆ" ಎಂದು ಜಸ್ಟೀಸ್ ವಿ.ಗೋಪಾಲಗೌಡ ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮಾರ್ಚ್ 26, 2024 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜಿಸಿದ್ದ–ಭೂಮಿ ಹಕ್ಕು ರೈತ ಕೃಷಿ ಕಾರ್ಮಿಕರಿಗೋ? ಕಾರ್ಪೊರೇಟ್ ಬಕಾಸುರರಗಾಗಿಯೋ?;– ಬದಲಾಗುತ್ತಿರುವ ಭೂನೀತಿ ಹಾಗು ಸಂಬಂದಗಳು; ಕುರಿತು ರಾಜ್ಯ ಮಟ್ಟದ ದುಂಡುಮೇಜಿನ ಸಭೆಗೆ ದಿಕ್ಸೂಚಿ ಭಾಷಣ ಮಾಡಿ ಮಾತನಾಡಿದ ನ್ಯಾ. ಗೋಪಾಲಗೌಡರು, ಭೂ ರಹಿತ ಕೃಷಿಕರಿಗೆ ಭೂಮಿ ಒದಗಿಸುವ ಮೂಲಕ ರೈತರ ಬದುಕಿಗೆ ಭದ್ರತೆ ಒದಗಿಸಬೇಕು. ಆದರೆ ಆಳುವ ಸರ್ಕಾರ ರೈತರಿಗೆ ಭೂಮಿಯನ್ನು ಕೊಡುತ್ತಿಲ್ಲ. ಉಳುಮೆ ಮಾಡುತ್ತಿರುವ ಅರಣ್ಯ ಸಾಗುವಳಿಯಲ್ಲಿ ರೈತರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೈತರು ಬೆಳೆದರೆ ಮಾತ್ರ ದೇಶದ ಆರ್ಥಿಕ ಅಭಿವೃದ್ಧಿ ಸಾಧ್ಯ. ಯಾರಿಗೆ ಕೃಷಿ ಜಮೀನು ಇಲ್ಲವೋ ಅಂತವರು ಸರ್ಕಾರಿ ಭೂಮಿಯಲ್ಲಿ ಉಳುಮೆ ಮಾಡಿ ಬದುಕಿದ್ದಾರೆ. ಇಂತವರಿಗೆ ಬದುಕಲು ದಾರಿ ತೋರಿಸಬೇಕೇ ವಿನಃ ಅವರಿಂದ ಭೂಮಿ ಕಸಿದುಕೊಂಡು ಅವರ ಬದುಕಿಗೆ ಅಡ್ಡಿಪಡಿಸಬಾರದು. ಪಶ್ಚಿಮ ಬಂಗಾಳ ರಾಜ್ಯದಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗ ಅಲ್ಲಿನ ಗೇಣಿದಾರರನ್ನು ಗುರುತಿಸಿ ಭೂಮಿಯ ಒಡೆತನ ಕೊಟ್ಟರು. ಉಳುವವನೇ ಭೂ ಒಡೆಯ ಕಾನೂನು ತಂದರು. ಇದರಿಂದ ರೈತರ ಆದಾಯ ಹೆಚ್ಚಾಗಿ ಅವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಯಿತು. ಎಲ್ಲೆಲ್ಲಾ ಎಡಪಂಥೀಯ ಸರ್ಕಾರಗಳು ಇದ್ದವೋ ಅಲ್ಲೆಲ್ಲಾ ಸರ್ಕಾರಿ ಜಮೀನನ್ನು ಉಳುಮೆ ಮಾಡಲು ಅವಕಾಶ ಕೊಟ್ಟು ಅವರಿಗೆ ಭೂ ಒಡೆತನದ ಹಕ್ಕು ಕೊಟ್ಟರು.


ರೈತರು ಮತ್ತು ಕೃಷಿಕೂಲಿಕಾರರು ಇಬ್ಬರೂ ಒಟ್ಟೊಟ್ಟಿಗೆ ಜೀವನ ಸಾಗಿಸಬೇಕಿದೆ. ಅವರಿಬ್ಬರ ನಡುವೆ ಅನ್ಯೋನ್ಯ ಸಂಬಂಧವಿದೆ. ಅದನ್ನು ಉಳಿಸಿ ಬೆಳೆಸಬೇಕಿದೆ. ಕರ್ನಾಟಕದಲ್ಲಿ ಭೂ ಸುಧಾರಣೆ ಕುರಿತು ಸಾಕಷ್ಟು ಚರ್ಚೆಗಳಿದ್ದವು, ಸರ್ಕಾರಗಳು ಒಂದಿಷ್ಟು ಪ್ರಗತಿಪರವಾಗಿ ಯೋಚನೆ ಮಾಡುತ್ತಿದ್ದವು, ಯಾವಾಗ ಕಾರ್ಪೊರೇಟ್ ಕಂಪನಿಗಳ ಕಣ್ಣಿಗೆ ಭೂಮಿ ಬಿತ್ತು, ಮತ್ತು ಸರ್ಕಾರಗಳು ಆ ಕಂಪನಿಗಳ ತಾಳಕ್ಕೆ ತಕ್ಕಂತೆ ಕುಣಿಯಲಾರಂಭಿಸಿದವೋ, ಆ ನಂತರ ಕರ್ನಾಟಕ ಭೂ ಸುಧಾರಣೆ ಹಳ್ಳ ಹಿಡಿಯಿತು. ದಲಿತರು, ಕೂಲಿಕಾರರು, ರೈತರು ಭೂಮಿಯಿಂದ ವಂಚಿತರಾಗುವಂತಾಯಿತು ಎಂದು ಅವರು ಕಳವಳ ವ್ಯಕ್ತಪಡಿಸಿದರು. ರೈತ, ಕೂಲಿಕಾರರನ್ನು ಬೀದಿಗೆ ತಂದ ಸರ್ಕಾರಗಳನ್ನು ಈ ಬಾರಿಯ ಚುನಾವಣೆಯಲ್ಲಿ ಸೋಲಿಸಬೇಕು ಎಂದು ಅವರು ಕರೆ ನೀಡಿದರು.

ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಪುಟ್ಟಮಾದು ಮಾತನಾಡುತ್ತ "ರೈತರು ಬಂಡಾಯ ಮಾಡದೆ ಭೂಮಿಯ ಹಕ್ಕು ಸಿಗುವುದಿಲ್ಲ. ರಾಜ್ಯದ ರಾಜಧಾನಿಗೆ ನಾಲ್ಕಾರು ದಿಕ್ಕುಗಳಿಂದ ಕಾಲ್ನಡಿಯಲ್ಲಿ ಬಂದು ಐಕ್ಯ ಹೋರಾಟ ಮಾಡೋಣ" ಎಂದು ಕರೆಕೊಟ್ಟರು.

ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್ ಮಾತನಾಡಿ, "ಸರ್ಕಾರ ಅರಣ್ಯ ಇಲಾಖೆಗೆ ಸರ್ವಾಧಿಕಾರ ಕೊಟ್ಟಿದೆ. ಸಮತಟ್ಟಾದ ಭೂಮಿಯನ್ನು ಅರಣ್ಯ ಇಲಾಖೆಗೆ ಕೊಟ್ಟು, ನೀಲಗಿರಿ ಬೆಳೆಸಿ, ಹರಿಹರದ ಬಿರ್ಲಾ ಕಂಪನಿಗೆ ಮರಗಳನ್ನು ಒದಗಿಸುವ ಕೆಲಸ ಮಾಡುತ್ತಿದೆ. ಇದು ಅರಣ್ಯ ಅಲ್ಲ, ಕೃಷಿ ಭೂಮಿ. ಕೃಷಿ ಜಮೀನಿನಲ್ಲಿ ನೀಲಗಿರಿ ಮರಗಳನ್ನು ಬೆಳೆಸಿದ್ದರು" ಎಂದು ಹೇಳಿದರು.

ಲೋಕಸಭಾ ಚುನಾವಣಾ ಪ್ರಕ್ರಿಯೆ ಮುಗಿದ ನಂತರ, ಬರುವ ಜೂನ್ ತಿಂಗಳಿನಲ್ಲಿ ರೈತರು, ಕೃಷಿ ಕಾರ್ಮಿಕರು ಒಟ್ಟಾಗಿ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸಲು ದುಂಡುಮೇಜಿನ ಸಭೆ ನಿರ್ಧರಿಸಿತು.

ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಸಿ ಬಯ್ಯಾರೆಡ್ಡಿ ವಹಿಸಿದ್ದರು. ವೇದಿಕೆಯ ಮೇಲೆ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್, ವಿ. ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ್, ರಾಜ್ಯ ಉಪಾಧ್ಯಕ್ಷ ಯು. ಬಸವರಾಜ್, ರಾಜ್ಯ ಹಣಕಾಸು ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್ ಸೇರಿದಂತೆ ವಿವಿಧ ಜಿಲ್ಲೆಗಳ ರೈತ, ಕೂಲಿಕಾರ ಸಂಘಟನೆಗಳ ನೂರಾರು ಮುಖಂಡರು ಭಾಗವಹಿಸಿದ್ದರು. •





ಮೋದಿ ಗೋ ಬ್ಯಾಕ್: ಸಿಪಿಐ(ಎಂ) ಪ್ರತಿಭಟನೆ ಕಾರ್ಯಕರ್ತರ ಬಂಧನ

ನರೇಗಾ ಕೂಲಿ ಬಾಕಿ ಉಳಿಸಿಕೊಂಡ ಮೋದಿ ಗೋಬ್ಯಾಕ್, ಬರಪರಿಹಾರ ಕೊಡದ ಮೋದಿ ಗೋಬ್ಯಾಕ್, ರಾಜ್ಯದ ತೆರಿಗೆ ಹಣ ಕೊಡಲಾರದ ಮೋದಿ ಗೋಬ್ಯಾಕ್, ರೈತರ ಬೆಳೆಗೆ ಎಂಎಸ್‌ಪಿ ನಿಗದಿ ಮಾಡದ ಮೋದಿ ಗೋಬ್ಯಾಕ್, ದೇಶದ ಭಾವೈಕ್ಯ ಮುರಿಯಲು ಸಿಎಎ ಕಾಯ್ದೆ ಮಾಡಿದ ಮೋದಿ ಗೋಬ್ಯಾಕ್, ರೈತರ ಸಾಲ ಮನ್ನಾ ಮಾಡದ ಮೋದಿ ಗೋಬ್ಯಾಕ್ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು.

ದಿನಾಂಕ 16.3.2024 ರಂದು ಕಲಬುರಗಿಯಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಸಂಕಲ್ಪ ಸಮಾವೇಶಕ್ಕೆ ದೇಶದ ಪ್ರಧಾನಿ ನರೇಂದ್ರ ಮೋದಿಯವರು ಆಗಮಿಸುವ ಸ್ವಲ್ಪ ಹೊತ್ತಿನ ಮೊದಲು ಸಿಪಿಐ (ಎಂ) ಜಿಲ್ಲಾ ಸಮಿತಿ ಜಗತ್ ವೃತ್ತದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಕಾರ್ಯಕರ್ತರು ಘೋಷಣೆ ಕೂಗುತ್ತಾ ದೇಶಕ್ಕೆ ಮತ್ತು ರಾಜ್ಯಕ್ಕೆ ಮಾಡುತ್ತಿರುವ ತಾರತಮ್ಯ ಮತ್ತು ಅನ್ಯಾಯಗಳನ್ನು ಖಂಡಿಸಿ ಮೋದಿ ಬರುವುದು ಬೇಡ ಎಂದು ಒತ್ತಾಯಿಸಿದರು.

ನಾಲ್ಕು ತಿಂಗಳಿನಿಂದ ನರೇಗಾ ಕೂಲಿ ಹಣವನ್ನು ಕೇಂದ್ರ ಸರ್ಕಾರ ಬಾಕಿ ಉಳಿಸಿಕೊಂಡಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೇ.64 ಕ್ಕೂ ಹೆಚ್ಚು ಕೃಷಿ ಕೂಲಿಕಾರರಿದ್ದಾರೆ. ಕೂಲಿಕಾರರು, ಬಡರೈತರು, ಮಧ್ಯಮ ವರ್ಗದ ರೈತರು, ಯುವಜನತೆ ಮತ್ತು ಸಮಸ್ತ ಮಹಿಳೆಯರು ಉದ್ಯೋಗ ಖಾತ್ರಿಯನ್ನು ಅವಲಂಬಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರವು ರೂ.1200 ಕೋಟಿಗಿಂತಲೂ ಹೆಚ್ಚು ಕೂಲಿಯನ್ನು ಉಳಿಸಿಕೊಂಡಿದೆ. ಇದು ಬಡ ಜನರಿಗೆ ಮಾಡುತ್ತಿರುವ ಬಹುದೊಡ್ಡ ದ್ರೋಹವಾಗಿದೆ. ಕೂಡಲೆ ಜನತೆಯ ಕೈಗೆ ಉದ್ಯೋಗ ಮತ್ತು ಕೂಲಿ ದೊರೆಯುವಂತೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.

ತೊಗರಿಯ ನಾಡಿನಲ್ಲಿ ತೊಗರಿ ಬೆಳೆಗಾರರಿಗೆ ಎಂಎಸ್‌ಪಿ ಬೆಂಬಲ ಬೆಲೆ ನಿಗದಿ ಮಾಡಿ ಪ್ರತಿ ಕ್ವಿಂಟಲ್ ತೊಗರಿಗೆ ಕನಿಷ್ಠ ರೂ.12,000 ಬೆಂಬಲ ಬೆಲೆ ಘೋಷಿಸಬೇಕು. ಬರಗಾಲದ ಬರ ಪರಿಹಾರ ಹಣ ಬಿಡುಗಡೆ ಮಾಡಬೇಕು. ನ್ಯಾಯಯುತವಾಗಿ ಬರಬೇಕಾದ ರಾಜ್ಯದ ತೆರಿಗೆ ಹಣ ಕೂಡಲೆ ನೀಡಬೇಕು. ಒಂದು ವರ್ಗವನ್ನು ಗುರಿಯಾಗಿಸಿಕೊಂಡು ದೇಶದ ಭಾವೈಕ್ಯ ಪರಂಪರೆಯನ್ನು ಮುರಿಯಲು ಜಾರಿಗೆ ತಂದ ಸಿಎಎ ಕಾಯ್ದೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕು.

ಚುನಾವಣೆ ಮುಂದಿಟ್ಟುಕೊಂಡು ಸುಳ್ಳುಗಳಿಂದ ಜನರ ದಿಕ್ಕು ತಪ್ಪಿಸಲು ಪ್ರಧಾನಿಗಳು ಷಡ್ಯಂತ್ರ ಮಾಡುತ್ತಿದ್ದಾರೆ. ಹಲವು ವರ್ಷಗಳಿಂದ ದೇಶದ ಸಂಪತ್ತನ್ನು ಲೂಟಿ ಮಾಡಿ ಕಾರ್ಪೊರೇಟ್‌ಗಳ ಕೈವಶ ಮಾಡಿ ಅವರಿಂದ ಎಲೆಕ್ಟೋರಲ್ ಬಾಂಡ್ ಮೂಲಕ ಲಂಚ ವಸೂಲಿ ಮಾಡಿರುವುದು ಢಾಳಾಗಿ ಕಾಣುತ್ತಿದೆ. ಚುನಾವಣಾ ನಿಧಿಯ ಹೆಸರಿನಲ್ಲಿ ಜನತೆಯ ಹಣವನ್ನು ವಾಮಮಾರ್ಗದಿಂದ ವಶ ಮಾಡಿಕೊಂಡ ಎಲೆಕ್ಟೋರಲ್ ಬಾಂಡ್‌ಗಾಗಿ ಎಸ್‌ಬಿಐ ಬ್ಯಾಂಕನ್ನು ಬಳಸಿಕೊಳ್ಳಲಾಗಿದೆ. ದೇಶದಲ್ಲಿ ನಡೆದ ಬಹುದೊಡ್ಡ ಭ್ರಷ್ಟಾಚಾರ ಇದಾಗಿದೆ ಎಂದು ಕಾರ್ಯಕರ್ತರು ಆಕ್ರೋಶ ವ್ಯಕ್ತ ಪಡಿಸಿದರು.

ಚೌಕಿದಾರ ಚೋರ್ ಹೈ, ಮೋದಿ ಗೋ ಬ್ಯಾಕ್ ಘೋಷಣೆಗಳು ಜಾಸ್ತಿಯಾಗುತ್ತಿದ್ದಂತೆ ಪೊಲೀಸರು ಘೋಷಣೆ ಕೂಗದಂತೆ ಮತ್ತು ಪ್ರತಿಭಟನೆ ನಿಲ್ಲಿಸುವಂತೆ ಮನವಿ ಮಾಡಿದರೂ ಕಾರ್ಯಕರ್ತರ ಘೋಷಣೆಗಳು ಮುಗಿಲು ಮುಟ್ಟುತ್ತಿರುವುದನ್ನು ಗಮನಿಸಿದ ಪೊಲೀಸರು ತಡೆಯೊಡ್ಡಿದಾಗ ಪ್ರತಿಭಟನಾಕಾರರು ಮತ್ತು ಪೊಲೀಸರ ಮಧ್ಯೆ ವಾಗ್ವಾದ ನಡೆಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾನಿರತರಾಗಿದ್ದ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ನೀಲಾ, ಜಿಲ್ಲಾ ಸಮಿತಿ ಸದಸ್ಯರಾದ ಶರಣಬಸಪ್ಪ ಮಮಶೆಟ್ಟಿ, ಪಾಂಡುರಂಗ ಮಾವಿನಕರ ಅವರನ್ನು ಬಂಧಿಸಿ ಅಕ್ಷರಶಹ ಒತ್ತಾಯಪೂರ್ವಕವಾಗಿ ಎತ್ತಿಕೊಂಡು ಪೊಲೀಸ್ ವಾಹನದಲ್ಲಿ ಕರೆದೊಯ್ದರು.

ಜಿಲ್ಲಾ ಸಮಿತಿಯ ಭೀಮಶೆಟ್ಟಿ ಯಂಪಳ್ಳಿ, ಸಿದ್ದರಾಮ ಹರವಾಳ, ದಲಿತ ಹಕ್ಕುಗಳ ಸಮಿತಿಯ ಸುಧಾಮ ಧನ್ನಿ, ಪ್ರಕಾಶ ಜಾನೆ, ಡಿವೈಎಫ್‌ಐ ನ ಲವಿತ್ರ ವಸ್ತ್ರದ, ಎಸ್ ಎಫ್ ಐ ನ ಸುಜಾತಾ ಸೇರಿದಂತೆ ಅನೇಕರನ್ನು ಪೊಲೀಸರು ವಶಕ್ಕೆ ಪಡೆದು ಒತ್ತಾಯದಿಂದ ವಾಹನದಲ್ಲಿ ತುಂಬಿಕೊಂಡು ಕರೆದೊಯ್ದು ಸ್ವಲ್ಪ ಹೊತ್ತಿನ ನಂತರ ಎಲ್ಲರನ್ನೂ ಬಿಡುಗಡೆ ಮಾಡಿದರು. •


ಜಿಲ್ಲಾ ಕಾರ್ಯದರ್ಶಿ ಕೆ.ನೀಲಾರವರನ್ನು ಬಂಧಿಸುತ್ತಿರುವ ಪೊಲೀಸರು

ಜೆ.ಎನ್.ಯು. ವಿದ್ಯಾರ್ಥಿ ಸಂಘದ ಚುನಾವಣೆ ಎಡ ಮತ್ತು ಪ್ರಗತಿಪರ ಶಕ್ತಿಗಳ ವಿಜಯ ಪ್ರತಿಗಾಮಿ ರಾಜಕೀಯದ ವಿರುದ್ಧ ನಿರ್ಣಾಯಕ ತೀರ್ಪು

ದೇಶದ ಪ್ರತಿಷ್ಠಿತ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆ.ಎನ್.ಯು.)ನಲ್ಲಿ ಆರ್.ಎಸ್.ಎಸ್. ಪರಿವಾರದ ಎ.ಬಿ.ವಿ.ಪಿ. ಹಾಗೂ ವಿ.ವಿ.ಯ ಸಂಘಿ ಆಡಳಿತದ ಹಲವು ಸಂಚುಗಳನ್ನು ಎದುರಿಸಿ ಎಡ ಮತ್ತು ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಎಲ್ಲ ನಾಲ್ಕು ಪ್ರಮುಖ ಪದಾಧಿಕಾರಿಗಳ ಸ್ಥಾನವನ್ನು ಗೆದ್ದಿರುವುದು ಪ್ರತಿಗಾಮಿ ರಾಜಕೀಯ ಶಕ್ತಿಗಳ ವಿರುದ್ಧ ವಿದ್ಯಾರ್ಥಿಗಳು ನೀಡಿರುವ ನಿರ್ಣಾಯಕ ತೀರ್ಪಾಗಿದೆ.



ನಾಲ್ಕು ವರ್ಷಗಳ ಹೋರಾಟ ಮತ್ತು ದೀರ್ಘ ಕಾಯುವಿಕೆಯ ನಂತರ ಜವಹರಲಾಲ್ ನೆಹರು ವಿಶ್ವವಿದ್ಯಾಯಲದ ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘಕ್ಕೆ ಕೊನೆಗೂ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿದ್ದಾರೆ. ಮಾರ್ಚ್ 22, 2024 ರಂದು ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ., ಎ.ಐ.ಎಸ್.ಎ., ಡಿ.ಎಸ್.ಎಫ್., ಮತ್ತು ಎ.ಐ.ಎಸ್.ಎಫ್. ಸಂಘಟನೆಗಳ ಐಕ್ಯ ಎಡ ವಿದ್ಯಾರ್ಥಿ ಸಂಘಟನೆಗಳ ತಂಡಕ್ಕೆ ಬಾರಿ ಬೆಂಬಲ ನೀಡಿ ಗೆಲ್ಲಿಸಿದ್ದಾರೆ.

ಈ ಚುನಾವಣೆಗಳ ಪ್ರಕ್ರಿಯೆಯೇ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಮತ್ತು ಅದರ ಪರವಾದ ಎ.ಬಿ.ವಿ.ಪಿ. ಹಾಗೂ ವಿದ್ಯಾರ್ಥಿ ಸಮುದಾಯದ ನಡುವಿನ ಹೋರಾಟವಾಗಿತ್ತು. ಒಂದು ಕಡೆ ಆಡಳಿತವು ಚುನಾವಣೆಗಳನ್ನು ತಡೆಯಲು ಪ್ರಯತ್ನಿಸಿತು. ಜೆ.ಎನ್.ಯು.ನಲ್ಲಿ ನಡೆಯುವುದು ವಿದ್ಯಾರ್ಥಿಗಳೇ ನಡೆಸುವ ವಿದ್ಯಾರ್ಥಿ ಸಂಘದ ಚುನಾವಣೆ. ಆದರೆ ಆಡಳಿತವು ಈ ಹಿಂದೆ ಆಯ್ಕೆಯಾಗಿರುವ ವಿದ್ಯಾರ್ಥಿ ಸಂಘವನ್ನು ಈ ವಿಷಯದಲ್ಲಿ ಮಾನ್ಯ ಮಾಡುವುದಿಲ್ಲ ಎಂಬ ಹಠಮಾರಿ ಧೋರಣೆ ತಳೆಯಿತು. ಅಷ್ಟು ಮಾತ್ರವಲ್ಲ, 'ವಿದ್ಯಾರ್ಥಿಗಳ ಡೀನ್(ಡಿ.ಓ.ಎಸ್.)' ಮೂಲಕ ಮತ್ತು ಆ ನಂತರ 'ದೂರು ಪರಿಹಾರ ಘಟಕ'ದ ಮೂಲಕ ಚುನಾವಣಾ ಪ್ರಕ್ರಿಯೆಯಲ್ಲಿ ತೀವ್ರವಾದ ಹಸ್ತಕ್ಷೇಪ ನಡೆಸಲು ಪ್ರಯತ್ನಿಸಿತು.

ಮತ್ತೊಂದು ಕಡೆ ಆರ್.ಎಸ್.ಎಸ್. ಪರಿವಾರದ ಒಂದು ಅಂಗ ಸಂಸ್ಥೆಯಾದ ಎ.ಬಿ.ವಿ.ಪಿ.ಯು ವಿ.ವಿ.ಯ ಬೇರೆ ಬೇರೆ ವಿಭಾಗಗಳ ಸರ್ವಸದಸ್ಯರ ಸಭೆಗಳಲ್ಲಿ ನಿರಂತರವಾದ ಅಪಪ್ರಚಾರಗಳು, ಗಲಭೆ–ಹಿಂಸೆಗಳ ಮೂಲಕ ಚುನಾವಣಾ ಪ್ರಕ್ರಿಯೆಯನ್ನು ಕೆಡಿಸಲು ಪ್ರಯತ್ನಿಸಿತು. ಆದರೆ ವಿದ್ಯಾರ್ಥಿ ಸಮುದಾಯದ ದೃಢ ನಿಶ್ಚಯದ ಮುಂದೆ ಯಾವ ಆಟಗಳೂ ನಡೆಯಲಿಲ್ಲ. ಕೊನೆಗೆ 'ವಿದ್ಯಾರ್ಥಿಗಳ ಡೀನ್'(ಡಿ.ಓ.ಎಸ್.) ಐಕ್ಯ ಎಡ ವಿದ್ಯಾರ್ಥಿ ಸಂಘಟನೆಗಳು ಮತ್ತು ಬಿ.ಎ.ಪಿ.ಎಸ್.ಎ. ಮತ್ತು ಎ.ಬಿ.ವಿ.ಪಿ.ಗಳು ಅಭ್ಯರ್ಥಿಗಳು ಪದಾಧಿಕಾರಿಗಳ ಎಲ್ಲ ನಾಲ್ಕು ಪ್ರಮುಖ ಸ್ಥಾನಗಳಲ್ಲೂ ಸ್ಪರ್ಧಿಸಿರುವುದನ್ನು ಹಾಗೂ ಚುನಾವಣಾ ದಿನಾಂಕವನ್ನು ಘೋಷಿಸಬೇಕಾಯಿತು. ಇದಲ್ಲದೇ ಎನ್.ಎಸ್.ಯು.ಐ. ಸಂಘಟನೆಯು ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿ ಸ್ಥಾನಗಳಿಗೂ, ಆರ್.ಜೆ.ಡಿ. ಮತ್ತು ಸಮಾಜವಾದಿ ಪಕ್ಷಗಳ ವಿದ್ಯಾರ್ಥಿ ಸಂಘಟನೆಗಳು ಪ್ರತ್ಯೇಕವಾಗಿ ಅಧ್ಯಕ್ಷ ಸ್ಥಾನಕ್ಕೂ ಸ್ಪರ್ಧಿಸಿದ್ದವು.

ಪ್ರಚಾರ–ವಿಚಾರ

ಐಕ್ಯ ಎಡ ವಿದ್ಯಾರ್ಥಿ ಸಂಘಟನೆಗಳ ಪ್ರಚಾರವು ಇತ್ತೀಚಿನ, ವಿ.ವಿ. ಶುಲ್ಕ ಏರಿಕೆ ವಿರುದ್ಧ ಮತ್ತು ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸಬೇಕೆಂಬುದರ ಪರ ಎರಡು ಯಶಸ್ವಿ ಹೋರಾಟಗಳನ್ನು ಆಧರಿಸಿತ್ತು. ವಿ.ವಿ.ಯಲ್ಲಿ, ಲೈಂಗಿಕ ಕಿರುಕುಳಗಳ ವಿರುದ್ಧದ 'ಲಿಂಗ ಸಂವೇದನಾ ಸಮಿತಿ'ಯ ಪುನರ್ ಸ್ಥಾಪನೆ, ಪ್ರಯೋಗ ಶಾಲೆ ಮತ್ತು ಹಾಸ್ಟೆಲ್ ಸೌಲಭ್ಯಗಳ ನವೀಕರಣ, ಹೊಸದಾದ ತರಗತಿ ಮತ್ತು ಹಾಸ್ಟೆಲ್ ಕಟ್ಟಡಗಳ ನಿರ್ಮಾಣ, ವಿದ್ಯಾರ್ಥಿ ವೇತನದ ಹೆಚ್ಚಳ, ಅವಕಾಶ ವಂಚಿತ ಸಮುದಾಯದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕೆ ಸಂಬಂಧ ಪಟ್ಟಂತೆ, ಮೌಲಾನ ಅಜಾದ್ ರಾಷ್ಟ್ರೀಯ ವಿದ್ಯಾರ್ಥಿ ವೇತನವನ್ನು ಮತ್ತೆ ಜಾರಿಗೆ ತರುವುದು ಮುಂತಾದ ಹಲವು ಜ್ವಲಂತ ಪ್ರಶ್ನೆಗಳನ್ನು ಮತ್ತು ಬೇಡಿಕೆಗಳನ್ನು ಎಡ ವಿದ್ಯಾರ್ಥಿ ಸಂಘಟನೆಗಳು ಎತ್ತಿದವು.

ಈ ಚುನಾವಣೆಯಲ್ಲಿ ಎ.ಬಿ.ವಿ.ಪಿ. ಮತ್ತು ವಿ.ವಿ. ಆಡಳಿತ ಎರಡೂ ಬಹಿರಂಗವಾಗಿ ಕೈಜೋಡಿಸಿ ಒಟ್ಟಾಗಿ ಕೆಲಸ ಮಾಡಿದವು. ಜೆ.ಎನ್.ಯು. ವಿದ್ಯಾರ್ಥಿ ಸಂಘದ ಸಂವಿಧಾನ ಮತ್ತು ನಿಯಮಗಳಂತೆ, ವಿ.ವಿ. ಆಡಳಿತವು ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಆದರೆ 'ದೂರು ಪರಿಹಾರ ಸಮಿತಿ'ಯ ಮೂಲಕ ಆಡಳಿತವು ಐಕ್ಯ ಎಡ ವಿದ್ಯಾರ್ಥಿ ಸಂಘಟನೆಗಳ ಪ್ರಧಾನ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ ಸ್ವಾತಿ ಸಿಂಗ್ ನಾಮಪತ್ರವನ್ನು ರದ್ದುಪಡಿಸಿ ಅಮಾನ್ಯ ಮಾಡಲು ಪಿತೂರಿ ನಡೆಸಿತು. ಕೊನೆಗೆ ಚುನಾವಣೆ ನಡೆಯುವ ದಿನದ ಬೆಳಗಿನ ಜಾವ 2.00 ಗಂಟೆಗೆ ಸ್ವಾತಿ ಸಿಂಗ್ ನಾಮಪತ್ರವನ್ನು, ಆಕೆಯ ವಿರುದ್ಧದ ದೂರಿನ ನೆಪದಲ್ಲಿ ಅಮಾನ್ಯ ಮಾಡಿರುವುದನ್ನು ಪ್ರಕಟಿಸಲಾಯಿತು.

ಇದು ವಿದ್ಯಾರ್ಥಿ ಸಮುದಾಯವನ್ನು ಗೊಂದಲಕ್ಕೆ ತಳ್ಳಿ ಹೇಗಾದರೂ ಎ.ಬಿ.ವಿ.ಪಿ. ಅಭ್ಯರ್ಥಿಗೆ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿ ಗೆಲುವು ತಂದು ಕೊಡುವ ತಂತ್ರವಾಗಿತ್ತು. ಆದರೆ ಎಸ್.ಎಫ್.ಐ. ಮತ್ತು ಎಡ ವಿದ್ಯಾರ್ಥಿ ಸಂಘಟನೆಗಳು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಬಿ.ಎ.ಪಿ.ಎಸ್.ಎ. ಅಭ್ಯರ್ಥಿಗೆ ಮತ ನೀಡಬೇಕೆಂದು ವಿನಂತಿ ಮಾಡಿದವು. ಜನಪ್ರಿಯ ವಿದ್ಯಾರ್ಥಿ ನಾಯಕಿಯೊಬ್ಬರ ನಾಮಪತ್ರ ಅಮಾನ್ಯ ಮಾಡಿ, ಎಬಿವಿಪಿ ಅಭ್ಯರ್ಥಿಯೊಬ್ಬರನ್ನು ಗೆಲ್ಲಿಸಿಕೊಳ್ಳುವ ಸಂಘಿ ಆಡಳಿತದ ಪಿತೂರಿಯು ವಿದ್ಯಾರ್ಥಿಗಳಿಗೆ ಚೆನ್ನಾಗಿ ಮನಟ್ಟಾಯಿತು. ವಿದ್ಯಾರ್ಥಿಗಳು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಬಿ.ಎ.ಪಿ.ಎಸ್.ಎ. ಅಭ್ಯರ್ಥಿಗೆ ತಮ್ಮ ಬೆಂಬಲ ನೀಡಿದರು. ಮತ್ತು ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಜಂಟಿ ಕಾರ್ಯದರ್ಶಿ ಸ್ಥಾನಗಳಲ್ಲಿ ಎಡ ವಿದ್ಯಾರ್ಥಿ ಸಂಘಟನೆಗಳ ಅಭ್ಯರ್ಥಿಗಳು ವಿಜಯಶಾಲಿಗಳಾದರು.

ಕೌನ್ಸಿಲರ್‌ಗಳ ಮಟ್ಟದಲ್ಲಿ ಒಟ್ಟು 42 ಸ್ಥಾನಗಳ ಪೈಕಿ ಎಡ ಮತ್ತು ಎಡ ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳು 22 ಸ್ಥಾನಗಳಲ್ಲಿ ಗೆದ್ದಿದ್ದಾರೆ. ಇದರಲ್ಲಿ ಎಸ್.ಎಫ್.ಐ. ಅಭ್ಯರ್ಥಿಗಳು ಅತಿದೊಡ್ಡ ಗುಂಪಾಗಿದ್ದಾರೆ.

ಈ ಚುನಾವಣೆಯಲ್ಲಿ ಅಕ್ರಮ ಚುನಾವಣಾ ಬಾಂಡ್‌ಗಳು, ಮಣಿಪುರದ ಜನಾಂಗೀಯ ಹಿಂಸಾಚಾರ, ಮೋದಿ ಸರಕಾರದ ಅಡಳಿತದ ಅವಧಿಯಲ್ಲಿನ ಕಳೆದ ಒಂದು ದಶಕದ ಯುವಜನರ ಬದುಕಿನ ಪಾಡು ಮುಂತಾದವು ಚರ್ಚೆಯ ವಿಷಯಗಳಾಗಿದ್ದವು. ಈ ವಿಷಯದಲ್ಲಿ ವಿದ್ಯಾರ್ಥಿಗಳು ಹಣಬಲ ಮತ್ತು ಅಧಿಕಾರ ಬಲ ಮತ್ತು ತೋಳ್ಬಲದ ಆರ್.ಎಸ್.ಎಸ್. ಮತ್ತು ಸಂಘ ಪರಿವಾರದ ಪ್ರಚಾರವನ್ನು ತಿರಸ್ಕರಿಸಿದ್ದಾರೆ. ಮತ್ತು ಎಡ ಪ್ರಗತಿಪರ ಶಕ್ತಿಗಳನ್ನು ಬೆಂಬಲಿಸಿದ್ದಾರೆ.

ಅಧ್ಯಕ್ಷ ಸ್ಥಾನ	ಗಳಿಸಿದ ಮತ	ಉಪಾಧ್ಯಕ್ಷ ಸ್ಥಾನ	ಗಳಿಸಿದ ಮತ	ಪ್ರಧಾನ ಕಾರ್ಯದರ್ಶಿ ಸ್ಥಾನ	ಗಳಿಸಿದ ಮತ	ಜಂಟಿ ಕಾರ್ಯದರ್ಶಿ ಸ್ಥಾನ	ಗಳಿಸಿದ ಮತ
ಧನಂಜಯ್ (ಎಐಎಸ್ಎ–ಐಕ್ಯ ಎಡ)	2598	ಅವಿಜಿತ್ ಘೋಶ್ (ಎಸ್ಎಫ್ಐ–ಐಕ್ಯ ಎಡ)	2409	ಸ್ವಾತಿ ಸಿಂಗ್ (ಡಿಎಸ್ಎಫ್–ಐಕ್ಯ ಎಡ)	ನಾಮಪತ್ರ ರದ್ದು	ಮೊಹಮದ್ ಸಜ್ಜಿದ್ (ಎಐಎಸ್ಎಫ್, ಐಕ್ಯ ಎಡ)	2579
ಬಿಸ್ವಜಿತ್ ಮಿಂಜಿ (ಬಿಎಪಿಎಸ್ಎ)	398	ಮೊಹಮದ್ ಅನಾಸ್ (ಬಿಎಪಿಎಸ್ಎ)	611	ಪ್ರಿಯಾಂಶಿ ಆರ್ಯ (ಬಿಎಪಿಎಸ್ಎ)	2887	ರೂಪಕ್ ಸಿಂಗ್ (ಬಿಎಪಿಎಸ್ಎ)	539
ಜುನೈದ್ ರಾಜಾ (ಎನ್ಎಸ್ಯುಐ)	283	ದೀಪಿಕಾ ಶರ್ಮ (ಎಬಿವಿಪಿ)	1482	ಫರೀನ್ ಜೈದಿ (ಎನ್ಎಸ್ಯುಐ)	436	ಗೋವಿಂದ್ ಡಂಗಿ (ಎಬಿವಿಪಿ)	2066
ಉಮೇಶ್ ಅಜ್ಮೀರ (ಎಬಿವಿಪಿ)	1676	ಅಂಕುರ್ ರೈ (ಸ್ವತಂತ್ರ)	814	ಅರ್ಜುನ್ ಆನಂದ್ (ಎಬಿವಿಪಿ)	1961		

ಸಿಪಿಐ(ಎಂ) ನ 3ನೇ ಪಟ್ಟಿಯಲ್ಲಿ ಐವರು ಅಭ್ಯರ್ಥಿಗಳು

ಪಶ್ಚಿಮ ಬಂಗಾಳದ ನಾಲ್ಕು ಮತ್ತು ಆಂಧ್ರ ಪ್ರದೇಶದ ಒಂದು ಲೋಕಸಭಾ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಸಿಪಿಐ(ಎಂ) ಬಿಡುಗಡೆ ಮಾಡಿದೆ.

ಆಂಧ್ರ ಪದೇಶದ ಅರಕು (ಎಸ್.ಟಿ.) ಕ್ಷೇತ್ರದಲ್ಲಿ ಪಾಚಿಪೆಂಟ ಅಪ್ಪಲನರಸ, ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಕ್ಷೇತ್ರದಲ್ಲಿ ಮಹಮದ್ ಸಲೀಂ, ರಾಣಘಟ್ಟ (ಎಸ್.ಸಿ.) ಕ್ಷೇತ್ರದಲ್ಲಿ ಅಲಕೇಶ್ ದಾಸ್, ಬರ್ಧಮಾನ್–ದುರ್ಗಾಪುರ ಕ್ಷೇತ್ರದಲ್ಲಿ ಸುಕೃತಿ ಘೋಸಲ್ ಮತ್ತು ಬೊಲ್ಪುರ್ (ಎಸ್.ಸಿ.) ಕ್ಷೇತ್ರದಲ್ಲಿ ಶ್ಯಾಮಲಿ ಪ್ರಧಾನ್ (ಮಹಿಳೆ) ಸ್ಪರ್ಧಿಸಲಿದ್ದಾರೆ. ಇದಕ್ಕೂ ಮೊದಲು ಒಟ್ಟು 39 ಅಭ್ಯರ್ಥಿಗಳ 2 ಪಟ್ಟಿಗಳನ್ನು ಬಿಡುಗಡೆ ಮಾಡಲಾಗಿತ್ತು. ಇದೂ ಸೇರಿದಂತೆ ಇದುವರೆಗೆ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಭಾರತದ ಹಲವು ರಾಜ್ಯಗಳಲ್ಲಿ ಸ್ಪರ್ಧಿಸುವ ಪಕ್ಷದ 44 ಅಭ್ಯರ್ಥಿಗಳ ಪಟ್ಟಿಯನ್ನು ಸಿಪಿಐ(ಎಂ) ಬಿಡುಗಡೆ ಮಾಡಿದೆ.

ಪಶ್ಚಿಮ ಬಂಗಾಳದಲ್ಲಿ ಗೆಲುವಿನ ಭರವಸೆ: ಸಿಪಿಐ(ಎಂ)

2019 ರ ಶೂನ್ಯ ಫಲಿತಾಂಶದ ನಂತರ ಪಶ್ಚಿಮ ಬಂಗಾಳದಲ್ಲಿ ಲೋಕಸಭಾ ಚುನಾವಣೆಯಲ್ಲಿ ಒಂದು ತಿರುವು ಪಡೆಯುತ್ತದೆ ಸಿಪಿಐ(ಎಂ) ಆಶಿಸುತ್ತಿದೆ. ಜನರು ತಮ್ಮ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸಲು ಸಾಧ್ಯವಾಗುವುದರ ಮೇಲೆ ಈ ಫಲಿತಾಂಶಗಳು ಅವಲಂಬಿಸಿರುತ್ತದೆ. ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ನೀಡಿದ ಪೊಳ್ಳು ಭರವಸೆಗಳನ್ನು ಜನತೆ ನೋಡಿದ್ದಾರೆ ಎಂದು ಪ್ರತಿಪಾದಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ ಡಮ್ ಡಮ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುಜನ್ ಚಕ್ರವರ್ತಿ ಅವರು, "ನಂಬಲರ್ಹರು ಯಾರೂ ಇಲ್ಲದಿದ್ದಾಗ ಅಲ್ಲಿ ಕೆಂಪು ಬಾವುಟವಿದೆ. ಜನರು ತಮ್ಮ ಹಕ್ಕುಗಳನ್ನು ಮುಕ್ತವಾಗಿ ಚಲಾಯಿಸಲು ಸಾಧ್ಯವಾದರೆ, ಫಲಿತಾಂಶಗಳಲ್ಲಿ ಅದರ ಪ್ರತಿಫಲನ ಇರುತ್ತದೆ" ಎಂದು ಪಿಟಿಐ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಚುನಾವಣಾ–ಸಂಬಂಧಿತ ಹಿಂಸಾಚಾರವು ದೀರ್ಘಕಾಲದವರೆಗೆ ಕೇಂದ್ರೀಕೃತವಾಗಿರುವ ಪಶ್ಚಿಮ ಬಂಗಾಳದಲ್ಲಿ ಚುನಾವಣೆಗಳು ಏಳು ಹಂತಗಳಲ್ಲಿ ಹೆಚ್ಚಿನ ಸಂಖ್ಯೆಯ ಕೇಂದ್ರ ಭದ್ರತಾ ಪಡೆಗಳೊಂದಿಗೆ ನಡೆಯಲಿದೆ. ಚುನಾವಣೆ ಘೋಷಣೆಯಾಗುವ ಮುನ್ನವೇ ಜನರಲ್ಲಿ ವಿಶ್ವಾಸ ಹೆಚ್ಚಿಸುವ ಕ್ರಮವಾಗಿ ಚುನಾವಣಾ ಆಯೋಗದಿಂದ ಕೇಂದ್ರ ಪಡೆಗಳ ಹಲವು ತುಕಡಿಗಳನ್ನು ರಾಜ್ಯಕ್ಕೆ ಕಳುಹಿಸಲಾಗಿತ್ತು.

2011ರ ವರೆಗೆ 34 ವರ್ಷಗಳ ಕಾಲ ರಾಜ್ಯವನ್ನು ಆಳಿದ ಸಿಪಿಐ(ಎಂ) ನೇತೃತ್ವದ ಎಡರಂಗವು 2019ರ ಲೋಕಸಭೆ ಚುನಾವಣೆಯಲ್ಲಿ ಹಾಗೂ 2021ರ ವಿಧಾನಸಭೆ ಚುನಾವಣೆಯಲ್ಲೂ ರಾಜ್ಯದಲ್ಲಿ ಯಾವುದೇ ಸ್ಥಾನವನ್ನು ಗೆಲ್ಲಲು ಸಾಧ್ಯವಾಗಲಿಲ್ಲ.

2024ರ ಲೋಕಸಭೆ ಚುನಾವಣೆಗೆ ಸಾಕಷ್ಟು ಮುಂಚಿತವಾಗಿಯೇ ಸಿದ್ಧತೆಗಳನ್ನು ಆರಂಭಿಸಿರುವ ಸಿಪಿಐ(ಎಂ) ಪಶ್ಚಿಮ ಬಂಗಾಳದಲ್ಲಿ ಉದ್ಭವಿಸುವ ಪ್ರತಿಯೊಂದು ಪ್ರಮುಖ ಸಮಸ್ಯೆಯಲ್ಲೂ ಛಾಪು ಮೂಡಿಸಲು ಪ್ರಯತ್ನಿಸುತ್ತಿದೆ. ಆಡಳಿತಾರೂಢ ಟಿಎಂಸಿ ನಾಯಕರು ಮತ್ತು ಅವರ ಸಹಚರರಿಂದ ➚

ಈ ಉಡುಗೊರೆಯಲ್ಲಿ ಜನರಿಂದ ದೋಚಿದ ಹಣವಿದೆ!

19 ಕೋಟಿ ಜನರು ಹಸಿವಿನಿಂದ ಬಳಲುತ್ತಿರುವ ದೇಶದಲ್ಲಿ ತಾತನಿಂದ ಮೊಮ್ಮಗನಿಗೆ 240 ಕೋಟಿ ಉಡುಗೊರೆ

ಇನ್ಫೋಸಿಸ್ ನಾರಾಯಣ ಮೂರ್ತಿ ಅವರು ತಮ್ಮ ನಾಲ್ಕು ತಿಂಗಳ ಮೊಮ್ಮಗನಿಗೆ 240 ಕೋಟಿ ಉಡುಗೊರೆ ನೀಡಿದ್ದಾರೆ ಎಂಬ ಸುದ್ದಿ ದೇಶಾದ್ಯಂತ ಹಲವರ ಹುಬ್ಬೇರಿಸುವಂತೆ ಮಾಡಿದೆ. ಆ ಹಸುಗೂಸು ಎಷ್ಟೊಂದು ಅದೃಷ್ಟವಂತ ಎಂದು ಬಾಯಿ ಮೇಲೆ ಬೆರಳಿಟ್ಟುಕೊಂಡ ಜನರೆಷ್ಟೊ. ಸಿರಿವಂತರ ಮನೆಯಲ್ಲಿ ಹುಟ್ಟುವ ಮಕ್ಕಳ ಬಗ್ಗೆ ಮಾತನಾಡುವಾಗ ‘ಅವರು ಬೆಳ್ಳಿಯ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದರು’ ಎನ್ನುತ್ತಾರೆ. ಆದರೆ, ಈ ಉಡುಗೊರೆ ಅದಕ್ಕಿಂತ ದೊಡ್ಡದು.

ನಾರಾಯಣಮೂರ್ತಿ ತಮ್ಮ ಮೊಮ್ಮಗನಿಗೆ ಕೊಟ್ಟ 240 ಕೋಟಿ ರೂ. ಉಡುಗೊರೆಯಲ್ಲಿ ಮತ್ತು ಮುಕೇಶ್ ಅಂಬಾನಿ ಪುತ್ರನ ವಿವಾಹ ಪೂರ್ವ ಸಮಾರಂಭಕ್ಕೆ ವೆಚ್ಚ ಮಾಡಿದ 1,259 ಕೋಟಿ ರೂ. ಹಣದಲ್ಲಿ ದುಡಿಯುವ ವರ್ಗದ, ಜನಸಾಮಾನ್ಯರ ಬೆವರಿನ ಫಲದ ಪಾಲಿದೆ, ಸಾರ್ವಜನಿಕರ ಸಂಪತ್ತಿನಲ್ಲಿ ದೋಚಿದ ಭಾಗವೂ ಇದೆ ಎಂಬುದನ್ನು ಅರಿಯಬೇಕಿದೆ.



ನಾರಾಯಣಮೂರ್ತಿ ಅವರು ಇನ್ಫೋಸಿಸ್ ಸಂಸ್ಥೆಯಲ್ಲಿ 1.51 ಕೋಟಿ (ಒಂದು ಕೋಟಿ, 51 ಲಕ್ಷ) ಷೇರುಗಳನ್ನು ಹೊಂದಿದ್ದಾರೆ. ಇಷ್ಟು ಷೇರುಗಳಲ್ಲಿ ಅವರು ತಮ್ಮ ಮೊಮ್ಮಗನ ಹೆಸರಿಗೆ ಕೇವಲ 15 ಲಕ್ಷ ಷೇರುಗಳನ್ನು ವರ್ಗಾಯಿಸಿದ್ದಾರೆ! ಅಂದರೆ ಇದು ಈ ಲೆಕ್ಕದಲ್ಲಿ ಅತ್ಯಲ್ಪ ಮಾತ್ರ! ಆದ್ದರಿಂದಲೇ ನಾರಾಯಣ ಮೂರ್ತಿಯವರ ಮೊಮ್ಮಗ ಅತಿ ಕಿರಿಯ ದ್ವಿಶತ ಕೋಟ್ಯಾಧಿಪತಿ ಆಗಿದ್ದಾನೆ. ಇಂದಲ್ಲದಿದ್ದರೆ ನಾಳೆ ಅವರ ಆಸ್ತಿಗಳೆಲ್ಲ ಮೊಮ್ಮಗನಿಗೆ ಸೇರಬೇಕಲ್ಲವೇ? ಹಾಗಾದರೆ, ಇಷ್ಟು ತರಾತುರಿಯಲ್ಲಿ ನೂರಾರು ಕೋಟಿಗಳನ್ನು ಮೊಮ್ಮಗನಿಗೆ ವರ್ಗಾಯಿಸಿದ್ದು ಏಕೆ? ದೊಡ್ಡವರ ವ್ಯವಹಾರಗಳಲ್ಲಿ ಹಲವು ಅರ್ಥಗಳಿವೆ. ಆ ವ್ಯವಹಾರಗಳು ಸಾಮಾನ್ಯ ಜನರಿಗೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ!

ಈ ಹಸುಗೂಸು ಎಷ್ಟು ಗಂಟೆ ದುಡಿದು ಬೆವರು ಸುರಿಸಿದೆ?

ವಾರಕ್ಕೆ 70 ಗಂಟೆ ಕೆಲಸ ಮಾಡುವಂತೆ ನಾರಾಯಣ ಮೂರ್ತಿ ಅವರು ಇತ್ತೀಚೆಗೆ ದೇಶದ ಯುವಕರಿಗೆ ಕರೆ ನೀಡಿದ್ದರು. ಅದೇನೆಂದರೆ, ವಾರಾಂತ್ಯದ ರಜೆಯೂ ಇಲ್ಲದೆ, ದಿನಕ್ಕೆ 10 ಗಂಟೆ ಮತ್ತು ವಾರದಲ್ಲಿ ಏಳು ದಿನ ಕೆಲಸ ಮಾಡಿ ಎಂಬುದು. ಆ ಸಮಯದಲ್ಲಿ ಅವರು, ಯುವಕರು 70 ಗಂಟೆ ಕೆಲಸ ಮಾಡದಿದ್ದರೆ ಸೋಮಾರಿಗಳ ಲೆಕ್ಕಕ್ಕೆ ಬರುತ್ತಾರೆ ಎಂದಿದ್ದರು. ಇವರ ಈ ಮಾತುಗಳು ಆ ಸಮಯದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿತ್ತು. ಇತ್ತೀಚೆಗಷ್ಟೇ ದ್ವಿಶತಕೋಟ್ಯಾಧಿಪತಿಗಳ ಪಟ್ಟಿಗೆ ಸೇರಿರುವ ನಾರಾಯಣ ಮೂರ್ತಿ ಮೊಮ್ಮಗ ದಿನಕ್ಕೆ ಎಷ್ಟು ಗಂಟೆ ದುಡಿದು ಬೆವರು ಸುರಿಸಿದ್ದಾನೆ?

ಫೋರ್ಬ್ಸ್ ಪ್ರಕಾರ, 77 ವರ್ಷದ ನಾರಾಯಣ ಮೂರ್ತಿ ಅವರ ಆಸ್ತಿ ಅಂದಾಜು 38,981 ಕೋಟಿ ರೂಪಾಯಿಗಳು. 1981ರಲ್ಲಿ ಪತ್ನಿ ಸುಧಾಮೂರ್ತಿ ಅವರಿಂದ ಪಡೆದ 10,000 ರೂಪಾಯಿಯಿಂದ ಆರು ಎಂಜಿನಿಯರ್ ಗಳೊಂದಿಗೆ ಇನ್ಫೋಸಿಸ್ ಸಂಸ್ಥೆ ಸ್ಥಾಪಿಸಿದ್ದರು ಎಂದು ಹೇಳಲಾಗಿದೆ. ಈ 43 ವರ್ಷಗಳಲ್ಲಿ ಅವರು ದಿನಕ್ಕೆ ಎಷ್ಟು ಗಂಟೆ ಕೆಲಸ ಮಾಡಿದರು ಮತ್ತು ಅವರು ಎಷ್ಟು ಸಂಪತ್ತನ್ನು ಸಂಗ್ರಹಿಸಿದರು?

ಮುಕೇಶ್ ಅಂಬಾನಿ ಪುತ್ರನ ವಿವಾಹ ಪೂರ್ವ ಸಮಾರಂಭ

ಇತ್ತೀಚೆಗೆ ಹೆಚ್ಚು ಸುದ್ದಿಯಾದ ಅದ್ದೂರಿ ಸಮಾರಂಭವೆಂದರೆ, ಅದು ರಿಲಯನ್ಸ್ ಸಂಸ್ಥೆಯ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರನ ವಿವಾಹ ಪೂರ್ವ ಸಮಾರಂಭ! ಗುಜರಾತ್‌ನ ಜಾಮ್‌ನಗರದಲ್ಲಿ ನಡೆದ ಈ ಮೂರು ದಿನಗಳ ಆಚರಣೆಗೆ ಅಂಬಾನಿ ಕುಟುಂಬ ಅಕ್ಷರಶಃ 1,259 ಕೋಟಿ ರೂ. ಹಣ ಖರ್ಚು ಮಾಡಿದೆ! ಇಷ್ಟು ಹಣವನ್ನು ಯಾವುದಕ್ಕೆಲ್ಲಾ ಖರ್ಚು ಮಾಡಿದೆ? ಕೇಂದ್ರೀಯ ತನಿಖಾ ಸಂಸ್ಥೆಗಳಾದ ಐಟಿ ಮತ್ತು ಇಡಿ ಇವರನ್ನು ಪ್ರಶ್ನಿಸುವ ಧೈರ್ಯ ಮಾಡುವುದಿಲ್ಲ. ಮುಕೇಶ್ ಅಂಬಾನಿ 9.70 ಲಕ್ಷ ಕೋಟಿ ರೂಪಾಯಿ ಸಂಪತ್ತನ್ನು ಹೊಂದಿದ್ದಾರೆಂದು ಅಂದಾಜಿಸಲಾಗಿದೆ! ಮಗನ ಮೇಲಿನ ಪ್ರೀತಿಗಾಗಿ ವ್ಯಯಿಸಿದ ಮೊತ್ತ ಅವರ ಒಟ್ಟು ಸಂಪತ್ತಿನ ಸಮುದ್ರದಲ್ಲಿ ಒಂದು ಹನಿ ನೀರಿನಂತೆ!

ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಮ್ಮ ಸಂಪತ್ತಿನಲ್ಲಿ ವೇಗವಾಗಿ ಅಭಿವೃದ್ಧಿ ಹೊಂದಿದ ಗೌತಮ್ ಅದಾನಿ ಅವರ ಒಟ್ಟು ಆಸ್ತಿ ಮೌಲ್ಯ 6.75 ಲಕ್ಷ ಕೋಟಿ! ಅಂಬಾನಿಗಳು ಮತ್ತು ಅದಾನಿಗಳು ಎಷ್ಟು ಗಂಟೆಗಳ ಬೆವರಿನ ದುಡಿಮೆಯ ನಂತರ ಇಷ್ಟು ಸಂಪತ್ತನ್ನು ಗಳಿಸಿಕೊಂಡರು!

ಹಸಿವಿನಿಂದ ಬಳಲುತ್ತಿರುವ 19 ಕೋಟಿ ಜನರು

ಮತ್ತೊಂದೆಡೆ, ದೇಶದಲ್ಲಿ 19 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ. 125 ದೇಶಗಳನ್ನು ಒಳಗೊಂಡಿರುವ ಜಾಗತಿಕ ಹಸಿವು ಸೂಚ್ಯಂಕದಲ್ಲಿ ನಾವು 111 ನೇ ಸ್ಥಾನದಲ್ಲಿದ್ದೇವೆ. ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ ಇನ್ನೊಂದು ವರದಿ ಪ್ರಕಾರ ದೇಶದ ಶೇ.16ರಷ್ಟು ಜನ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. 53 ರಷ್ಟು ಗರ್ಭಿಣಿ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ದೇಶದ ಜನಸಂಖ್ಯೆಯ ಶೇ. 21.25ರಷ್ಟು ಜನರು ದಿನಕ್ಕೆ 160 ರೂ.ಗಿಂತ ಕಡಿಮೆ ಆದಾಯದಲ್ಲಿ ಜೀವನ ಸಾಗಿಸುತ್ತಿದ್ದಾರೆ. ದಿನಕ್ಕೆ ಹತ್ತಲ್ಲ. ಹನ್ನೆರಡು, ಹದಿನಾಲ್ಕು ಗಂಟೆ ದುಡಿದರೂ ಬಡತನ ತಲೆಮಾರುಗಳಿಂದ ಕಾಡುತ್ತಲೇ ಇರುತ್ತದೆ. ಬಡತನ ದುಃಖಕ್ಕೆ ಕಾರಣವಾಗಿದೆ. ದೇಶದ ಬಹುಪಾಲು ಜನಸಂಖ್ಯೆಯು ತಮ್ಮ ಬದುಕಿಗೆ ಅಗತ್ಯವಾದಷ್ಟು ಸಂಪಾದಿಸಲು ಹೆಣಗಾಡುತ್ತಿದ್ದರೆ, ಕೆಲವರು ಎಲ್ಲಾ ಸೌಕರ್ಯಗಳನ್ನು ಹೇಗೆ ಪಡೆಯುತ್ತಿದ್ದಾರೆ?!

ಉದ್ಯಮಿಗಳ ಸಂಪತ್ತು ವೃದ್ಧಿ ಇಷ್ಟು ವೇಗದಲ್ಲಿ ಹೇಗೆ?

ಅದಾನಿಗಳು, ಅಂಬಾನಿಗಳು, ನಾರಾಯಣಮೂರ್ತಿಗಳಂತಹ ಉದ್ಯಮಿಗಳ ಸಂಪತ್ತಿನ ವೃದ್ಧಿಯ ಹಿಂದಿನ ನಿಜವಾದ ಕಾರಣ ದೇಶದ ಜನತೆಗೆ ತಿಳಿಯಬೇಕಿದೆ. ಇದಕ್ಕೆ ಆಳುವ ಬಂಡವಾಳಶಾಹಿ ಪಕ್ಷಗಳ ಬಂಡವಾಳಶಾಹಿ ಪರವಾದ ನೀತಿಗಳೇ ಕಾರಣ. ಇತ್ತೀಚಿಗೆ ಬಹಿರಂಗಗೊಂಡ ಮತ್ತು ಪ್ರಸ್ತುತ ವ್ಯಾಪಕ ಚರ್ಚೆಯಲ್ಲಿರುವ ಚುನಾವಣಾ ಬಾಂಡ್ ಎಂಬ ಕಳ್ಳ ವ್ಯವಹಾರ ಆಳುವ ಪಕ್ಷಗಳು ಮತ್ತು ಉದ್ಯಮಿಗಳ ನಡುವಿನ ಗಾಢವಾದ ಸಂಬಂಧಗಳನ್ನು ಬಹಿರಂಗಗೊಳಿಸಿದೆ. ಆಳುವ ರಾಜಕೀಯ ಪಕ್ಷಗಳು ಮತ್ತು ಉದ್ಯಮಿಗಳ ನಡುವಿನ ‘ಕೊಡು ಕೊಳ್ಳುವ ವ್ಯವಹಾರ’ದ ಮೂಲಕ ಉದ್ಯಮಿಗಳು ಹೇಗೆ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾರೆ ಎಂಬುದನ್ನು ಇದು ಸ್ವಲ್ಪಮಟ್ಟಿಗಾದರೂ ಜನತೆಗೆ ತಿಳಿಸುತ್ತದೆ. ಈ ಉದ್ಯಮಿಗಳ ಸಂಪತ್ತು ಸಾರ್ವಜನಿಕರ ಸಂಪತ್ತನ್ನು ದೋಚುವ ಮೂಲಕವೇ ಅಗತ್ಯಕ್ಕಿಂತ ಹೆಚ್ಚಾಗಿ ವೃದ್ಧಿಯಾಗಿದೆ.

ಆಳುವ ಪಕ್ಷಗಳಿಗೆ ದೇಣಿಗೆ ರೂಪದಲ್ಲಿ ಲಂಚ ಕೊಟ್ಟು, ಉದ್ಯಮಿಗಳು ಸರ್ಕಾರದಿಂದ ಪಡೆದ ಸಾರ್ವಜನಿಕರ ಸ್ವತ್ತೆಷ್ಟೊ? ಉದ್ಯಮಗಳ ಸ್ಥಾಪನೆ ಹೆಸರನಲ್ಲಿ, ಹೊಸದಾಗಿ ಹೆಸರಿಟ್ಟಿರುವ ‘ನವೋದ್ಯಮ’ ಹೆಸರಿನಲ್ಲಿ ಪಡೆದ ಉಚಿತ ಭೂಮಿ ಎಷ್ಟೋ? ಪಡೆದ ತೆರಿಗೆ ವಿನಾಯಿತಿ ಎಷ್ಟೋ? ಬ್ಯಾಂಕುಗಳಿಂದ ಪಡೆದ ಬಡ್ಡಿ ರಹಿತ ಅಥವಾ ರಿಯಾಯಿತಿ ದರದ ಸಾಲವೆಷ್ಟೊ? ಪ್ಯಾಕೇಜ್ ಗಳ ಹೆಸರಿನಲ್ಲಿ ಮೋದಿ ಸರ್ಕಾರ ಉದ್ಯಮಿಗಳಿಗೆ ಬಾಚಿಕೊಟ್ಟ ಹಣವೆಷ್ಟೋ? ಈ ಉದ್ಯಮಿಗಳು ತಾವು ಬ್ಯಾಂಕುಗಳಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡದೆ, ಮನ್ನಾ ಅಥವಾ ರೈಟ್ ಆಫ್ ಮಾಡಿಸಿಕೊಂಡ ಹಣವೆಷ್ಟೋ? (ಒಟ್ಟು 15 ಲಕ್ಷ ಕೋಟಿ ಸಾಲ ರೈಟ್ ಆಪ್ /ಮನ್ನಾ ಮಾಡಲಾಗಿದೆ). ಇವೆಲ್ಲವೂ ಸಾರ್ವಜನಿಕರ ಸಂಪತ್ತು. ಆದರೂ, ಸಾಲ ಪಡೆದು ವಂಚಿಸಿದ ಉದ್ಯಮಿಗಳು ಯಾರೆಂದು ನಮಗಿನ್ನೂ ತಿಳಿಯಲು ಸಾಧ್ಯವಾಗುತ್ತಿಲ್ಲ. ಇಂತಹ ಉದ್ಯಮಿಗಳು ಯಾರೆಂದು ಸಾರ್ವಜನಿಕರಿಗೆ ತಿಳಿಸಿ ಎಂದು ಈ ಹಿಂದೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು, ಇದಕ್ಕೂ ಮೋದಿ ಸರ್ಕಾರ ಬೆಲೆ ಕೊಡುತ್ತಿಲ್ಲ. ಇಷ್ಟೆಲ್ಲಾ ಸಾಲದೆಂಬಂತೆ, ಸರ್ಕಾರಕ್ಕೆ ಬರುತ್ತಿದ್ದ ಆದಾಯದಲ್ಲಿ ಪ್ರತಿ ವರ್ಷ ಒಂದು ಲಕ್ಷ ಕೋಟಿ ಆದಾಯ ಕಳೆದುಕೊಳ್ಳುವ ಶೇಕಡಾ 8ರಷ್ಟು ಕಾರ್ಪೊರೇಟ್ ತೆರಿಗೆಯನ್ನು ಕಡಿತ ಮಾಡಲಾಗಿದೆ.

ಇದೂ ಅಲ್ಲದೆ, ಡಾಲರ್ ಎದುರಿನ ರೂಪಾಯಿ ಮೌಲ್ಯದ ಕುಸಿತವು ಪೆಟ್ರೋಲ್, ಡೀಸಲ್, ಅಡುಗೆ ಅನಿಲ ಮತ್ತು ಸಾರ್ವಜನಿಕರು ಬಳಕೆ ಮಾಡುವ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಇದು ಜನಸಾಮಾನ್ಯರ ಬದುಕನ್ನು ಬಾಧಿಸುತ್ತದೆ. ಆದರೆ, ರೂಪಾಯಿ ಮೌಲ್ಯ ಕುಸಿತವು, ವಿದೇಶದಲ್ಲಿ ಡಾಲರ್ ಲೆಕ್ಕದಲ್ಲಿ ವ್ಯವಹರಿಸುವ, ಡಾಲರ್ ಲೆಕ್ಕದಲ್ಲಿ ತಮ್ಮ ಉತ್ಪನ್ನಗಳನ್ನು, ಮಾಹಿತಿ ತಂತ್ರಜ್ಞಾನವನ್ನು ರಫ್ತುಮಾಡುವ ಇನ್ಫೋಸಿಸ್ ಸಂಸ್ಥೆಗೆ ಮತ್ತು ನಾರಾಯಣ ಮೂರ್ತಿ, ಅಂಬಾನಿಯವರಂತಹ ಉದ್ಯಮಿಗಳಿಗೆ ಹೆಚ್ಚಿನ ಲಾಭ ತಂದುಕೊಡುತ್ತದೆ. ಸ್ಥಳೀಯವಾಗಿ ಉತ್ಪನ್ನವಾಗುವ ಪೆಟ್ರೋಲಿಯಂ ಪದಾರ್ಥಗಳನ್ನು ಕೂಡ ಅಂತರಾಷ್ಟ್ರೀಯ ಮಾರುಕಟ್ಟೆ ದರದಲ್ಲಿ ಸ್ಥಳೀಯವಾಗಿ ಮಾರಾಟ ಮಾಡಿ ಗ್ರಾಹಕರನ್ನು ಸುಲಿಗೆ ಮಾಡುತ್ತಾರೆ. ಇವೆಲ್ಲವಕ್ಕೂ ನಮ್ಮ ದೇಶದ ಬಂಡವಾಳಶಾಹಿ ಆಡಳಿತದಲ್ಲಿ ಮುಕ್ತ ಅವಕಾಶಗಳಿವೆ.

ನಾರಾಯಣಮೂರ್ತಿ ತಮ್ಮ ಮೊಮ್ಮಗನಿಗೆ ಕೊಟ್ಟ 240 ಕೋಟಿ ರೂ. ಉಡುಗೊರೆಯಲ್ಲಿ ಮತ್ತು ಮುಕೇಶ್ ಅಂಬಾನಿ ಪುತ್ರನ ವಿವಾಹ ಪೂರ್ವ ಸಮಾರಂಭಕ್ಕೆ ವೆಚ್ಚ ಮಾಡಿದ 1,259 ಕೋಟಿ ರೂ. ಹಣದಲ್ಲಿ ದುಡಿಯುವ ವರ್ಗದ, ಜನಸಾಮಾನ್ಯರ ಬೆವರಿನ ಫಲದ ಪಾಲಿದೆ, ಸಾರ್ವಜನಿಕರ ಸಂಪತ್ತಿನಲ್ಲಿ ದೋಚಿದ ಭಾಗವೂ ಇದೆ ಎಂಬುದನ್ನು ಅರಿಯಬೇಕಿದೆ.

–ಸಿ.ಸಿದ್ದಯ್ಯ

ಸಂದೇಶಖಾಲಿ ಗ್ರಾಮಸ್ಥರ ಮೇಲೆ ನಡೆದ ದೌರ್ಜನ್ಯದ ವಿರುದ್ಧದ ಪ್ರತಿಭಟನೆಯಿಂದ ಹಿಡಿದು, ಯುವಕರಿಗೆ ಉದ್ಯೋಗಗಳು ಮತ್ತು ಜನರ ಜೀವನೋಪಾಯದವರೆಗೆ ಎಲ್ಲಾ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಿ ಹೋರಾಡುತ್ತಿದೆ.

ಆಡಳಿತಾರೂಢ ಟಿಎಂಸಿಯ "ಚುನಾವಣಾ ದುಷ್ಕೃತ್ಯಗಳ" ಹೊರತಾಗಿಯೂ ರಾಜ್ಯದಲ್ಲಿ 2023 ರ ಪಂಚಾಯತ್ ಚುನಾವಣೆ ಮತ್ತು ಮುನ್ಸಿಪಲ್ ಚುನಾವಣೆಗಳಲ್ಲಿ ನ್ಯಾಯಯುತ ಪ್ರದರ್ಶನವಾಗಿದೆ. ಇದು ಈ ಬಾರಿ ಎಡಪಕ್ಷಗಳು ಕೆಲವು ಸ್ಥಾನಗಳನ್ನು ಗೆಲ್ಲುವ ಭರವಸೆ ಮೂಡಿಸಿದೆ.

ವಿವಿಧ ರೂಪಗಳಲ್ಲಿ ಪ್ರತೀಕಾರದ ಭಯದ ಹೊರತಾಗಿಯೂ, ದೂರದ ಪ್ರದೇಶಗಳಲ್ಲಿನ ಹಳ್ಳಿಗರು ಸಹ ರಾಜ್ಯದಲ್ಲಿ ಆಡಳಿತ ಪಕ್ಷದ ದೌರ್ಜನ್ಯಗಳ ವಿರುದ್ಧ ಹೋರಾಡಲು ಮುಂದಾಗಿದ್ದಾರೆ. ಜನರಲ್ಲಿದ್ದ ಭಯ ಈಗ ಕೋಪಕ್ಕೆ ತಿರುಗಿದೆ ಎಂದು ಜಾದವ್‌ಪುರದ ಸಿಪಿಐ(ಎಂ) ನ ಮಾಜಿ ಸಂಸದ ಚಕ್ರವರ್ತಿ ಹೇಳಿದರು.

2019 ರ ಸಾರ್ವತ್ರಿಕ ಚುನಾವಣೆ ಮತ್ತು 2021 ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯತ್ತ ಮುಖ ಮಾಡಿದ್ದ ಮತದಾರರ ಒಂದು ಭಾಗವು ಎಡಪಕ್ಷಗಳ ಕಡೆಗೆ ಮರಳುತ್ತಿದೆ. ಟಿಎಂಸಿ ಮತ್ತು ಬಿಜೆಪಿ ಒಂದೇ, ಇವು ಒಂದು ನಾಣ್ಯದ ಎರಡು ಮುಖಗಳು ಎಂದು ಅವರು ಅರಿತುಕೊಂಡಿದ್ದಾರೆ. ಕೆಲವು ಟಿಎಂಸಿ ಮತ್ತು ಬಿಜೆಪಿ ನಾಯಕರು ಪಕ್ಷ ಬದಲಾಯಿಸುವುದನ್ನು ಜನರು ನೋಡುತ್ತಿದ್ದಾರೆ. ಈ ಕಹಿ ಅನುಭವದ ಮೂಲಕ ಮತದಾರರು ಇದನ್ನು ಅರ್ಥಮಾಡಿಕೊಂಡಿದ್ದಾರೆ. ಟಿಎಂಸಿ ಮತ್ತು ಬಿಜೆಪಿ ಎರಡಕ್ಕೂ "ಅವಿಶ್ವಾಸ" ಬಂಗಾಳದಾದ್ಯಂತ ವೇಗವಾಗಿ ಹೆಚ್ಚುತ್ತಿದೆ ಎಂದು ಚಕ್ರವರ್ತಿ ಹೇಳಿದ್ದಾರೆ.

ಮುಂಬರುವ ಲೋಕಸಭೆ ಚುನಾವಣೆಗೆ ಟಿಎಂಸಿಯ ಮಾಜಿ ನಾಯಕರಾದ ಅರ್ಜುನ್ ಸಿಂಗ್ ಮತ್ತು ತಪಸ್ ರಾಯ್ ಅವರನ್ನು ಬಿಜೆಪಿ ಅಭ್ಯರ್ಥಿಗಳನ್ನಾಗಿ ಹಾಕಿದರೆ, ಕೇಸರಿ ಪಕ್ಷದ ಟಿಕೆಟ್‌ನಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾಯಿತರಾದ ಕೃಷ್ಣ ಕಲ್ಯಾಣಿ ಮತ್ತು ಮುಕುತ್ಮಣಿ ಅಧಿಕಾರಿ ಅವರನ್ನು ಟಿಎಂಸಿ ತನ್ನ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಿದೆ.

ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳು ಕಾಂಗ್ರೆಸ್ ಜೊತೆ ಸೀಟು ಹಂಚಿಕೆ ಮಾಡಿಕೊಂಡಿವೆ. ಒಟ್ಟು 42 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 12 ಮತ್ತು ಸಿಪಿಎಂ 17 ಸ್ಥಾನಗಳಲ್ಲಿ ಸ್ಪರ್ಧೆ ಮಾಡುತ್ತಿದೆ.

ಎಡಪಕ್ಷಗಳು ಮತ್ತು ಕಾಂಗ್ರೆಸ್ ಪಕ್ಷವಲ್ಲದೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಂದು ಸ್ಥಾನ ಗಳಿಸಿರುವ ಇಂಡಿಯನ್ ಸೆಕ್ಯೂಲರ್ ಫ್ರಂಟ್ (ಐಎಸ್ಎಫ್) ಗೆ 5 ಲೋಕಸಭಾ ಕ್ಷೇತ್ರಗಳನ್ನು ಬಿಟ್ಟುಕೊಡಲು ಮಾತುಕತೆ ಆಗಿದೆಯಾದರೂ, ಇದು ಇನ್ನೂ ಅಂತಿಮಗೊಂಡಿಲ್ಲ.

ಕೇಜ್ರಿವಾಲ್ ಬಂಧನ: ಸಂಸದೀಯ ಪ್ರಜಾಪ್ರಭುತ್ವಕ್ಕೆ ಕುತ್ತು



ಪ್ರಕಾಶ್ ಕಾರತ್

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಬಂಧಿಸಿರುವುದು ಭಾರತದಲ್ಲಿ ಪ್ರಜಾಪ್ರಭುತ್ವ ಕ್ರಮೇಣವಾಗಿ ಅವಸಾನ ಹೊಂದುತ್ತಿರುವಲ್ಲಿ ಒಂದು ತಿರುವು ಬಿಂದು ಆಗಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಗ್ನ ಆಕ್ರಮಣದಲ್ಲಿ ಅನೇಕ ರೀತಿಯಲ್ಲಿ ಮೊದಲನೆಯದಾಗಿದೆ. ವಿಧಾನಸಭೆಯಲ್ಲಿ ನಾಲ್ಕನೇ ಐದು ಬಹುಮತ ಹೊಂದಿರುವ ಹಾಲಿ ಮುಖ್ಯಮಂತ್ರಿಯೊಬ್ಬರನ್ನು ಬಂಧಿಸಿರುವುದು ಇದೇ ಮೊದಲ ಸಲವಾಗಿದೆ. ಇದೇ ಮೊದಲ ಬಾರಿಗೆ ರಾಷ್ಟ್ರೀಯ ಪಕ್ಷವೊಂದರ ಮುಖ್ಯಸ್ಥರನ್ನು ಸೆರೆಮನೆಗೆ ತಳ್ಳಲಾಗಿದೆ. ಅಲ್ಲದೆ, ಇದೇ ಮೊದಲ ಬಾರಿಗೆ ಲೋಕಸಭೆ ಚುನಾವಣೆ ಪ್ರಕಟಗೊಂಡು ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ನಂತರ ಈ ರೀತಿಯ ಬಂಧನವನ್ನು ನಡೆಸಲಾಗಿದೆ.

ಕೇಂದ್ರದ ಆಳುವ ಪಕ್ಷ ಬಿಜೆಪಿ, ಪ್ರಭುತ್ವದ ಹಲವು ಸಾಧನಗಳನ್ನು ಬಳಸಿಕೊಂಡು ಪ್ರತಿಪಕ್ಷವನ್ನು ನಾಶ ಮಾಡಲು ಹೊರಟಿದೆ. ಪ್ರಮುಖ ಪ್ರತಿಪಕ್ಷಗಳ ಮುಖಂಡರನ್ನು ಟಾರ್ಗೆಟ್ ಮಾಡಲು ಕೇಂದ್ರೀಯ ಸಂಸ್ಥೆಗಳನ್ನು ಬಳಸಲಾಗುತ್ತಿದೆ. ಕೇಜ್ರಿವಾಲ್‌ಗಿಂತಲೂ ಮುಂಚೆ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್‌ರನ್ನು ಅವರು ರಾಜಿನಾಮೆ ನೀಡಿದ ನಂತರ ಇ.ಡಿ. ಬಂಧಿಸಿತ್ತು. ಅದಕ್ಕೂ ಹಿಂದೆ, ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾರನ್ನು ಬಂಧಿಸಲಾಗಿದ್ದು ಅವರು ಸುಮಾರು ಒಂದು ವರ್ಷದಿಂದ ಜೈಲಿನಲ್ಲಿದ್ದಾರೆ. ಬಿಜೆಪಿಯೇತರ ರಾಜ್ಯ ಸರಕಾರಗಳಿರುವ ಎಲ್ಲಾ ಕಡೆಗಳಲ್ಲಿ ಅನೇಕ ಪ್ರತಿಪಕ್ಷ ನಾಯಕರು ಮತ್ತು ಸಚಿವರನ್ನು ಒಂದೋ ಜೈಲಿಗೆ ಹಾಕಲಾಗಿದೆ ಇಲ್ಲವೇ ಅವರು ಕೇಂದ್ರೀಯ ಸಂಸ್ಥೆಗಳಿಂದ ತನಿಖೆಗಳನ್ನು ಎದುರಿಸುತ್ತಿದ್ದಾರೆ. ವಿಪಕ್ಷಗಳ ನಾಯಕರು ಮತ್ತು ಶಾಸಕರನ್ನು ಬೆದರಿಸಲು ಕೇಂದ್ರೀಯ ಏಜೆನ್ಸಿಗಳನ್ನು ಕಾನೂನು ಬಾಹಿರವಾಗಿ ಬಳಸಿಕೊಳ್ಳಲಾಗುತ್ತಿದೆ. ಅವರೆಲ್ಲ ಬಿಜೆಪಿಗೆ ಪಕ್ಷಾಂತರಗೊಳ್ಳುವಂತೆ ಮಾಡುವುದೇ ಇದರ ಕುತ್ಸಿತ ಉದ್ದೇಶವಾಗಿದೆ.

ಇ.ಡಿ. ಪಾತ್ರ ಬಟಾ ಬಯಲು

ಚುನಾವಣಾ ಬಾಂಡ್ ಯೋಜನೆಯ ವಿವರಗಳು ಬಹಿರಂಗಗೊಂಡ ನಂತರ ಇ.ಡಿ. ಕುಖ್ಯಾತ ಪಾತ್ರ ಏನೆಂಬುದು ಬಟಾ ಬಯಲಾಗಿದೆ. ಕೇಜ್ರಿವಾಲ್‌ರನ್ನು ಸಿಲುಕಿಸಲಾಗಿರುವ ಅಬಕಾರಿ ನೀತಿ ಪ್ರಕರಣದಲ್ಲಿ ಔಷಧಿ ಕಂಪನಿ ಅರಬಿಂದೋ ಫಾರ್ಮಾದ ಆಡಳಿತ ನಿರ್ದೇಶಕ ಶರತ್ ಚಂದ್ರ ರೆಡ್ಡಿಯನ್ನು ಕೂಡ ಇ.ಡಿ. ಬಂಧಿಸಿತ್ತು. 2022ರ ನವೆಂಬರ್‌ನಲ್ಲಿ ರೆಡ್ಡಿಯ ಬಂಧನವಾದ ಐದು ದಿನಗಳ ನಂತರ ಆ ಕಂಪನಿ ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ ಐದು ಕೋಟಿ ರೂಪಾಯಿ ದೇಣಿಗೆ ನೀಡಿತ್ತು. ಅದಾದ ಮೇಲೆ, ರೆಡ್ಡಿಗೆ ಜಾಮೀನು ಸಿಕ್ಕಿದ್ದು ಅಪ್ರೂವರ್ ಆಗಿ ಪರಿವರ್ತನೆಗೊಂಡಿದ್ದ. ಹಾಗೂ ಅದಾದ ನಾಲ್ಕು ತಿಂಗಳ ನಂತರ ಬಾಂಡ್ ಮೂಲಕ 25 ಕೋಟಿ ರೂಪಾಯಿಗಳನ್ನು ಬಿಜೆಪಿಗೆ ಸಂದಾಯ ಮಾಡಲಾಗಿತ್ತು. ಕೇಜ್ರಿವಾಲ್ ಮತ್ತು ಆಪ್ ಮುಖಂಡರ ವಿರುದ್ಧ ಹೇಗೆ ಕೇಸ್‌ಗಳನ್ನು ಉತ್ಪಾದಿಸಲಾಗಿದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇ.ಡಿ. ಮತ್ತು ಸಿಬಿಐ ಮೂಲಕ ಬಲವಂತದ ಕ್ರಮಗಳನ್ನು ಕೈಗೊಂಡಿರುವುದು ಮಾತ್ರವಲ್ಲದೆ ಪ್ರತಿಪಕ್ಷಗಳ ಹಣಕಾಸಿನ ಮೇಲೆ ಆದಾಯ ತೆರಿಗೆ ಇಲಾಖೆಗಳಿಂದ ಆಕ್ರಮಣಗಳು ನಡೆಯುತ್ತಿವೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ದಂಡದ ಕ್ರಮವನ್ನು ಎದುರಿಸಿದೆ ಮತ್ತು ಅದಕ್ಕೆ 2018–19ರ ಹಣಕಾಸು ವರ್ಷಕ್ಕೆ 135 ಕೋಟಿ ರೂಪಾಯಿಗಳ ತೆರಿಗೆ ವಿಧಿಸಲಾಗಿದೆ. ಐಟಿ ಇಲಾಖೆ ಈ ಹಣವನ್ನು ವಸೂಲಿ ಮಾಡುವ ಮೊದಲು ಪಕ್ಷದ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಇತರ ಪಕ್ಷಗಳ ವಿರುದ್ಧ ಕೂಡ ಇದೇ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಉದಾಹರಣೆಗೆ, ಸಿಪಿಐ (ಎಂ)ಗೆ ನೀಡಲಾಗಿದ್ದ ತೆರಿಗೆ ವಿನಾಯಿತಿಯನ್ನು 2016–17ರಲ್ಲಿ ವಾಪಸ್ ಪಡೆಯಲಾಗಿತ್ತು. ಹಾಗೂ ಪಕ್ಷ ದೇಶದಾದ್ಯಂತ ಹೊಂದಿರುವ ನೂರಾರು ಬ್ಯಾಂಕ್ ಖಾತೆಗಳ ಪೈಕಿ ಕೇವಲ ಒಂದನ್ನು ಪಟ್ಟಿ ಮಾಡದ ತಾಂತ್ರಿಕ ದೋಷಕ್ಕಾಗಿ 15.59 ಕೋಟಿ ರೂಪಾಯಿ ತೆರಿಗೆ ಪಾವತಿಸುವಂತೆ ಆದೇಶಿಸಲಾಗಿತ್ತು. ಈ ಅನಪೇಕ್ಷಿತ ಕ್ರಮದ ವಿರುದ್ಧ ಸಿಪಿಐ (ಎಂ) ದೆಹಲಿ ಹೈ ಕೋರ್ಟ್‌ಗೆ ಹೋಗಿದ್ದು ಈ ಕ್ಷಣಕ್ಕೆ ಈ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ.

ಚುನಾವಣಾ ಬಾಂಡ್ ಯೋಜನೆ ಮೂಲಕ ಪ್ರತಿಪಕ್ಷಗಳು ಕಾನೂನುಬದ್ಧವಾಗಿ ಹಣ ಪಡೆಯುವುದನ್ನು ತಡೆದ ಮತ್ತು ಚುನಾವಣಾ ಟ್ರಸ್ಟ್‌ಗಳ ಮೂಲಕ ಕಾರ್ಪೊರೇಟ್ ದೇಣಿಗೆಗಳ ಮೇಲೆ ಏಕಸ್ವಾಮ್ಯ ಸಾಧಿಸಿದ ನಂತರ ಮೋದಿ ಸರಕಾರ ಇದೀಗ ತೆರಿಗೆ ಶಿಕ್ಷೆಯ ಕ್ರಮಗಳ ಮೂಲಕ ಪ್ರತಿಪಕ್ಷಗಳನ್ನು ಆರ್ಥಿಕವಾಗಿ ಕತ್ತು ಹಿಸುಕುತ್ತಿದೆ.

ದೆಹಲಿಯಲ್ಲಿ ಚುನಾಯಿತ ಸರಕಾರದ ಅಧಿಕಾರಗಳ ಮೇಲೆ ವ್ಯವಸ್ಥಿತ ದಾಳಿ ನಡೆದ ನಂತರ ಕೇಜ್ರಿವಾಲ್‌ರನ್ನು ಬಂಧಿಸಲಾಗಿದೆ. ಪ್ರತಿಪಕ್ಷಗಳಂತೆ ವಿರೋಧ ಪಕ್ಷಗಳು ನಡೆಸುವ ಸರಕಾರಗಳು ಕೂಡ ಒಕ್ಕೂಟ ತತ್ವದ ಮೇಲಿನ ದಬ್ಬಾಳಿಕೆಗಳಿಂದ ಆಕ್ರಮಣಕ್ಕೆ ತುತ್ತಾಗಿವೆ.


ಸಂಸದೀಯ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೇ ಕುತ್ತು

ಕೇಜ್ರಿವಾಲ್‌ರ ಬಂಧನವನ್ನು ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಅಸ್ತಿತ್ವಕ್ಕೇ ಎರಗಿರುವ ಕುತ್ತಿನ ಭಾಗವಾಗಿ ಕಾಣಬೇಕಾಗುತ್ತದೆ. ಇಲ್ಲಿ ಯಾವುದೇ ಸೋಗು ಎನ್ನುವುದಿಲ್ಲ; ಮುಖವಾಡ ಸಂಪೂರ್ಣವಾಗಿ ಕಳಚಿ ಬಿದ್ದಿದೆ. ಸರ್ವಾಧಿಕಾರಿ ಆಡಳಿತವೊಂದು ಚುನಾವಣಾ ಸರ್ವಾಧಿಕಾರವನ್ನು ಸ್ಥಾಪಿಸಿದೆ. ಚುನಾವಣಾ ಆಯೋಗವು ಕಾರ್ಯಾಂಗದ ಕಪಿಮುಷ್ಠಿಯಲ್ಲಿದೆ ಹಾಗೂ ಉನ್ನತ ನ್ಯಾಯಾಂಗವು ಬೇಕಾಬಿಟ್ಟಿ ವರ್ತಿಸುತ್ತಿರುವ ಅಂಧಾದುಂಧಿ ಸರಕಾರವನ್ನು ಎದುರಿಸಲು ನಿರಾಕರಿಸುತ್ತಿದೆ.

ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜನರ ಬಳಿಗೆ ಹೋಗಿ ಪ್ರಜಾಪ್ರಭುತ್ವ ಮತ್ತು ನಾಗರಿಕರ ಹಕ್ಕುಗಳಿಗೆ ಎದುರಾಗಿರುವ ಅಪಾಯದ ವಿರುದ್ಧ ಅವರನ್ನು ಅಣಿನೆರೆಯಿಸದೆ ಅನ್ಯ ಮಾರ್ಗವಿಲ್ಲ.

ಮಾರ್ಚ್ 31ರಂದು ದೆಹಲಿಯಲ್ಲಿ ಇಂಡಿಯಾ ಕೂಟ ಬೃಹತ್ ರ್‍ಯಾಲಿಯನ್ನು ಸಂಘಟಿಸಿದೆ. ಆದರೆ, ಸಾಮೂಹಿಕ ಪ್ರತಿಭಟನೆಗಳು ದೆಹಲಿಗೆ ಮಾತ್ರವೇ ಸೀಮಿತಗೊಳ್ಳಬಾರದು. ಇಡೀ ದೇಶದಾದ್ಯಂತ ಅದು ಹರಡಬೇಕು. ರಾಜ್ಯದಾದ್ಯಂತ ಮತಪ್ರದರ್ಶನಗಳು ಮತ್ತು ರ್‍ಯಾಲಿಗಳನ್ನು ನಡೆಸುವ ಮೂಲಕ ಕೇರಳ ಇದಕ್ಕೆ ಮಾದರಿ ಹಾಕಿ ಕೊಟ್ಟಿದೆ. ಜನಪ್ರಿಯ ಪ್ರತಿಭಟನೆಗಳು ಹಾಗೂ ಸಾಮೂಹಿಕ ಪ್ರಚಾರಾಂದೋಳನಗಳು ನಡೆಯುವುದು ಅಗತ್ಯವಾಗಿದೆ. ಇಂಥ ಸಾರ್ವಜನಿಕ ಪ್ರತಿರೋಧಗಳು ಚುನಾವಣೆಯಲ್ಲಿ ನಿಶ್ಚಿತವಾಗಿಯೂ ಬಿಜೆಪಿ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡುತ್ತದೆ.

ಅನು: ವಿಶ್ವ



‘ಇಂಥ ಪರಿಸ್ಥಿತಿ ಬರಬಾರದಾಗಿತ್ತು’

–ದೇವನೂರ ಮಹಾದೇವ



‘ದ್ವೇಷ ಬಿಟ್ಟು ದೇಶ ಕಟ್ಟು’ ಆಂದೋಲನಕ್ಕಾಗಿ ಇಂದು ಮೈಸೂರಿನ ಹಿರಿಯ ಜೀವಿಗಳು ಅಂದರೆ ಮೈಸೂರಿನ ವಿವೇಕ ಇಲ್ಲಿ ಸೇರಿದೆ. ಈ ಹಿರಿಯ ಜೀವಿಗಳು ಒಕ್ಕೊರಲಿನಿಂದ ಎಲ್ಲ ಜಾತಿ ಧರ್ಮಗಳ ಜನರೂ ಸಹನೆ ಪ್ರೀತಿಯ ಸಹಬಾಳ್ವೆ ಮಾಡುವಂತೆ ಕೈ ಮುಗಿದು ಕೇಳಿವೆ.

ಇಂಥ ಪರಿಸ್ಥಿತಿ ಬರಬಾರದಿತ್ತು–ಅಂದರೆ ದೊಡ್ಡವರು ಹೀಗೆ ಕೈ ಮುಗಿದು ಕೇಳಿಕೊಳ್ಳುವಂತಹ ಪರಿಸ್ಥಿತಿಯನ್ನು ಯುವಜನತೆ ಹಾಗೂ ನಾಗರಿಕರು ತಂದುಕೊಳ್ಳಬಾರದಿತ್ತು.

ಇಂದು ಕುಣಿಯುತ್ತಿರುವ ಮತಾಂಧತೆ–ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಅಥವಾ ಯಾವುದೇ ಜಾತಿ ಜನಾಂಗದ್ದೇ ಇರಲಿ– ಇವುಗಳೆಲ್ಲ ಒಂದೇ ತಾಯಿಯ ಸಂತಾನ. ಇವುಗಳ ಬಹಿರಂಗ ಬೇರೆ ಬೇರೆಯಾಗಿ ಕಾಣಬಹುದು. ಆದರೆ ಇವುಗಳ ಅಂತರಂಗ ಒಂದೇ. ಯಾರದೇ ಮತಾಂಧತೆಯು ತಿಂದು ಹಾಕುವುದು ಮಾನವತೆಯನ್ನು ಮಾತ್ರ. ಹಿಡಿಯಷ್ಟು ಇರುವ ಮತಾಂಧತೆಗೆ ಸುಮ್ಮನೆ ವೀಕ್ಷಕರಾಗಿರುವ ಬಹುಸಂಖ್ಯಾತ ಜನ ಸಮುದಾಯ ಬೆಚ್ಚಿ ಅಸಹಕಾರ ತೋರಿದರೆ ಮಾತ್ರ ಈಗ ಉಳಿಗಾಲವಿದೆ.

ಇಲ್ಲದಿದ್ದರೆ ಯಾವುದೇ, ಯಾರದೇ ಮತಾಂಧತೆಯು ಮೊದಲು ಮಾಡುವುದು ತನ್ನವರ, ತನಗೆ ಸೇರಿದವರ ಕಣ್ಣುಗಳನ್ನು ಕಿತ್ತು ಅಂಧರನ್ನಾಗಿಸುವುದು. ಆಮೇಲೆ ಮಿದುಳು ಕಿತ್ತು ವಿವೇಕಶೂನ್ಯರನ್ನಾಗಿಸುವುದು. ನಂತರ ಹೃದಯ ಕಿತ್ತು ಕ್ರೂರಿಗಳನ್ನಾಗಿಸುವುದು. ಆಮೇಲೆ ನರಬಲಿ ಕೇಳುವುದು. ಇಂದು ಇದು ಹೆಚ್ಚುತ್ತಿದೆ.

ಬಹಳ ತುರ್ತಾಗಿ ನಮ್ಮ ಮಕ್ಕಳ ಕಣ್ಣು ಹೃದಯ ಮಿದುಳುಗಳನ್ನು ಮತಾಂಧತೆಯ ದವಡೆಯಿಂದ ರಕ್ಷಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಇಲ್ಲಿ ಸೇರಿರುವ ದೊಡ್ಡಜೀವಗಳ ತುಡಿತಕ್ಕೆ ಕೃತಜ್ಞತೆ ಸಲ್ಲಿಸುವೆ.

("ಎದೆಗೆ ಬಿದ್ದ ಅಕ್ಷರ" ಸಂಕಲನದಿಂದ ಆಯ್ದ ಒಂದು ಭಾಗ.)

ಮೋದಿ ಸರ್ಕಾರದ ಸುಳ್ಳು, ಹಸಿ ಸುಳ್ಳು, ಭರ್ಜರಿ ಸುಳ್ಳುಗಳು

ರೈತ ವಿರೋಧಿ, ಕೃಷಿ ವಿರೋಧಿ, ಮತ್ತು ಕಾರ್ಪೊರೇಟ್-ಪರ ಸರ್ಕಾರ

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಜಿ.ಎಸ್. ಮಣಿ

ಘೋಷಣೆಗಳು

ರೈತರ ಆದಾಯಗಳನ್ನು ದ್ವಿಗುಣಗೊಳಿಸಲಾಗುವುದು. ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಗಳನ್ನು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿಸಿ ರೈತರಿಗೆ ನೆರವು ನೀಡಲಾಗಿದೆ.

ಮೋದಿ ಸರಕಾರ ರೈತ ಪರವಾದದ್ದು, ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ (ಪಿ.ಎಮ್.ಎಫ್.ಬಿ.ವೈ.) ಬೆಳೆ ವಿಮಾ ಕ್ಷೇತ್ರದಲ್ಲಿ ರೈತರಿಗೆ ನೆರವಾಗಿ ದೊಡ್ಡ ಪರಿಣಾಮ ಬೀರಿದೆ.

ಮೋದಿ ಸರಕಾರ ಹಲವು ಸಾಲ ಮನ್ನಾ ಯೋಜನೆಗಳನ್ನು ಅನುಷ್ಟಾನಗೊಳಿಸಿದೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ಯೋಜನೆ ಬಹಳ ಜನ ರೈತರಿಗೆ ನೆರವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಜಮೀನು ಸ್ವಾಧೀನ ನೀತಿ ಜನ ಪರವಾಗಿದೆ. RECTLARR ಕಾನೂನು ಎಲ್ಲರಿಗೂ ಲಾಭದಾಯಕವಾದದ್ದು.

ಸತ್ಯಗಳು

ಈಚಿನ ವರ್ಷಗಳಲ್ಲಿ ರೈತರ ವರಮಾನವನ್ನು ದ್ವಿಗುಣಗೊಳಿಸುವ ಘೋಷಣೆ ಸರಕಾರೀ ದಸ್ತಾವೇಜುಗಳು ಮತ್ತು ಮಾಧ್ಯಮಗಳಿಂದ ನಾಪತ್ತೆಯಾಗಿವೆ. ಸರ್ಕಾರದ 2011-12 ಮತ್ತು 2018-19 ರ 'ನಿಜ ಪರಿಸ್ಥಿತಿಯ ಮೌಲ್ಯಮಾಪನ ಸಮೀಕ್ಷೆ'ಗಳು ಹೇಳುವಂತೆ ಕೃಷಿ ಕುಟುಂಬಗಳ ಕೃಷಿಯಿಂದ ಬರುವ ತಿಂಗಳ ವರಮಾನ ನಿಜ ಬೆಲೆಯಲ್ಲಿ 2855 ರೂಪಾಯಿಗಳಿಂದ ರಿಂದ 2816 ರೂಪಾಯಿಗಳಿಗೆ ಕುಸಿದಿದೆ (ಶೇ 1.4 ರಷ್ಟು).

ಕನಿಷ್ಟ ಬೆಂಬಲ ಬೆಲೆಗಳು ಮೋದಿ ಸರ್ಕಾರದಡಿ ಹಿಂದಿನ ಸರ್ಕಾರಗಳ ಅವಧಿಗಿಂತ ಕಡಿಮೆ ಪ್ರಮಾಣದಲ್ಲಿ ಹೆಚ್ಚುತ್ತಿವೆ. 2003-04 ಮತ್ತು 2012-13 ಗಳ ನಡುವೆ ಪ್ರಮುಖ ಆಹಾರ ಧಾನ್ಯಗಳ ಕನಿಷ್ಟ ಬೆಂಬಲ ಬೆಲೆ ಸರಾಸರಿ ಶೇ 8 ರಿಂದ 9 ರಷ್ಟು ಏರಿದರೆ, 2013-14 ಮತ್ತು 2023-04 ರ ನಡುವೆ ಪ್ರಮುಖ ಆಹಾರ ಧಾನ್ಯಗಳ ಕನಿಷ್ಟ ಬೆಂಬಲ ಬೆಲೆ ಸುಮಾರು ಶೇ 5 ರಷ್ಟು ಮಾತ್ರ ಏರಿದೆ. ಇದು ಲಾಗುವಾಡುಗಳ ಬೆಲೆಗಳು ಸತತವಾಗಿ ಮತ್ತು ತ್ವರಿತವಾಗಿ ಏರುತ್ತಿರುವ ಸಂದರ್ಭದಲ್ಲಿ ಆಗಿದೆ.

2014ರ ಚುನಾವಣಾ ಪ್ರಚಾರದ ಸಮಯದಲ್ಲಿ ಮೋದಿಯವರು ಸ್ವಾಮಿನಾಥನ್ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಟಾನಗೊಳಿಸುವುದಾಗಿ ಹೇಳಿದ್ದರು. ಅಂದರೆ ಕನಿಷ್ಟ ಬೆಂಬಲ ಬೆಲೆಯನ್ನು ಒಟ್ಟಾರೆ ಉತ್ಪಾದನಾ ವೆಚ್ಚದ ಮೇಲೆ ಶೇ 50 ರಷ್ಟು ಲಾಭವಿರಿಸಿ ನಿಗಧಿಪಡಿಸುವುದಾಗಿ (ಒಟ್ಟಾರೆ ವೆಚ್ಚ ಅಂದರೆ ತೆತ್ತ ವೆಚ್ಚಗಳು, ಕುಟುಂಬದ ಸದಸ್ಯರ ಕೂಲಿಯ ಮೊತ್ತ, ಹೊಂದಿರುವ ಬಂಡವಾಳ ಆಸ್ತಿಗಳ ಮೇಲಿನ ಬಾಡಿಗೆ, ಗೇಣಿಗೆ ಪಡೆದ ಜಮೀನಿನ ಬಾಡಿಗೆ ಮತ್ತು ಮಾಲೀಕತ್ವದ ಜಮೀನಿನ ಬಾಡಿಗೆ ಸೇರಿ) ಘೋಷಣೆ ಮಾಡಿದ್ದರು. ನಿಜದಲ್ಲಿ ಮೋದಿ ಸರಕಾರ ಕನಿಷ್ಟ ಬೆಂಬಲ ಬೆಲೆಯನ್ನು **A2 +FL**ಉತ್ಪಾದನಾ ವೆಚ್ಚದ ಆಧಾರದ ಮೇಲೆ ನಿಗಧಿ ಪಡಿಸಿತು- ಅಂದರೆ ಉತ್ಪಾದನಾ ವೆಚ್ಚದಲ್ಲಿ ಹೊಂದಿರುವ ಬಂಡವಾಳ ಆಸ್ತಿಯ ಮೇಲಿನ ಬಾಡಿಗೆ, ಮತ್ತು ಮಾಲೀಕತ್ವದ ಜಮೀನಿನ ಮೇಲಿನ ಬಾಡಿಗೆ ಒಳಗೊಂಡಿರುವುದಿಲ್ಲ. ಇಂತಹ ದೋಷಪೂರ್ಣ ವಿಧಾನದಿಂದ ರೈತರಿಗೆ ಘೋಷಿತ ಕನಿಷ್ಟ ಬೆಂಬಲ ಬೆಲೆಯಲ್ಲಿ ಕ್ವಿಂಟಾಲಿಗೆ 500 ರಿಂದ 600 ರೂ. ಗಳ ವರೆಗೆ ನಷ್ಟ ಆಗುತ್ತದೆ.

ರೈತರ ಆತ್ಮಹತ್ಯೆ

ಕೃಷಿ ಬಿಕ್ಕಟ್ಟಿನ ಒಂದು ಮುಖ್ಯ ಸಂಕೇತವೆಂದರೆ 1997 ಮತ್ತು 2022 (ನಂತರದ ಅವಧಿಯ ದತ್ತಾಂಶ ರಾಷ್ಟ್ರೀಯ ಅಪರಾಧ ಬ್ಯುರೋದ ಬಳಿ ಇಲ್ಲ) ನಡುವೆ ಮೂರೂವರೆ ಲಕ್ಷ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು!! 2014-2022 ರ ನಡುವೆ 1,00,474 (ಸುಮಾರು ಒಂದು ಲಕ್ಷ) ಆತ್ಮಹತ್ಯೆಗಳು ದಾಖಲಾಗಿರುವುದು ರಾಚುವಂತೆ ಕಾಣುತ್ತಿದೆ. ಒಟ್ಟು ಆತ್ಮಹತ್ಯೆಗಳಲ್ಲಿ ಈ ಪ್ರಮಾಣ ಬಹಳ ದೊಡ್ಡದು.

ಮೋದಿ ಸರ್ಕಾರದ ಎರಡನೇ ಅವಧಿ ರೈತರಿಗೆ ದೊಡ್ಡ ಬಿಕ್ಕಟ್ಟಿನದಾಗಿದೆ. ಈ ಅವಧಿಯಲ್ಲಿ, ಅಂದರೆ 2019 ರಲ್ಲಿ 10281 ರೈತರು ಆತ್ಮಹತ್ಯೆ ಮಾಡಿಕೊಂಡರೆ, 2020 ರಲ್ಲಿ ಈ ಸಂಖ್ಯೆ 10667 ಕ್ಕೆ, 2021 ರಲ್ಲಿ 10881 ಕ್ಕೆ ಮತ್ತು 2022 ರಲ್ಲಿ 11290 ಕ್ಕೆ ಏರಿತು!!

ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಹಗಳಿಗೆ ಪರಿಹಾರ ಕೊಡುವ ವಿಷಯದಲ್ಲಿ ಮೋದಿ ಸರಕಾರ ತಿರಸ್ಕಾರದ ಧೋರಣೆ ಹೊಂದಿದೆ. ಆತ್ಮಹತ್ಯೆ ಮಾಡಿಕೊಳ್ಳುವ ಬಹುತೇಕ ರೈತರು ಗೇಣಿದಾರರಿರುತ್ತಾರೆ. ಆದ್ದರಿಂದ ಅವರು ಪರಿಹಾರಕ್ಕೆ ಅನರ್ಹರು. ಮಹಿಳಾ ರೈತರು ಆತ್ಮಹತ್ಯೆ ಮಾಡಿಕೊಂಡರೆ



ಪರಿಹಾರಕ್ಕೆ ಪರಿಗಣಿಸುವುದಿಲ್ಲ ಯಾಕೆಂದರೆ ಜಮೀನು ಅವರ ಹೆಸರಿನಲ್ಲಿ ಇರುವುದಿಲ್ಲ/ ಅದು ಪುರುಷ ಸದಸ್ಯರ ಹೆಸರಿನಲ್ಲಿ ಇರುತ್ತದೆ.

ಬೆಳೆ ವಿಮೆ

ಸಮಗ್ರ ಬೆಳೆ ವಿಮೆ ಯೋಜನೆ ಎಂಬುದು ಬಂದೇ ಇಲ್ಲ. 2016 ರಲ್ಲಿ ಸರಕಾರ PMFBY ಅನ್ನು ಜಾರಿಗೊಳಿಸಿತು. ಆದರೆ ಅದರ ಅನುಷ್ಟಾನ ವೈಫಲ್ಯದಿಂದ ಕೂಡಿದೆ. ಅದರ ವ್ಯಾಪ್ತಿ/ಹರಹು ಕುಗ್ಗುತ್ತಲೇ ಬಂದಿದೆ. ಹಲವು ರಾಜ್ಯಗಳು ಅಂದರೆ ಬಿಹಾರ, ಪಶ್ಚಿಮ ಬಂಗಾಳ, ಆಂಧ್ರ ಪ್ರದೇಶ, ಗುಜರಾತ್ ಮತ್ತು ಜಾರ್ಖಂಡ್ ಈ ಯೋಜನೆಯಿಂದ ಹೊರಗೆ ಬಂದು ತಮ್ಮದೇ ಬೆಳೆ ವಿಮೆ ಯೋಜನೆ ನೀಡುತ್ತಿವೆ.

PMFBY ಯೋಜನೆ ಒಂದು ಸಮಗ್ರ ಬೆಳೆ ಮತ್ತು ಆದಾಯ ವಿಮೆ ಯೋಜನೆಯಲ್ಲ. ದೊಡ್ಡ ಪ್ರಮಾಣದ ಸಣ್ಣ ಮತ್ತು ಅತಿ ಸಣ್ಣ ರೈತರು ಈ ಯೋಜನೆಯಿಂದ ಹೊರಗಿದ್ದಾರೆ. ಯಾಕೆಂದರೆ ಅವರು ಈ ವಿಮೆಯ ಪ್ರೀಮಿಯಂ ತುಂಬಲು ಶಕ್ತರಲ್ಲ.

PMFBY ಯೋಜನೆಯ ವ್ಯಾಪ್ತಿಯಡಿ ಬರುವ ಭೂ ಕ್ಷೇತ್ರ 2017 ರಲ್ಲಿ 570.8 ಲಕ್ಷ ಹೆಕ್ಟೇರುಗಳಿಂದ 2022-23 ರಲ್ಲಿ 487.4 ಲಕ್ಷ ಹೆಕ್ಟೇರುಗಳಿಗೆ ಕುಸಿದಿದೆ.

ಪಾವತಿಸಿದ ಕ್ಲೇಮುಗಳು 2018 ರಲ್ಲಿ 29337 ಕೋಟಿ ರೂ ಇದ್ದದ್ದು 2022 ರಲ್ಲಿ 18043 ಕೋಟಿ ರೂ ಗಳಿಗೆ ಕುಸಿದಿದೆ!! ಅದೇ ಸಮಯದಲ್ಲಿ ಬಾಕಿ ಉಳಿದಿರುವ ಕ್ಲೇಮುಗಳ ಸಂಖ್ಯೆ ಹೆಚ್ಚಾಗಿದೆ.

PMFBY ಯೋಜನೆ ಖಾಸಗಿ ವಿಮೆ ಕಂಪನಿಗಳ ಲಾಭ ಬಡುಕತನಕ್ಕೆ ಎಡೆ ಮಾಡಿ ಕೊಟ್ಟಿದೆ. ಪಾವತಿಸದ ಕ್ಲೇಮುಗಳ ಸಂಖ್ಯೆ ಹೆಚ್ಚುತ್ತಿರುವಾಗಲೇ ಈ ಕಂಪನಿಗಳು 2016-17 ರಿಂದ 2020-21 ರ ವರೆಗೆ 24350 ಕೋಟಿ ರೂಗಳ ಲಾಭವನ್ನು ಗಳಿಸಿವೆ!!

ಸಾಲ ಮನ್ನಾ

ರಾಷ್ಟ್ರೀಯ ಮಟ್ಟದಲ್ಲಿ ಸಾಲ ಮನ್ನಾ ಮಾಡಿದ್ದು 2008 ರಲ್ಲಿ. ಜುಲೈ 2022 ರ ಭಾರತೀಯ ಸ್ಟೇಟ್ ಬ್ಯಾಂಕಿನ ಒಂದು ಅಧ್ಯಯನದ ಪ್ರಕಾರ 2014 ರ ನಂತರ ಸಾಲ ಮನ್ನಾದಿಂದ ಅರ್ಹ ಫಲಾನುಭವಿಗಳ ಶೇ 50 ರಷ್ಟು ಜನರಿಗೆ ಮಾತ್ರ ಮನ್ನಾದ ಲಾಭ ದೊರೆತಿದೆಯಂತೆ!!

ಬ್ಯಾಂಕಿನ ಸಾಲ ಮರುಪಾವತಿಸುವಲ್ಲಿ ರೈತರ ಪೂರ್ವಾಪರ ಅತ್ಯುತ್ತಮವಾಗಿದೆ. ಎನ್.ಪಿ.ಎ (ನಿಷ್ಕ್ರಿಯ ಆಸ್ತಿ ಅಥವಾ ಕಟ್ಟು ಬಾಕಿ ಸಾಲ) ಗಳಲ್ಲಿ ಕೃಷಿ ಸಾಲದ ಪಾಲು ಬರೀ ಶೇ 17.4 ರಷ್ಟಿದೆ. ಉದ್ದಿಮೆಗಳ ಸಾಲಕ್ಕೆ ಹೋಲಿಸಿದರೆ ಇದು ಅತೀ ಕಡಿಮೆ ಎನ್ನಬಹುದು. ಕೃಷಿಯ ಬೆಳವಣಿಗೆ ಅತಿ ಕಡಿಮೆ ಮತ್ತು ಕೃಷಿ ಬಿಕ್ಕಟ್ಟು ವ್ಯಾಪಕ ಎಂದುಕೊಂಡರೂ ಕೃಷಿಯಲ್ಲಿನ ಕಟ್ಟು ಬಾಕಿ ಸಾಲ ಅತೀ ಕಡಿಮೆ ಎನ್ನಬಹುದು.

ಕಳೆದ 10 ವರ್ಷಗಳಲ್ಲಿ, ಬ್ಯಾಂಕುಗಳು 15 ಲಕ್ಷ ಕೋಟಿ ರೂ ಗಳ ಸಾಲ ಮನ್ನಾ ಮಾಡಿದರೂ ಕೃಷಿ ಸಾಲದ 18 ಲಕ್ಷ ಕೋಟಿ ರೂಗಳ ಮನ್ನಾ ಮಾಡದೆ ಉಳಿದಿವೆ!!


ಭೂ ಸ್ವಾಧೀನ

2013 ರ ಸಮಂಜಸ ಪರಿಹಾರ ಮತ್ತು ಭೂ ಸ್ವಾಧೀನ, ಪುನರ್ವಸತಿ ಮತ್ತು ಮರುವಸತಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯಿದೆಯಲ್ಲಿ ತಿದ್ದುಪಡಿಯಲ್ಲಿ ರೈತರಿಗೆ ಮೋಸ ಮಾಡಲಾಗಿದೆ.

ಕಾರ್ಪೊರೇಟ್ ಲಾಭಿಯ ಒತ್ತಡಕ್ಕೆ ಮಣಿದು ಮೋದಿ ಸರಕಾರ RFCTLARR ಕಾಯಿದೆಗೆ ಡಿಸೆಂಬರ್ 29, 2014 ರಂದು ತಿದ್ದುಪಡಿ ಮಾಡಲು ಸುಗಿವಾಜ್ಞೆ ಹೊರಡಿಸಿತು. 2015 ರಲ್ಲಿ ಅದು RFCTLARR ಕಾಯಿದೆಗೆ ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಅನುಮೋದನೆ ಪಡೆಯಿತು. ಆದರೆ ರಾಜ್ಯ ಸಭೆಯಲ್ಲಿ ವಿರೋಧ ಪಕ್ಷಗಳು ರೈತರ ಸಂಘಟನೆಗಳ ವಿರೋಧದಿಂದಾಗಿ ತಡೆ ಹಿಡಿದವು. ಆದರೆ ಬಹಳ ರಾಜ್ಯಗಳು ಈ RFCTLARR ಕಾಯಿದೆಗೆ ತಿದ್ದುಪಡಿ ತಂದು ಭೂ ಸ್ವಾಧೀನಕ್ಕೆ ಒಪ್ಪಿಗೆ ಮತ್ತು ಸಾಮಾಜಿಕ ಪರಿಣಾಮದ ಲೆಕ್ಕ ಮಾಡುವುದನ್ನು ಹೊರಗಿಟ್ಟಿವೆ. ಇದರ ಪರಿಣಾಮವಾಗಿ ರಾಜ್ಯಗಳು ಲಕ್ಷಾಂತರ ಎಕರೆಗಳ ರೈತರ ಜಮೀನುಗಳನ್ನು ಕೃಷಿಯೆತರ ಉದ್ದೇಶಗಳಿಗೆ ಸ್ವಾಧೀನ ಪಡಿಸಿಕೊಳ್ಳುತ್ತಿವೆ. ಮೋದಿ ಸರಕಾರ ಕಾರ್ಪೊರೇಟ್ ಹಿತಾಸಕ್ತಿಗಳು ದೇಶದ ಭೂಮಿಯನ್ನು ಲೂಟಿ ಮಾಡಲು ಅನುವು ಮಾಡಿಕೊಡುತ್ತಿದೆ.

ಹೀಗೆ ಮೋದಿ ಸರಕಾರ ಸ್ವಾತಂತ್ರ್ಯಾನಂತರದಲ್ಲಿ ಅತ್ಯಂತ ರೈತ ವಿರೋಧಿ, ಕೃಷಿ ವಿರೋಧಿ, ಮತ್ತು ಕಂಪನಿ ಪರ ಸರ್ಕಾರವಾಗಿ ಪರಿಣಮಿಸಿದೆ. ಈ ಕಾರಣದಿಂದಲೇ ರೈತ ಹೋರಾಟ ಇಷ್ಟು ವ್ಯಾಪ್ತಿ ಮತ್ತು ತೀವ್ರತೆ ಹೊಂದಿರುವುದು. ಸಂಯುಕ್ತ ಕಿಸಾನ್ ಮೋರ್ಚಾದ ನೇತ್ರತ್ವದಲ್ಲಿ 2020-21 ರಲ್ಲಿ ಲಕ್ಷಾಂತರ ರೈತರನ್ನು ಅಣಿ ನೆರೆಯಿಸಿ. ದೇಶದಾದ್ಯಂತ ಹೋರಾಟದ ಕಿಚ್ಚು ಹೊತ್ತಿಸಿ ದೆಹಲಿಯ ಗಡಿಯಲ್ಲಿ ತೀವ್ರತರದ ಹೋರಾಟ ಮಾಡಿ ಮೋದಿ ಸರ್ಕಾರವನ್ನು ಮಣಿಸಿ ಅದು ಜಾರಿಗೆ ತಂದ ಮೂರು ದುಷ್ಟ ಕಾನೂನುಗಳನ್ನು ಹಿಂಪಡೆಯುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಆದರೆ ಮೋದಿ ಸರಕಾರ ರೈತರ ಜಮೀನು ಮತ್ತುಅವರ ಉತ್ಪನ್ನಗಳನ್ನು ಕಾರ್ಪೊರೇಟ್ ಧಣಿಗಳಿಗೆ ಕೊಟ್ಟು ರೈತರ ಬವಣೆ ಹೆಚ್ಚಿಸುವ ತನ್ನ ಹುನ್ನಾರಗಳಿಗೆ ಬದ್ಧವಾಗೇ ಇದೆ. ಇದರ ಪರಿಣಾಮವಾಗಿ ಹೋರಾಟ ಮರು ಪ್ರಾರಂಭವಾಗಿದೆ ಮತ್ತು ಮುಂದುವರಿಯುತ್ತಿದೆ.

ರೈತರನ್ನು ರಕ್ಷಿಸಿ, ಕೃಷಿಯನ್ನು ರಕ್ಷಿಸಿ!
ಬಿಜೆಪಿ ಯನ್ನು ಸೋಲಿಸಿ!



ಮೋದಿ ಸರ್ಕಾರದ ಸುಳ್ಳುಗಳು, ಸುಳ್ಳುಗಳು ಮತ್ತು ಇನ್ನಷ್ಟು ಭರ್ಜರಿ ಸುಳ್ಳುಗಳು

ದಲಿತರ ಹಕ್ಕುಗಳ ಮೇಲೆ ಸತತ ದಾಳಿ

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಎನ್. ನಾಗರಾಜ್

ಘೋಷಣೆಗಳು

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' (ಎಲ್ಲರ ಅಭಿವೃದ್ಧಿಗಾಗಿ ಎಲ್ಲರನ್ನೂ ಕೊಂಡೊಯ್ಯುವುದು) ಎಂಬ ಘೋಷಣೆಯೊಂದಿಗೆ ಮೋದಿ ಸರ್ಕಾರವು ಎಲ್ಲಾ ವಿಭಾಗಗಳು ಸುರಕ್ಷಿತತೆ ಮತ್ತು ಸುಭದ್ರತೆ ಕಾಣುವ ವಾತಾವರಣವನ್ನು ಸೃಷ್ಟಿಸಿದೆ ಎಂದು ಹೇಳಿಕೊಂಡಿದೆ.

ಪರಿಶಿಷ್ಟ ಜಾತಿ ಉಪಯೋಜನೆಗೆ ಕೇಂದ್ರದ ಬಜೆಟ್‌ನಲ್ಲಿ ಶೇ 16.6 ರಷ್ಟು ಹಂಚಿಕೆಯನ್ನು ಹೆಚ್ಚಿಸಲಾಗಿದೆ.

ವಾಸ್ತವ

ಮೋದಿ ನೇತೃತ್ವದ ಬಿಜೆಪಿ ಆಡಳಿತವು, ವಾಸ್ತವದಲ್ಲಿ ವಿಶೇಷವಾಗಿ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ವಿರುದ್ಧ ತಾರತಮ್ಯ ಮಾಡುವ ತನ್ನ ಮನುವಾದಿ ಕಾರ್ಯಸೂಚಿಯನ್ನು ಜಾರಿಗೊಳಿಸುವಲ್ಲಿ ನಿರತವಾಗಿದೆ.

ದೌರ್ಜನ್ಯಗಳು

2018 ರಲ್ಲಿ, ಸುಪ್ರೀಂ ಕೋರ್ಟ್ ತೀರ್ಪು ಎಸ್.ಸಿ, ಎಸ್.ಟಿಗಳ ದೌರ್ಜನ್ಯ ತಡೆ ಕಾಯ್ದೆಯನ್ನು (ಪಿಒಎ) ತೀವ್ರವಾಗಿ ದುರ್ಬಲಗೊಳಿಸಿತು. ಬಿಜೆಪಿ ಮೌನವಾಗಿ ಈ ತೀರ್ಪಿನ ಪರವಾಗಿತ್ತು. ದಲಿತ ಸಮುದಾಯದ ಸಂಘಟನೆಗಳು ಸುಪ್ರೀಂ ಕೋರ್ಟ್ ನ ತೀರ್ಪಿನ ವಿರುದ್ಧ, ರಾಷ್ಟ್ರದಾದ್ಯಂತ ಪ್ರಬಲವಾಗಿ ಪ್ರತಿಭಟನೆ ನಡೆಸಿದವು. ಅದರಲ್ಲೂ ಉತ್ತರ ಭಾರತದ ಹೆಚ್ಚಿನ ಭಾಗಗಳಲ್ಲಿ ಬಹಳ ಯಶಸ್ವಿಯಾದ ಬಂದ್ ಅನ್ನು ಸಂಘಟಿಸಿದ್ದವು. ಈ ಪ್ರತಿಭಟನೆಗಳ ವಿರುದ್ಧ ಉತ್ತರ ಪ್ರದೇಶ, ಮಧ್ಯಪ್ರದೇಶ, ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳು ಅನೇಕ ಸ್ಥಳಗಳಲ್ಲಿ ದಲಿತರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದವು. ಈ ಹಲ್ಲೆಯಲ್ಲಿ 9 ಕ್ಕೂ ಹೆಚ್ಚು ಜನರು ಕೊಲ್ಲಲ್ಪಟ್ಟರು. ಹಲವು ಕಡೆ ಗುರುತಿಸಲ್ಪಟ್ಟ ಬಿಜೆಪಿ ಕಾರ್ಯಕರ್ತರೇ ಹಲ್ಲೆ ನಡೆಸಿದ್ದು, ಗುಂಡು ಹಾರಿಸಿ ಹಲವರ ಸಾವು–ನೋವುಗಳಿಗೆ ಕಾರಣವಾದರು. ಈ ಬಿಜೆಪಿ ಕಾರ್ಯಕರ್ತರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲ. ದಲಿತರು ವಾಸಿಸುವ, ಕಾಲೋನಿಗಳು, ಕೊಳೆಗೇರಿಗಳಿಗೆ ನುಗ್ಗಿ, ಹಿಂಸಾತ್ಮಕ ಕೃತ್ಯಗಳನ್ನು ನಡೆಸಲಾಯಿತು. ಇದರಲ್ಲಿ ಅಪ್ರಾಪ್ತ ಮಕ್ಕಳು, ವಯಸ್ಕರು ಸೇರಿದಂತೆ ನೂರಾರು ಜನರನ್ನು ಹಿಂಸಿಸಲಾಯಿತು, ಹಲವರನ್ನು ಥಳಿಸಿ ಜೈಲಿಗೆ ಕಳುಹಿಸಲಾಯಿತು.

ಆದರೆ ಈ ಪ್ರಬಲ ಪ್ರತಿಭಟನೆಯ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್ ಮಾಡಿದ ಹಲವು ತಿದ್ದುಪಡಿಗಳನ್ನು, ರದ್ದುಗೊಳಿಸಿ, ಸಂಸತ್ತಿನಲ್ಲಿ ಶಾಸನವನ್ನು ಅಂಗೀಕರಿಸಬೇಕಾಯಿತು.

ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಈ ಕಾಯಿದೆಯಡಿಯಲ್ಲಿ ದಾಖಲಾದ ಅಪರಾಧಗಳ ಸಂಖ್ಯೆಯು ಪ್ರತಿ ವರ್ಷವೂ ಹೆಚ್ಚಾಗುತ್ತ ಬಂದಿದೆ. 2014ರಲ್ಲಿ 40,401 ಇದ್ದ ದೌರ್ಜನ್ಯ ಪ್ರಕರಣಗಳ ಸಂಖ್ಯೆ 2020ರಲ್ಲಿ 58,000 ಕ್ಕೇರಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ) ಪ್ರಕಾರ, 2021 ಮತ್ತು 2022 ರ ನಡುವೆ ಎಸ್.ಸಿ, ಗಳ ವಿರುದ್ಧ ಅಪರಾಧವು ಶೇಕಡಾ 13 ರಷ್ಟು ಹೆಚ್ಚಾಗಿದೆ. 2018 ಮತ್ತು 2022 ರ ನಡುವೆ, ಉತ್ತರ ಪ್ರದೇಶ ರಾಜ್ಯ ಒಂದರಲ್ಲೇ, 49,613 ದೌರ್ಜನ್ಯ ಮತ್ತು ದಾಳಿ ಪ್ರಕರಣಗಳು ನಡೆದಿವೆ. ದಲಿತರ ಮೇಲಿನ ದೌರ್ಜನ್ಯ ಪ್ರಕರಣದ ಪಟ್ಟಿಯಲ್ಲಿ ಉತ್ತರಪ್ರದೇಶ ದೇಶದಲ್ಲೇ ಅಗ್ರಸ್ಥಾನದಲ್ಲಿದೆ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ಅವಧಿಯಲ್ಲಿ ದಲಿತರ ಮೇಲೆ ದೌರ್ಜನ್ಯ ಎಸಗುವವರಿಗೆ, ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಮುಕ್ತ ರಕ್ಷಣೆ ನೀಡಿದ ಹಲವಾರು ಸಾಕ್ಷಿಗಳಿವೆ. ಗುಜರಾತ್ ರಾಜ್ಯದಲ್ಲಿ ನಡೆದ ಉನಾ ಘಟನೆ (2016) ಮತ್ತು ಉತ್ತರ ಪ್ರದೇಶದ ಹತ್ರಾಸ್ ಘಟನೆ (2020) ಗಳು ಇದಕ್ಕೆ ಸಾಕ್ಷಿಗಳಾಗಿವೆ.

ದಲಿತ ಮಹಿಳೆಯರ ಮೇಲಿನ ದೌರ್ಜನ್ಯ ಅಪರಾಧಗಳು ಹಲವು ಪಟ್ಟು ಹೆಚ್ಚಾಗಿವೆ. ವಿಶ್ವ ಸಂಸ್ಥೆಯ ವರದಿಯ ಪ್ರಕಾರ, ದಲಿತ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು 2015 ಮತ್ತು 2019 ರ ನಡುವೆ ಸುಮಾರು 50 ಪ್ರತಿಶತದಷ್ಟು ಹೆಚ್ಚಾಗಿದೆ.

ಶಾಲೆಗಳಲ್ಲಿ ಮತ್ತು ಐಐಟಿ, ಐಐಎಂ ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳು ಒಳಗೊಂಡಂತೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ವಿಧ್ಯಾರ್ಥಿಗಳು ಜಾತಿ ತಾರತಮ್ಯ, ಅವಮಾನ ಮತ್ತು ಹಿಂಸೆಯನ್ನು ಎದುರಿಸಬೇಕಾಗಿದೆ.

ಆರ್ಥಿಕ ಪರಿಸ್ಥಿತಿಗಳು

ಸರ್ಕಾರದ ಮೂಲಗಳ ಪ್ರಕಾರ, ಗ್ರಾಮೀಣ ಪ್ರದೇಶದ ದಲಿತರ ಮನೆಗಳಲ್ಲಿ, ಐದರಲ್ಲಿ ಒಂದು ಮನೆ ಮಾತ್ರ ಪಕ್ಕಾ (ಇಟ್ಟಿಗೆಯಿಂದ ಕಟ್ಟಿದ) ಮನೆ. ಮತ್ತು ನಗರ ಪ್ರದೇಶಗಳಲ್ಲಿ ಸುಮಾರು 16 ಪ್ರತಿಶತ ದಲಿತ ಮನೆಗಳು ಕೊಳೆಗೇರಿಗಳಲ್ಲಿವೆ ಎಂದು ಸರ್ಕಾರವೇ ಒಪ್ಪಿಕೊಳ್ಳುತ್ತದೆ. ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆಯ ಪ್ರಕಾರ ದಲಿತರಲ್ಲಿ ಬಡತನದ ಪ್ರಮಾಣವು ಶೇಕಡಾ 30 ಕ್ಕಿಂತ ಹೆಚ್ಚಾಗಿದೆ, ಇದು ರಾಷ್ಟ್ರೀಯ ಸರಾಸರಿ 21 ಶೇಕಡಾಕ್ಕಿಂತ ಹೆಚ್ಚಾಗಿದೆ. ಆರು ಮಂದಿ ಬಹು ಆಯಾಮದ ಬಡವರಲ್ಲಿ ಐದು ಮಂದಿ ಕೆಳ ಜಾತಿ ಅಥವಾ ಬುಡಕಟ್ಟುಗಳಿಂದ ಬಂದವರಾಗಿದ್ದಾರೆ.

ಎಸ್.ಸಿ. ಮತ್ತು ಎಸ್.ಟಿ.ಗಳ ಕಲ್ಯಾಣ ಯೋಜನೆಗಳಿಗೆ ಬಜೆಟ್‌ನ ಹಂಚಿಕೆಯನ್ನು ನಿರಂತರವಾಗಿ ಕಡಿತಗೊಳಿಸಲಾಗುತ್ತಿದೆ. ಬಿಜೆಪಿ ಸರ್ಕಾರವು ಎಸ್.ಸಿ, ಎಸ್.ಟಿ ಕಲ್ಯಾಣ ವೆಚ್ಚವನ್ನು ತೀವ್ರವಾಗಿ ಮೊಟಕುಗೊಳಿಸುವ ಮೂಲಕ ಆರ್ಥಿಕ ತಾರತಮ್ಯವನ್ನು ತೀವ್ರಗೊಳಿಸಿದೆ.

ಮಾರ್ಗಸೂಚಿಯಂತೆ, ಎಸ್.ಸಿ /ಎಸ್.ಟಿ ಗಳ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ಮೂಲಕ ಹಂಚಬೇಕು. ಆದರೆ, 2017–18 ರಲ್ಲಿ, ಮೋದಿ ಸರ್ಕಾರವು ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಗಳನ್ನು ಕೈಬಿಟ್ಟಿತು.. ಮಾತ್ರವಲ್ಲದೇ ಉಪಯೋಜನೆಯ ಜಾರಿಗಾಗಿ ಕಾಯಿದೆ ರೂಪಿಸಲು ಇಲ್ಲಿಯವರೆಗೂ ನಿರಾಕರಿಸಿಕೊಂಡು ಬಂದಿದೆ. ಜೊತೆಗೆ, ಕೇಂದ್ರದ ಬಜೆಟ್ ಮೂಲಕ ಪರಿಶಿಷ್ಟ ಜಾತಿಗಳು ಮತ್ತು ಪಂಗಡಗಳ ಅಭಿವೃದ್ಧಿಗೆ ಹಂಚಿಕೆ ಮಾಡುವ ಕಾರ್ಯವಿಧಾನವನ್ನು ಬುಡಮೇಲು ಮಾಡಿದೆ. ಅದರ ಎರಡನೇ ಅವಧಿಯಲ್ಲಿ (2019–20 ರಿಂದ 2023–24), ಎಸ್.ಸಿ. ಗಳಿಗೆ ಸರಾಸರಿ ಹಂಚಿಕೆಯು ಕೇಂದ್ರ ಮತ್ತು ಕೇಂದ್ರ ವಲಯದ ಪ್ರಾಯೋಜಿತ ಯೋಜನೆಗಳಿಗೆ ಮೀಸಲಿಟ್ಟ ಮೊತ್ತದ ಶೇಕಡಾ 11.06 ಮಾತ್ರ. ಸರಕಾರದ ಮಾರ್ಗಸೂಚಿ ಪ್ರಕಾರ ಶೇ.15ರಷ್ಟಿರಬೇಕು. ಇದರಲ್ಲಿ, ಎಸ್.ಸಿ ಗಳಿಗೆ ಉದ್ದೇಶಿತ ಯೋಜನೆಗಳಿಗೆ ನಿಗದಿಪಡಿಸಿದ ಮೊತ್ತವು ಕೇವಲ 3.3 ಪ್ರತಿಶತ ಮಾತ್ರ. ಉಳಿದವು ಸಾಮಾನ್ಯ ಯೋಜನೆಗಳ ಕಾಮಗಾರಿಗಳ ಖರ್ಚುಗಳಿಗೆ ಬಳಸಲಾಗಿದೆ.

ಮೀಸಲಾತಿಗಳು

ಸಮಾಜದ ದುರ್ಬಲ ವರ್ಗದ ಸಬಲೀಕರಣಕ್ಕಾಗಿ ಸಾಂವಿಧಾನಿಕವಾದ ನಿಬಂಧನೆಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬಿಜೆಪಿ ದುರ್ಬಲಗೊಳಿಸಿದೆ. ಕಾಯ್ದಿರಿಸಿದ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಭರ್ತಿ ಮಾಡುವಲ್ಲಿ ಅದರ ಸಾಧನೆ ದಿಗಿಲು ಹುಟ್ಟಿಸುವಂತಿದೆ. ಮಾರ್ಚ್ 24, 2022 ರಂದು ಸಂಸತ್ತಿನಲ್ಲಿ ನೀಡಲಾದ ಮಾಹಿತಿಯ ಪ್ರಕಾರ, ಕೇಂದ್ರ ಸರ್ಕಾರದ ಒಂಬತ್ತು ಸಚಿವಾಲಯಗಳು ಮತ್ತು ಇಲಾಖೆಗಳು (ರೈಲ್ವೆ, ಹಣಕಾಸು, ಪರಮಾಣು ಶಕ್ತಿ, ರಕ್ಷಣೆ, ವಸತಿ ಮತ್ತು ಗೃಹ ವ್ಯವಹಾರಗಳು ಇತ್ಯಾದಿ) ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು OBC ಗಳಿಗೆ 82,022 ಹುದ್ದೆಗಳನ್ನು ಕಾಯ್ದಿರಿಸಿವೆ. ಈ ಪೈಕಿ ಶೇ 42ರಷ್ಟು ಮಾತ್ರ ಭರ್ತಿಯಾಗಿದೆ. ಅದರಲ್ಲಿ, ಎಸ್.ಸಿ./ಎಸ್.ಟಿ. ಗಳಿಗೆ ನಗಣ್ಯ.

ವಿಶ್ವವಿದ್ಯಾನಿಲಯಗಳು ಮತ್ತು ಇತರ ಅತ್ಯುತ್ಕೃಷ್ಟ ಸಂಸ್ಥೆ ಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ನಲವತ್ತೈದು ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಎಸ್.ಸಿ. ಗಳ ಮೀಸಲಾತಿ ಖಾಲಿ ಹುದ್ದೆಗಳಲ್ಲಿ 42 ಪ್ರತಿಶತವನ್ನು ಭರ್ತಿ ಮಾಡಿಲ್ಲ. ಬೆಂಗಳೂರಿನ ಐ.ಐ.ಎಸ್.ಸಿ. ಸಂಸ್ಥೆಯದ್ದು ಈ ನಿಟ್ಟಿನಲ್ಲಿ ಅತ್ಯಂತ ಕೆಟ್ಟ ಉದಾಹರಣೆ. ಅದು ಎಸ್.ಸಿ. ಗಳಿಗೆ ಮೀಸಲಿಟ್ಟ ಶೇಕಡಾ 80 ರಷ್ಟು ಬ್ಯಾಕ್ ಲಾಗ್ ಖಾಲಿ ಉದ್ಯೋಗಗಳನ್ನು ತುಂಬಲೇ ಇಲ್ಲ.

ಖಾಸಗೀಕರಣ

ಮೋದಿ ಸರ್ಕಾರದ ಆಡಳಿತದಲ್ಲಿ ಸಾರ್ವಜನಿಕ ವಲಯದ ಕೈಗಾರಿಕೆಗಳು ಮತ್ತು ಸಾರ್ವಜನಿಕ ಸೇವೆಗಳು ಮತ್ತು ಉನ್ನತ ಶಿಕ್ಷಣದ ಖಾಸಗೀಕರಣದ ವೇಗವನ್ನು ತೀವ್ರಗತಿಯಲ್ಲಿ ಹೆಚ್ಚಿಸಲಾಗಿದೆ. ಇದು ಎಸ್.ಸಿ. ಮತ್ತು ಇತರೆ ವರ್ಗಗಳಿಗೆ ಈ ವಲಯಗಳಲ್ಲಿನ ಉದ್ಯೋಗಗಳನ್ನು ನಿಲುಕದಂತೆ ಗಣನೀಯವಾಗಿ ಮೊಟಕುಗೊಳಿಸಿ ಪ್ರತಿಕೂಲ ಪರಿಣಾಮ ಬೀರಿದೆ.

ಶಿಕ್ಷಣ

ವಂಚಿತ ಕೆಳ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಫೆಲೋಶಿಪ್‌ಗಳನ್ನು ತೀವ್ರವಾಗಿ ಮೊಟಕುಗೊಳಿಸಲಾಗಿದೆ. ಅಂಬೇಡ್ಕರ್ ಪೋಸ್ಟ್–ಮೆಟ್ರಿಕ್ಯುಲೇಷನ್ ವಿದ್ಯಾರ್ಥಿವೇತನದ ಸುಮಾರು 80 ಶತಕೋಟಿ ರೂ.ಗಳನ್ನು ಸಕಾಲಿಕವಾಗಿ ಬಿಡುಗಡೆ ಮಾಡದಿರುವುದರಿಂದ, ಸುಮಾರು 51 ಲಕ್ಷ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಿದೆ. ಅವರಲ್ಲಿ ಅನೇಕರು ಇದರಿಂದಾಗಿ ಕಾಲೇಜುಗಳಿಂದ ಹೊರಗುಳಿಯಬೇಕಾಯಿತು. ದಲಿತ ವಿದ್ಯಾರ್ಥಿಗಳ ವಿಶೇಷ ಕೌಶಲ್ಯಾಭಿವೃದ್ಧಿ ಮತ್ತು ಜಂಟಿ ಸಾಲದ ಹೆಚ್ಚಿನ ಯೋಜನೆಗಳು ಹಣದ ಕೊರತೆಯಿಂದಾಗಿ ಬಿಜೆಪಿ ಸರ್ಕಾರದ ಅಡಿಯಲ್ಲಿ ಹಿನ್ನಡೆ ಅನುಭವಿಸಿವೆ. ರಾಜ್ಯ ಸರಕಾರಗಳು ಆರಂಭಿಸಿದ ಇಂತಹ ಹಲವಾರು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರ ವಿವಿಧ ನೆಪಗಳನ್ನು ಹೇಳಿ ತನ್ನ ಧನಸಹಾಯವನ್ನು ನಿಲ್ಲಿಸಿದೆ. ಇದರಿಂದಾಗಿ, ಹಲವು ಕಡೆ ತರಬೇತಿ ಯೋಜನೆಗಳು ನಿಂತುಹೋಗಿವೆ ಅಥವಾ ಖಾಯಂ ಆಗಿ ಮುಚ್ಚಿವೆ. ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ ದಂತಹ ರಾಜ್ಯಗಳು ಶಿಕ್ಷಣದ ಎಲ್ಲಾ ಹಂತಗಳಲ್ಲಿ ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪಾವತಿಸದಿರುವುದನ್ನು ಗಮನಿಸಬೇಕು.

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ರೋಹಿತ್ ವೇಮುಲನ ಸಾಂಸ್ಥಿಕ ಹತ್ಯೆಯಿಂದಾಗಿ, ರಾಷ್ಟ್ರದಾದ್ಯಂತ ಭಾರೀ ಪ್ರತಿಭಟನೆಗಳನ್ನು ಕೆರಳಿಸಿತು. ಮಾತ್ರವಲ್ಲದೇ, ದಲಿತ ವಿದ್ಯಾರ್ಥಿಗಳ ಆತ್ಮಹತ್ಯೆಗಳ ಸಂಖ್ಯೆಯು ಹೆಚ್ಚುತ್ತಲೇ ಇವೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ, ಬಿಜೆಪಿ ಆಡಳಿತದ ಅವಧಿಯಲ್ಲಿ 2014 ಮತ್ತು 2021 ರ ನಡುವಿನಲ್ಲಿ, ಒಟ್ಟು 122 ವಿದ್ಯಾರ್ಥಿಗಳ ಆತ್ಮಹತ್ಯೆಗಳಲ್ಲಿ 68 ಎಸ್.ಸಿ. ಮತ್ತು ಎಸ್‌ಟಿ ವಿದ್ಯಾರ್ಥಿಗಳು ಎಂದು ಅಧಿಕೃತ ಅಂಕಿಅಂಶಗಳು ದಾಖಲಾಗಿದೆ. ಇದಲ್ಲದೆ, 2018 ರಿಂದೀಚೆಗೆ 13,000 ಕ್ಕೂ ಹೆಚ್ಚು ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳು IIT ಗಳು, IIM ಗಳು ಮತ್ತು ಕೇಂದ್ರೀಯ ವಿಶ್ವವಿದ್ಯಾಲಯಗಳಿಂದ ಹೊರಬರಬೇಕಾಗಿ ಬಂದಿದೆ. ಬಿಜೆಪಿ ಆಡಳಿದ ಅವದಿಯಲ್ಲಿ ನಡೆದ ಜಾತಿ ತಾರತಮ್ಯಕ್ಕೆ ಇದು ಮತ್ತೊಂದು ಸಾಕ್ಷಿ.

ಕೈಯಾರೆ ಮಲಸ್ವಚ್ಛ ಪದ್ಧತಿ

ಅಲಹಾಬಾದ್‌ನಲ್ಲಿ ಕುಂಭಮೇಳದ ನಂತರ ಪ್ರಧಾನಿ ಮೋದಿ ಮಹಿಳಾ ನೈರ್ಮಲ್ಯ ಕಾರ್ಮಿಕರ ಪಾದಗಳನ್ನು ತೊಳೆದಿದ್ದರು. ಆದರೆ, ಕೈಯಾರೆ ಮಲಸ್ವಚ್ಛ ಪದ್ಧತಿ ಕಾನೂನು ಬಾಹಿರವೆಂದು ನ್ಯಾಯಾಲಯಗಳ ತೀರ್ಪು ಗಳು ಇದ್ದಾಗ್ಯೂ, ಇಂತಹ ಹೆಚ್ಚಿನ ಪ್ರಕರಣಗಳು ಬಿಜೆಪಿ ಆಡಳಿತದ ಅನೇಕ ರಾಜ್ಯಗಳಲ್ಲಿ ಇವತ್ತಿಗೂ ಅವ್ಯಾಹತವಾಗಿ ಮುಂದುವರೆದಿದೆ ಮತ್ತು ಇದರಿಂದಾಗಿ, ಹಲವು ಕಡೆ ನೈರ್ಮಲ್ಯ ಕಾರ್ಮಿಕರ ಸಾವುಗಳಲ್ಲಿ ಇದು ಅಂತ್ಯಗೊಳ್ಳುತ್ತದೆ. ಯಾವುದೇ ಸುರಕ್ಷತಾ ಸಾಧನಗಳಿಲ್ಲದೆ ಅವಮಾನಕರ ಮತ್ತು ಅಪಾಯಕಾರಿ ಕೆಲಸಗಳನ್ನು ಮಾಡಲು ಅವರನ್ನು ಒತ್ತಾಯಿಸಲಾಗುತ್ತದೆ ಮತ್ತು ಅವರಲ್ಲಿ ಹೆಚ್ಚಿನವರು ಗುತ್ತಿಗೆ ಅಥವಾ ಹೊರಗುತ್ತಿಗೆ ಕಾರ್ಮಿಕರಾಗಿರುವುದರಿಂದ, ಈ ಸಾವಿನ ನಂತರ ಅವರ ಕುಟುಂಬಗಳಿಗೆ ಪರಿಹಾರ ಕೂಡ ದೊರೆಯುವುದಿಲ್ಲ. ವಿಪರ್ಯಾಸವೆಂದರೆ, ಕುಟುಂಬ ಸದಸ್ಯರಿಗೆ ಸಾವಿಗೆ ಕಾರಣವಾದ ಅದೇ ಅಪಾಯಕಾರಿ ಕೆಲಸವನ್ನು ನೀಡುವುದು 'ಪರಿಹಾರ'ದ ಸಾಮಾನ್ಯ ರೂಪವಾಗಿದೆ.

ದೇಶದಾದ್ಯಂತ 520 ಜಿಲ್ಲೆಗಳು ಕೈಯಾರೆ ಮಲಸ್ವಚ್ಛ ಪದ್ಧತಿ ಮುಕ್ತ ಎಂದು ಘೋಷಿಸಿಕೊಂಡಿವೆ ಮತ್ತು ಯಾಂತ್ರಿಕೃತ ನೈರ್ಮಲ್ಯ ಪರಿಸರ ವ್ಯವಸ್ಥೆಗಾಗಿ ಭಾರೀ ಪ್ರಚಾರದೊಂದಿಗೆ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಪ್ರಾರಂಭಿಸಲಾಗಿದೆ, ಆದರೆ ವಾಸ್ತವ ಪರಿಸ್ಥಿತಿ ವಿಭಿನ್ನವಾಗಿದೆ.

ಕೇರಳದಲ್ಲಿ ಮಾತ್ರ ಈ ಅಮಾನವೀಯ ಪದ್ಧತಿಯನ್ನು ತೊಡೆದುಹಾಕಲು ಸಾಧ್ಯವಾಗಿದೆ ಮತ್ತು ಅಪಾಯಕಾರಿ ನೈರ್ಮಲ್ಯ ಕಾರ್ಯಗಳಿಗಾಗಿ ರೋಬೋಟ್‌ಗಳನ್ನು ಬಳಸುವುದನ್ನು ಪ್ರಾರಂಭಿಸಿದ ಏಕೈಕ ರಾಜ್ಯವಾಗಿದೆ.

ಬಿಜೆಪಿಯ ನಿಜವಾದ ಉದ್ದೇಶ ದಲಿತರು ಮತ್ತು ಇತರ ದೀನದಲಿತ ವರ್ಗಗಳ ಕಲ್ಯಾಣವಲ್ಲ. ಸಂಸತ್ತಿನಲ್ಲಿ 400 ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆಯುವ ಮೂಲಕ ಬಿಜೆಪಿಯ ನಿಜವಾದ ಉದ್ದೇಶ ಸಂವಿಧಾನವನ್ನು ಬದಲಾಯಿಸುವುದಾಗಿದೆ ಎಂದು ಅದರ ಸಂಸದರೊಬ್ಬರು ಈಗಾಗಲೇ ಘೋಷಿಸಿದ್ದಾರೆ. ಮನು ಸ್ಮೃತಿಯಲ್ಲಿ ಸೂಚಿಸಲಾದ ಜಾತಿ ತಾರತಮ್ಯದ ಆಚರಣೆಗಳಿಗೆ ಪ್ರೋತ್ಸಾಹ ಹಾಗೂ ತಳಮಟ್ಟದಲ್ಲಿ ಅವನ್ನುಮುಂದುವರಿಸುವುದಕ್ಕಾಗಿ, ಸಂವಿಧಾನವನ್ನು ಪುನಃ ಬರೆಯಲು ಅದು ಬಯಸುತ್ತದೆ.

ದಲಿತ ಹಕ್ಕುಗಳನ್ನು ಸಂರಕ್ಷಿಸಿ!
ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಿ!

"ಇವುಗಳೆಲ್ಲಾ ಮೋದಿಯವರಿಗೆ ಗೊತ್ತಾ?" ರಾಜಕೀಯ ಪಕ್ಷಗಳು ಮತ್ತು ಉದ್ಯಮಿಗಳ ನಡುವಿನ 'ಕೊಡು ಕೊಳ್ಳುವಿಕೆಯ ವ್ಯವಹಾರ'ಗಳನ್ನು ಚುನಾವಣಾ ಬಾಂಡ್ ಗಳ ಡಾಟಾಗಳು ಬಹಿರಂಗಗೊಳಿಸಿದ ವಿಷಯವನ್ನು ನಾನು ನನ್ನ ಸಂಬಂಧಿಕರೊಬ್ಬರಿಗೆ ಹೇಳಿದಾಗ, ಅವರು ನನಗೆ ಪ್ರಶ್ನೆ ಮಾಡಿದ್ದು ಹೀಗೆ. ಅದರಲ್ಲೂ ಬಿಜೆಪಿ ದೇಣಿಗೆ ಪಡೆದಿರುವ ವಿವರಗಳನ್ನು ನೀಡಿದಾಗ ಮತ್ತು ಗೋಮಾಂಸ ರಫ್ತು ಕಂಪನಿಯಿಂದ ಬಿಜೆಪಿ ನಾಲ್ಕೂವರೆ ಕೋಟಿ ರೂ.ಗಳ ದೇಣಿಗೆ ಪಡೆದಿದೆ ಎಂದು ಹೇಳಿದಾಗ, ನರೇಂದ್ರ ಮೋದಿಯವರ ಮೇಲೆ ಅತಿಯಾದ ವಿಶ್ವಾಸ ಇಟ್ಟಿರುವ ಅವರು ಕ್ಷಣ ಕಾಲ ವಿಚಲಿತರಾದಂತೆ ಕಂಡರು. ಪ್ರಾಮಾಣಿಕರು, ಕಳಂಕರಹಿತರು, ಹಿಂದೂ ಧರ್ಮದ ರಕ್ಷಣೆಗೆಂದೇ ಅವತಾರ ಎತ್ತಿ ಬಂದವರು, ಗೋಮಾತೆ ರಕ್ಷಣೆಗೆ ಪಣತೊಟ್ಟವರು ಎಂದು ಅತಿಯಾಗಿ ನಂಬಿರುವವರ ಮನಸ್ಸಿಗೆ ಬಿಜೆಪಿಯ ಈ ಕಳ್ಳ ವ್ಯವಹಾರ ತೀರಾ ನೋವು ತಂದಿತ್ತು. ಗೋವನ್ನು ಪವಿತ್ರವೆಂದು ಪರಿಗಣಿಸುವ ಜನರಿಗೆ ಗೋಹತ್ಯೆ ಒಂದು ಭಾವನಾತ್ಮಕ ವಿಷಯವಾಗಿದೆ. ತಮ್ಮಲ್ಲಿರುವ ಧಾರ್ಮಿಕ ಭಾವನೆಗಳನ್ನು ಸಂಘಪರಿವಾರದವರು ದುರುಪಯೋಗ ಪಡಿಸಿಕೊಂಡರೆಂದು, ಅವರನ್ನು ನಂಬಿ ತಾವು ಮೋಸಹೋದೆವು ಎಂಬ ಭಾವನೆ ಅವರ ಮಾತುಗಳಲ್ಲಿ ಎದ್ದು ಕಾಣುತ್ತಿತ್ತು.

ಗೋಮಾಂಸ ರಫ್ತು ಕಂಪನಿಗಳಿಂದ ಬಿಜೆಪಿ ಪಕ್ಷಕ್ಕೆ 4.5 ಕೋಟಿ ರೂ. ದೇಣಿಗೆ

ಕಳಚಿ ಬಿದ್ದ ಗೋರಕ್ಷರೆಂಬ ಮುಖವಾಡ

ಸಿ. ಸಿದ್ದಯ್ಯ

ಮುಂಬೈ ಮೂಲದ ಎರಡು ಗೋಮಾಂಸ ರಫ್ತು ಕಂಪನಿಗಳಾದ ಅಲ್ಲಾನಾಸನ್ಸ್ ಪ್ರೈವೇಟ್ ಲಿಮಿಟೆಡ್ (Allanasons Ltd) ಮತ್ತು ಫ್ರಿಗೊರಿಫಿಕೊ ಅಲ್ಲಾನಾ ಪ್ರೈವೇಟ್ ಲಿಮಿಟೆಡ್ ಹೆಸರು ಚುನಾವಣಾ ಬಾಂಡ್‌ಗಳ ಖರೀದಿದಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿವೆ. 2019 ರಲ್ಲಿ ಮಹಾರಾಷ್ಟ್ರದಲ್ಲಿ ಸಮ್ಮಿಶ್ರ ಸರ್ಕಾರ ನಡೆಸುತ್ತಿದ್ದಾಗ ಭಾರತೀಯ ಜನತಾ ಪಕ್ಷ ಮತ್ತು ಶಿವಸೇನೆಗೆ ಈ ಕಂಪನಿಗಳು ದೇಣಿಗೆ ನೀಡಿರುವುದು ಕಂಡುಬಂದಿದೆ. ಅಲ್ಲಾನಾ ಗ್ರೂಪ್, ಶಿವಸೇನೆಗೆ ರೂ. 5 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು, ಬಿಜೆಪಿಗೆ ರೂ. 2 ಕೋಟಿ ಮೌಲ್ಯದ ಬಾಂಡ್‌ಗಳನ್ನು ದಾನ ಮಾಡಿದೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಮತ್ತು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, Common Cause ಇವರ 6 ವರ್ಷಗಳ ಕಾಲ ಸುಪ್ರೀಂ ಕೋರ್ಟ್‌ನಲ್ಲಿ ನಡೆಸಿದ ಸುದೀರ್ಘ ಕಾನೂನು ಹೋರಾಟದ ನಂತರ ಮತ್ತು ನ್ಯಾಯಾಲಯದ ಅಂತಿಮ ಆದೇಶದ ನಂತರ, ಮಾರ್ಚ್ 21 ರಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದ್ದು, ವಿಶಿಷ್ಟ ಆಲ್ಫಾ–ಸಂಖ್ಯೆಯ ಕೋಡ್‌ಗಳು ಸೇರಿದಂತೆ ಚುನಾವಣಾ ಬಾಂಡ್‌ಗಳ ಡೇಟಾದ ಸಂಪೂರ್ಣ ಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿಐ) ಸಲ್ಲಿಸಿದೆ. ಇದರಿಂದ ಯಾವ ಕಂಪನಿಗಳು, ಯಾವ ರಾಜಕೀಯ ಪಕ್ಷಕ್ಕೆ ಎಷ್ಟು ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ ಎಂಬುದನ್ನು ತಿಳಿಯಲು ಸಾಧ್ಯವಾಗಿದೆ.

9 ಜುಲೈ 2019 ರಂದು ಅಲ್ಲಾನಾ ಕೋಲ್ಡ್ ಸ್ಟೋರೇಜ್, ಅಲ್ಲಾನಾಸನ್ಸ್ ಪ್ರೈವೇಟ್ ಲಿಮಿಟೆಡ್, ಫ್ರಿಗೊರಿಫಿಕೊ ಅಲ್ಲಾನಾ ಪ್ರೈವೇಟ್ ಲಿಮಿಟೆಡ್‌ನಿಂದ ರೂ.1 ಕೋಟಿ ಮೌಲ್ಯದ ಐದು ಬಾಂಡ್‌ಗಳನ್ನು ಖರೀದಿಸಲಾಗಿದೆ. ಶಿವಸೇನೆಯು ಈ ಐದು ಚುನಾವಣಾ ಬಾಂಡ್‌ಗಳನ್ನು 11 ಜುಲೈ 2019 ರಂದು ನಗದು ಮಾಡಿದೆ ಎಂದು ದಿ ಕ್ವಿಂಟ್ ಸುದ್ದಿ ಮಾಧ್ಯಮ ವರದಿ ಮಾಡಿದೆ.

ಅಲ್ಲಾನಾ ಕೋಲ್ಡ್ ಸ್ಟೋರೇಜ್ 1 ಕೋಟಿ ಮೌಲ್ಯದ ಬಾಂಡ್‌ಗಳನ್ನು ಖರೀದಿಸಿದೆ, ಇವುಗಳನ್ನು ಜುಲೈ 2019 ರಲ್ಲಿ ಶಿವಸೇನೆ ನಗದು ಮಾಡಿದೆ.

ಅಲ್ಲಾನಾಸನ್ಸ್ ಪ್ರೈವೇಟ್ ಲಿಮಿಟೆಡ್ 9 ಅಕ್ಟೋಬರ್ 2019 ರಂದು ರೂ.1 ಕೋಟಿ ಮೌಲ್ಯದ ಮತ್ತೊಂದು ಬಾಂಡ್ ಅನ್ನು ಖರೀದಿಸಿತು. ಬಿಜೆಪಿ ಈ ಬಾಂಡ್ ಅನ್ನು 19 ಅಕ್ಟೋಬರ್ 2019 ರಂದು ನಗದು ಮಾಡಿದೆ.

Frigerio Conserva Allana 22 ಜನವರಿ 2020 ರಂದು ರೂ.1 ಕೋಟಿ ಮೌಲ್ಯದ ಮತ್ತೊಂದು ಬಾಂಡ್ ಖರೀದಿಸಿತು. ಬಿಜೆಪಿ ಈ ಬಾಂಡ್ ಅನ್ನು 3 ಫೆಬ್ರವರಿ 2020 ರಂದು ನಗದು ಮಾಡಿದೆ.

ವಿಧಾನಸಭಾ ಚುನಾವಣೆಗೂ ಮುನ್ನ ಐಟಿ ದಾಳಿ

2019 ರ ಜನವರಿ ತಿಂಗಳ ಮೊದಲ ವಾರದಲ್ಲಿ, ಆದಾಯ ತೆರಿಗೆ ಇಲಾಖೆಯ ಮುಂಬೈ ವಿಭಾಗವು ಅಲ್ಲಾನಾ ಗ್ರೂಪ್ ಮೇಲೆ ದಾಳಿ ನಡೆಸಿತು. ಎಕನಾಮಿಕ್ ಟೈಮ್ಸ್ ಪ್ರಕಾರ ಎರಡು ದಿನಗಳ ಕಾಲ 100 ಕ್ಕೂ ಹೆಚ್ಚು ಘಟಕಗಳಲ್ಲಿ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ.


ಅದೇ ವರ್ಷ ಏಪ್ರಿಲ್‌ನಲ್ಲಿ, ಈ ಕಂಪನಿಯು 2,000 ಕೋಟಿ ರೂಪಾಯಿ ತೆರಿಗೆ ವಂಚಿಸಿದೆ ಎಂದು ಇಲಾಖೆ ಆರೋಪಿಸಿದೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಮುನ್ನ ಈ ಕಂಪನಿಯು ಚುನಾವಣಾ ಬಾಂಡ್‌ಗಳನ್ನು ಖರೀದಿಸಿದೆ.

ವಾಸ್ತವವಾಗಿ, ಮೇಲೆ ತಿಳಿಸಿದಂತೆ 2019ರ ಅಕ್ಟೋಬರ್ ನಲ್ಲಿ ರಾಜ್ಯ ಚುನಾವಣೆಯ ಸಮೀಪದಲ್ಲಿ ಬಿಜೆಪಿಯಿಂದ 1 ಕೋಟಿ ರೂಪಾಯಿ ಮೌಲ್ಯದ ಒಂದು ಬಾಂಡ್ ಅನ್ನು ಎನ್‌ಕ್ಯಾಶ್ ಮಾಡಲಾಗಿದೆ.

2014–2015ರಲ್ಲೂ 2.5 ಕೋಟಿ ದೇಣಿಗೆ ಪಡೆದ ಬಿಜೆಪಿ

2014–2015ರಲ್ಲಿಯೂ ಬಿಜೆಪಿ ಗೋಮಾಂಸ ರಫ್ತು ಕಂಪನಿಗಳಿಂದ 2.5 ಕೋಟಿ ರೂ. ದೇಣಿಗೆ ಪಡೆದಿದೆ ಎಂದು ಡಿಸೆಂಬರ್ 16, 2015 ರ ಟೈಮ್ಸ್ ಆಫ್ ಇಂಡಿಯಾ ವರದಿ ಹೇಳುತ್ತದೆ. 2014 ರ ಲೋಕಸಭಾ ಚುನಾವಣೆಯ ಪೂರ್ವದಲ್ಲಿ, ಫ್ರಿಗೊರಿಫಿಕೊ ಅಲ್ಲಾನಾ ಲಿಮಿಟೆಡ್, ಫ್ರಿಜೆರಿಯೊ ಕನ್ಸರ್ವಾ ಅಲ್ಲಾನಾ ಲಿಮಿಟೆಡ್ ಮತ್ತು ಇಂಡಾಗ್ರೋ ಫುಡ್ಸ್ ಲಿಮಿಟೆಡ್ ಈ ಮೂರು ಕಂಪನಿಗಳು ಬಿಜೆಪಿ ಪಕ್ಷಕ್ಕೆ 2.5 ಕೋಟಿ ರೂ. ದೇಣಿಗೆ ಕೊಟ್ಟಿವೆ. 50 ಲಕ್ಷ ರೂ. ಗಳಂತೆ ನಾಲ್ಕು ವಹಿವಾಟುಗಳಲ್ಲಿ ವಿಜಯಾ ಬ್ಯಾಂಕ್ ಮೂಲಕ 2 ಕೋಟಿ ರೂಪಾಯಿ ದೇಣಿಗೆ ಕೊಟ್ಟಿದೆ.

ಶೇ.100 ತೆರಿಗೆ ವಿನಾಯಿತಿಯನ್ನು ಪಡೆಯಲು ರಾಜಕೀಯ ಪಕ್ಷಗಳು ವಾರ್ಷಿಕವಾಗಿ ಯಾವುದೇ ವ್ಯಕ್ತಿ ಅಥವಾ ಕಂಪನಿಯಿಂದ ಸ್ವೀಕರಿಸಿದ 20,000 ರೂ.ಗಿಂತ ಹೆಚ್ಚಿನ ಕೊಡುಗೆಯ ವಿವರಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ಜನತಾ ಪ್ರಾತಿನಿಧ್ಯ ಕಾಯಿದೆ, 1951 ರ ಸೆಕ್ಷನ್ 29C ಕಡ್ಡಾಯಗೊಳಿಸುತ್ತದೆ. ಈ ಕಾರಣದಿಂದಾಗಿ, ಗೋಮಾಂಸ ಕಂಪನಿಗಳ ನಡುವಿನ ತಮ್ಮ ಪಕ್ಷದ ರಹಸ್ಯ ವ್ಯವಹಾರವನ್ನು ಬಹಿರಂಗಪಡಿಸಲು ಇಚ್ಛೆ ಇಲ್ಲದಿದ್ದರೂ, ಬಿಜೆಪಿ ಅನಿವಾರ್ಯವಾಗಿ 2014–2015ರ ತಾನು ಪಡೆದ ದೇಣಿಗೆ ಪಟ್ಟಿಯನ್ನು ನವೆಂಬರ್‌ನಲ್ಲಿ ಸಲ್ಲಿಸಿತ್ತು. ಮುಂದೆ ಇಂತಹ ರಹಸ್ಯ ವ್ಯವಹಾರಗಳು ಬಹಿರಂಗವಾಗದಿರಲಿ ಎಂದೇ ನಂತರದ ದಿನಗಳಲ್ಲಿ ಚುನಾವಣಾ ಬಾಂಡ್ ಎಂಬ ಹೊಸ ವ್ಯವಸ್ಥೆ ಜಾರಿಗೆ ತಂದರು.



Rose Revolution ಪ್ರಸ್ತಾಪ

ವಿಚಿತ್ರವೆಂದರೆ, ಆ ಸಮಯದಲ್ಲಿಯೂ ನರೇಂದ್ರ ಮೋದಿ ಅವರು ಗೋಮಾಂಸ ರಫ್ತು ವಿಷಯವನ್ನು ಚುನಾವಣಾ ಪ್ರಚಾರದ ಅಸ್ತ್ರವನ್ನಾಗಿಸಿದ್ದರು!! ಕಾಂಗ್ರೆಸ್ ಪಕ್ಷವನ್ನು ಟೀಕಿಸಲು 2014ರ ಏಪ್ರಿಲ್‌ನಲ್ಲಿ ಬಿಹಾರದ ನವಾಡದಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಅವರು "ಗುಲಾಬಿ ಕ್ರಾಂತಿ" (Rose Revolution) ಅನ್ನು ಉಲ್ಲೇಖಿಸಿದ್ದರು. ಹಿಂದಿನ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲಯನ್ಸ್ (ಯುಪಿಎ) ಸರ್ಕಾರವು ಕಸಾಯಿಖಾನೆಗಳು ಮತ್ತು ಮಾಂಸ ರಫ್ತುದಾರರನ್ನು ಉತ್ತೇಜಿಸುವ ನೀತಿಗಳನ್ನು ಟೀಕಿಸಲು, ಹಸಿ ಮಾಂಸದ ಬಣ್ಣವನ್ನು 'ಗುಲಾಬಿ ಕ್ರಾಂತಿ' ಎಂದು ಪ್ರಸ್ತಾಪಿಸಿದ್ದರು.

2015ರಲ್ಲಿ ನಡೆದ ದಾದ್ರಿ ಹತ್ಯೆ ಮತ್ತು ಕೇರಳ ಹೌಸ್ ದಾಳಿಯಂತಹ ಘಟನೆಗಳು "ಅಸಹಿಷ್ಣುತೆ" ಕುರಿತು ಚರ್ಚೆಗೆ ಕಾರಣವಾಯಿತು ಮತ್ತು ಹಲವಾರು ಬಿಜೆಪಿ ಸದಸ್ಯರು ಗೋಮಾಂಸ ಸೇವನೆಯ ವಿರುದ್ಧ ಮಾತನಾಡಿದ್ದರು.

ಇಲ್ಲಿ ಗೋಮಾಂಸ ಇಲ್ಲವೇ?

ಅಲ್ಲಾನಾಸನ್ಸ್ ಪ್ರೈವೇಟ್ ಲಿಮಿಟೆಡ್ ಭಾರತದಲ್ಲಿ ನಂ.1 ಗೋಮಾಂಸ ರಫ್ತುದಾರ ಕಂಪನಿ. ಇದು ಭಾರತದಿಂದ ಒಟ್ಟು ಗೋಮಾಂಸ ರಫ್ತಿನಲ್ಲಿ ಶೇ. 31.29 ಪ್ರಮಾಣವನ್ನು ರಫ್ತು ಮಾಡುತ್ತದೆ. ಅವರ ವಾರ್ಷಿಕ ವಹಿವಾಟು, ಅವರೇ ಹೇಳುವಂತೆ ರೂ.500 ರಿಂದ 1,000 ಕೋಟಿ.

"ಭಾರತದಲ್ಲಿ ಎಮ್ಮೆ ಮಾಂಸ ರಫ್ತು ಮಾರುಕಟ್ಟೆಯಲ್ಲಿ ಪ್ರಾಬಲ್ಯ **ಪುಟ 14 ಕ್ಕೆ**



"ಗೋವು ಹಿಂದೂಗಳಿಗೆ ಮಾತೆ ಇದ್ದಹಾಗೆ, ಅವುಗಳು ನಮಗೆ ಹಾಲು ಕೊಡುತ್ತವೆ. ಗೋವುಗಳನ್ನು ಕೊಂದು ತಿಂದರೆ ನಮ್ಮ ಹೆತ್ತ ತಾಯಿಯನ್ನೇ ಕೊಂದು ತಿಂದಂತೆ, ಯಾರಾದರೂ ಹೆತ್ತ ತಾಯಿಯನ್ನು ಕೊಂದು ತಿನ್ನುತ್ತಾರೆಯೇ? ಗೋಭಕ್ಷಕರು ರಾಕ್ಷಸರು, ಅವರು ನಮ್ಮ ಗೋಮಾತೆಯನ್ನೇ ಕೊಂದು ತಿನ್ನುತ್ತಾರೆ, ಅವರು ಹಿಂದೂ ಧರ್ಮದ ವಿರೋಧಿಗಳು..." ಹೀಗೆ ಬಿಜೆಪಿ ಮತ್ತು ಹಿಂದುತ್ವವಾದಿ ನಾಯಕರು ಪುಂಕಾನುಪುಂಕ ಭಾಷಣ ಬಿಗಿದು, ಜನರಲ್ಲಿನ ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಾರೆ. ಗೋವುಗಳನ್ನು ಪೂಜ್ಯ ಭಾವನೆಯಿಂದ ನೋಡುವ ಒಂದಷ್ಟು ಹಿಂದೂಗಳೂ ಬಿಜೆಪಿಯವರ ಇಂತಹ ಕಪಟ ಮಾತುಗಳನ್ನು ನಂಬಿ ಅವರನ್ನು ಬೆಂಬಲಿಸುತ್ತಾರೆ. ಕೆಲವು ಯುವಜನರಂತೂ ತಾವೂ ಗೋರಕ್ಷಕರು ಎನ್ನುತ್ತಾ ದಾಳಿಗೆ ಸಿದ್ಧರಾಗಿ ನಿಂತುಬಿಡುತ್ತಾರೆ. ಗೋರಕ್ಷಣೆಯ ಹೆಸರಿನಲ್ಲಿ ಮುಸ್ಲೀಮರು, ದಲಿತರ ಮೇಲೆ ಹಲ್ಲೆ ಮಾಡುತ್ತಾರೆ. ಮತ್ತೊಂದೆಡೆ, ಗೋವುಗಳನ್ನು ಕಡಿದು, ವಿದೇಶಗಳಿಗೆ ಗೋಮಾಂಸ ರಫ್ತುಮಾಡುವ ದೊಡ್ಡ ಕಂಪನಿಗಳಿಂದ ದೇಣಿಗೆ ಹೆಸರಿನಲ್ಲಿ ಬಿಜೆಪಿ ಕೋಟ್ಯಾಂತರ ರೂಪಾಯಿ ಹಣ ಪಡೆಯುತ್ತದೆ.

ಮೋದಿ–10 ವರ್ಷಗಳು / ಭಾಗ–43

ಗೋಮಾಂಸ ರಫ್ತಿನಲ್ಲಿ ವಿಶ್ವದಲ್ಲಿ ಭಾರತಕ್ಕೆ ಎರಡನೆಯ ಸ್ಥಾನ

ಭಾರತದಲ್ಲಿ ಸುಮಾರು 150 ಗೋಮಾಂಸ ರಫ್ತುದಾರರಿದ್ದಾರೆ. ಗೋಮಾಂಸ ರಫ್ತಿನ ವರದಿಯ ಪ್ರಕಾರ ಭಾರತವು ವಿಯೆಟ್ನಾಂ, ಮಲೇಷ್ಯಾ, ಇರಾಕ್, ಅಲ್ಜೀರಿಯಾ ಸೇರಿದಂತೆ 50 ದೇಶಗಳಿಗೆ ಗೋಮಾಂಸವನ್ನು ರಫ್ತು ಮಾಡುತ್ತದೆ. ಭಾರತವು ವರ್ಷಕ್ಕೆ ಪ್ರಪಂಚದಾದ್ಯಂತ 891.9 USD ಮಿಲಿಯನ್ (ಅಂದಾಜು 7420 ಕೋಟಿ ರೂಪಾಯಿ) ಮೌಲ್ಯದೊಂದಿಗೆ ಎಮ್ಮೆ/ಹಸು ಮಾಂಸವನ್ನು ರಫ್ತು ಮಾಡುತ್ತಿದೆ. 2023ರ ಏಪ್ರಿಲ್ ತಿಂಗಳ ಒಂದು ವರದಿಯಂತೆ ರಂಜಾನ್ ಹಬ್ಬದ ಆ ಒಂದು ತಿಂಗಳಿನಲ್ಲಿ 14,75,000 ಟನ್ ಗಳಷ್ಟು ಗೋಮಾಂಸ ಮತ್ತು ಎಮ್ಮೆ ಮಾಂಸ ರಫ್ತಾಗಿದೆ. ಅಲ್ಲಾನಾಸನ್ಸ್ ಪ್ರೈ. ಲಿಮಿಟೆಡ್ ಭಾರತದ ಅತಿ ದೊಡ್ಡ ಗೋಮಾಂಸ ರಫ್ತುದಾರನಾಗಿದ್ದು, ನಂತರದ ಕಂಪನಿಗಳೆಂದರೆ ಅಲ್–ಹಮ್ದ್ ಫುಡ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮಿರ್ಹಾ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್.

ಮೋದಿ ಸರ್ಕಾರದ ಸುಳ್ಳುಗಳು, ಇನ್ನಷ್ಟು ಸುಳ್ಳುಗಳು ಮತ್ತು ಭರ್ಜರಿ ಸುಳ್ಳುಗಳು

ಕೃಷಿ ಕಾರ್ಮಿಕರೂ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ

ವಸಂತರಾಜ್ ಎನ್.ಕೆ.

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಘೋಷಣೆಗಳು

ಗ್ರಾಮೀಣ ಜನತೆಯ ಆದಾಯ ಹೆಚ್ಚಾಗಿದೆ.

MGREGS ಗಾಗಿ ಬಜೆಟ್ ಹಂಚಿಕೆಯನ್ನು ಹೆಚ್ಚಿಸಲಾಗಿದೆ.

ಗ್ರಾಮೀಣ ಕಾರ್ಮಿಕರು ಈಗ ಸಾಮಾಜಿಕ ಭದ್ರತೆಯನ್ನು ಅನುಭವಿಸುತ್ತಿದ್ದಾರೆ.

ಸಮಾಜದ ಎಲ್ಲಾ ವರ್ಗಗಳು ಸಂಪನ್ಮೂಲಗಳ ಸಮಾನ ಪಾಲನ್ನು ಪಡೆಯುತ್ತಿವೆ.

ಆಹಾರ ಬೆಳೆಯುವ ಅನ್ನದಾತರು ಸಶಕ್ತರನ್ನಾಗಿ ಮಾಡಲಾಗಿದೆ.

ಕೃಷಿ ಮತ್ತು ವಲಸೆ ಕಾರ್ಮಿಕರಿಗೆ ಪಿಂಚಣಿ ಯೋಜನೆಗಳು ಮತ್ತು ಸಾಮಾಜಿಕ ಭದ್ರತೆ ದೊರೆತಿದೆ.

ವಾಸ್ತವ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ನವ–ಉದಾರವಾದಿ ಆರ್ಥಿಕ ನೀತಿಗಳು ಕೃಷಿ ಬಿಕ್ಕಟ್ಟನ್ನು ಆಳಗೊಳಿಸಿವೆ. ಇದರ ಪರಿಣಾಮವಾಗಿ ಗ್ರಾಮೀಣ ಭಾರತದಲ್ಲಿ ಭಾರಿ ನಿರುದ್ಯೋಗ ಉಂಟಾಯಿತು.

ಕಾರ್ಮಿಕರನ್ನು ಕೆಲಸದಿಂದ ಹೊರದಬ್ಬುವ ತಂತ್ರಜ್ಞಾನಗಳ ಹೆಚ್ಚಿದ ಬಳಕೆಯೊಂದಿಗೆ ಕೃಷಿ ವಲಯದಲ್ಲಿ ಕೈ ಕೆಲಸವು ಕನಿಷ್ಠ ಮಟ್ಟಕ್ಕೆ ಇಳಿದಿದೆ. ಪ್ರಮುಖ ಕೃಷಿ ಮತ್ತು ಕೃಷಿಯೇತರ ಉದ್ಯೋಗಗಳ ವೇತನವು 2013–14 ರಿಂದ 2018–19 ರವರೆಗೆ ವಾರ್ಷಿಕ ಶೇಕಡಾ 3 ರಷ್ಟು ಕಡಿಮೆಯಾಗಿದೆ.

ನೋಟು ಅಮಾನ್ಯೀಕರಣ, ಜಿ.ಎಸ್.ಟಿ ಜಾರಿ, ಮನರೇಗಾ ದಂತಹ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಬಜೆಟ್ ಹಂಚಿಕೆಯಲ್ಲಿ ಕಡಿತ ಮತ್ತು ಸಬ್ಸಿಡಿಗಳಲ್ಲಿ ಕಡಿತ – ಇವು ಗ್ರಾಮೀಣ ವೇತನದಲ್ಲಿನ ಕುಸಿತಕ್ಕೆ ಮುಖ್ಯ ಕಾರಣಗಳು. ಅಖಿಲ ಭಾರತ ಮಟ್ಟದಲ್ಲಿ ಪ್ರಮುಖ ಗ್ರಾಮೀಣ ಉದ್ಯೋಗಗಳ ವೇತನ ದರಗಳ ಬೆಳವಣಿಗೆಯಲ್ಲಿ ತೀವ್ರ ಕುಸಿತವು ಲಾಕ್‌ಡೌನ್ ಸಮಯದಿಂದ ಕಂಡು ಬಂದಿದೆ. ಆದರೆ ಇದು ಜೂನ್ 2019 ರಲ್ಲಿ COVID–19 ಮಹಾಸಾಂಕ್ರಾಮಿಕ ರೋಗಕ್ಕೆ ಮುಂಚೆಯೇ ಪ್ರಾರಂಭವಾಯಿತು.

ಹಣಕಾಸು ಸಚಿವಾಲಯವು ತನ್ನ ಆರ್ಥಿಕ ಸಮೀಕ್ಷೆ 2022–23 ರಲ್ಲಿ, ಏಪ್ರಿಲ್ ಮತ್ತು ನವೆಂಬರ್ 2022 ರ ನಡುವೆ ಹೆಚ್ಚಿದ ಹಣದುಬ್ಬರದಿಂದಾಗಿ ನೈಜ ಗ್ರಾಮೀಣ ವೇತನಗಳಲ್ಲಿ (ಅಂದರೆ, ಹಣದುಬ್ಬರಕ್ಕೆ ಸರಿಹೊಂದಿಸಲಾದ, ಅಂದರೆ ನಿಜ ಬೆಲೆಗಳಲ್ಲಿ ಗ್ರಾಮೀಣ ವೇತನಗಳು) ನಕಾರಾತ್ಮಕ ಬೆಳವಣಿಗೆಯನ್ನು ಎತ್ತಿ ತೋರಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ಇತ್ತೀಚೆಗೆ ಬಿಡುಗಡೆ ಮಾಡಿದ ಅಧ್ಯಯನವು ಮೂರು ಬಿಜೆಪಿ ಆಡಳಿತದ ರಾಜ್ಯಗಳಾದ ಗುಜರಾತ್, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದ ಕಾರ್ಮಿಕರು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ದೈನಂದಿನ ವೇತನವನ್ನು ಪಡೆಯುತ್ತಿದ್ದಾರೆ ಎಂದು ಬಹಿರಂಗಪಡಿಸಿದೆ. ಗುಜರಾತಿನ ಕೃಷಿ ಕಾರ್ಮಿಕರು ರೂ 241.90 (ಅಂದರೆ ರಾಷ್ಟ್ರೀಯ ಸರಾಸರಿ ರೂ 345.70 ಕ್ಕಿಂತ ನೂರು ರೂಪಾಯಿಗಳಷ್ಟು ಕಡಿಮೆ) ದೈನಂದಿನ ವೇತನವನ್ನು ಪಡೆಯುತ್ತಾರೆ; ಮಧ್ಯಪ್ರದೇಶವು 221.90 ರೂ.ನ ಅತ್ಯಂತ ಕಡಿಮೆ ದೈನಂದಿನ ವೇತನವನ್ನು ಹೊಂದಿದೆ. ಮತ್ತೊಂದೆಡೆ, ಕೇರಳದ ಕಾರ್ಮಿಕರಿಗೆ ಅತ್ಯಧಿಕ ದೈನಂದಿನ ವೇತನವು – ಕೃಷಿ ಕಾರ್ಮಿಕರಿಗೆ 764.3 ರೂ ಮತ್ತು ನಿರ್ಮಾಣ ಕಾರ್ಮಿಕರಿಗೆ ರೂ 852.50 – ದೊರಕುತ್ತಿದೆ.

ಮನರೇಗ ಯೋಜನೆಯು ಗ್ರಾಮೀಣ ಬಡವರ ಜೀವನೋಪಾಯಕ್ಕೆ ಮತ್ತು ಗ್ರಾಮೀಣ ಆರ್ಥಿಕತೆಗೆ ಅತ್ಯಗತ್ಯ ಎಂದು ಸಾಬೀತಾಗಿದ್ದರೂ, ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಅದನ್ನು ಕೊಲ್ಲಲು ಕೆಲಸ ಮಾಡುತ್ತಿದೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹಲವು ಒಕ್ಕೂಟ ಬಜೆಟುಗಳಲ್ಲಿ ಮನರೇಗ ಯೋಜನೆಗೆ ಬೇಕಾಗುವಷ್ಟು ಹಣ ಹಂಚಿಕೆಯನ್ನು ನಿರಂತರವಾಗಿ ನಿರಾಕರಿಸಿದೆ. ಒಟ್ಟು ಬಜೆಟಿನ ಅನುಪಾತದಲ್ಲಿ ಮನರೇಗಕ್ಕೆ ಒಟ್ಟಾರೆ ಹಂಚಿಕೆ ಕಡಿಮೆಯಾಗಿದೆ. ಮನರೇಗ 2013–14 ರಲ್ಲಿ ಹಣಕಾಸು ವರ್ಷದ ಒಟ್ಟು ಬಜೆಟಿನ ಶೇ. 1.98 ಹೊಂದಿತ್ತು. ಇದು 2023–24 ರಲ್ಲಿ ಒಟ್ಟು ಬಜೆಟಿನ ಶೇಕಡಾ 1.33 ಕ್ಕೆ ಇಳಿದಿದೆ.

ಶಿಕ್ಷಣ ತಜ್ಞರು ಮತ್ತು ಕಾರ್ಯಕರ್ತರ ಒಕ್ಕೂಟವಾದ ಲಿಬ್–ಟೆಕ್ ಇಂಡಿಯಾ ಒದಗಿಸಿದ ಮಾಹಿತಿಯ ಪ್ರಕಾರ, ಕಳೆದ 21 ತಿಂಗಳುಗಳಲ್ಲಿ 7.6 ಕೋಟಿ ಉದ್ಯೋಗ ಕಾರ್ಡುಗಳನ್ನು ಸಿಸ್ಟಮ್ ನಿಂದ ಅಳಿಸಲಾಗಿದೆ.

ಪ್ರಸಕ್ತ ಹಣಕಾಸು ವರ್ಷದ (2023–24) ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ ಮನರೇಗ ಕ್ಕೆ ಶೂನ್ಯ ಹೆಚ್ಚಳವಿದೆ. ಮಧ್ಯಂತರ ಬಜೆಟಿನಲ್ಲಿ ಮನರೇಗ ಕ್ಕೆ 86,000 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದ್ದು, ಪ್ರಸಕ್ತ ವರ್ಷಕ್ಕೆ ಮನರೇಗದ ಒಟ್ಟು ವೆಚ್ಚ ಇದುವರೆಗೆ 88,309.72 ಕೋಟಿ ಆಗಿದೆ.

ಪರಿಣಾಮವಾಗಿ, 100 ದಿನಗಳ ಕೆಲಸದ ಖಾತರಿಯ ಹೊರತಾಗಿಯೂ, ಮೋದಿ ಆಡಳಿತದ ಅಡಿಯಲ್ಲಿ ಸಾಂಕ್ರಾಮಿಕ ವರ್ಷ 2020–2021 (51.52 ದಿನಗಳು) ಹೊರತುಪಡಿಸಿ ಒದಗಿಸಿದ ಸರಾಸರಿ ಕೆಲಸದ ದಿನಗಳು 50 ಅನ್ನು ಯಾವತ್ತೂ ದಾಟಿಲ್ಲ. ಕಳೆದ ವರ್ಷ ಸರಾಸರಿ ಕೆಲಸದ ದಿನಗಳು ಕೇವಲ 47 ದಿನಗಳು. ಮನರೇಗ ಅಡಿಯಲ್ಲಿ ಕಾರ್ಮಿಕರಿಗೆ ಪಾವತಿಸುವ ಸರಾಸರಿ ವೇತನವು 2021–2022 ರಲ್ಲಿ ರೂ. 208 ಇದ್ದರೆ, 2022–23 ರಲ್ಲಿ 216.57 ಆಗಿತ್ತು. ಇದು ಗ್ರಾಮೀಣಾಭಿವೃದ್ಧಿಯ ಸಂಸದೀಯ ಸ್ಥಾಯಿ ಸಮಿತಿಯ ಶಿಫಾರಸಿಗೆ ವಿರುದ್ಧವಾಗಿದೆ. ಪಾವತಿಗಳು ವಿಳಂಬವಾದಾಗ, ನೈಜ ವೇತನವು ಕಡಿಮೆಯಾಗುತ್ತದೆ.

ಮೋದಿ ಸರ್ಕಾರದ ನವ ಉದಾರವಾದಿ ಧೋರಣೆಯು ಮನರೇಗ ಅನ್ನು ಅನಗತ್ಯವೆಂದು ಮಾತ್ರವಲ್ಲ, ದೇಶದ ಆರ್ಥಿಕ ಬೆಳವಣಿಗೆಗೆ ತೊಡಕೆಂದೂ ಪರಿಗಣಿಸುತ್ತದೆ.

ಸಾಮಾಜಿಕ ಕಲ್ಯಾಣದ ಪ್ರಭುತ್ವದ ಪರಿಕಲ್ಪನೆಯು ವಿದೇಶಿ ಮತ್ತು ಭಾರತೀಯ ಬಂಡವಾಳಕ್ಕೆ ಸ್ವೀಕಾರಾರ್ಹವಲ್ಲ. ಬಿಕ್ಕಟ್ಟು ಎಷ್ಟು ತೀವ್ರವಾಗಿದೆಯೆಂದರೆ ಕೃಷಿ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗುತ್ತಾರೆ. ಇದು ಅವರು ಎದುರಿಸುತ್ತಿರುವ ಪರಿಸ್ಥಿತಿಯ ಒತ್ತಡಗಳನ್ನು ತೋರಿಸುತ್ತದೆ. ಕಳೆದ ವರ್ಷ NCRB ವರದಿಯ ಪ್ರಕಾರ 5563 ಕೃಷಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಟ್ಟಾರೆಯಾಗಿ, 2014 ರಿಂದ 40,685 ಕೃಷಿ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಆತಂಕಕಾರಿ ಪರಿಸ್ಥಿತಿಯನ್ನು ಪರಿಹರಿಸಲು ಬಿಜೆಪಿಯ ನೀತಿಗಳು ಶೋಚನೀಯವಾಗಿ ವಿಫಲವಾಗಿವೆ.

ಭೂರಹಿತ ಕಾರ್ಮಿಕರು ಮತ್ತು ಗ್ರಾಮೀಣ ಬಡವರ ಇತರ ವರ್ಗಗಳು ವರ್ಷಗಳಿಂದ ಕಾಯುತ್ತಿರುವ ಅತ್ಯಂತ ನಿರ್ಣಾಯಕ ಸಂಪನ್ಮೂಲವಾದ ಭೂಮಿಯನ್ನು ಈಗ ಬಿಜೆಪಿ ಸರ್ಕಾರವು ಕಾರ್ಪೊರೇಟುಗಳಿಗೆ ಹಸ್ತಾಂತರಿಸುತ್ತಿದೆ.

2018–19 ರಲ್ಲಿ ಸುಮಾರು ಶೇಕಡಾ 41 ಗ್ರಾಮೀಣ ಕುಟುಂಬಗಳು ಯಾವುದೇ ಕೃಷಿ ಭೂಮಿಯನ್ನು ಹೊಂದಿಲ್ಲ ಎಂದು ರಾಷ್ಟ್ರೀಯ ಮಾದರಿ ಸಮೀಕ್ಷೆ ಕಚೇರಿ (NSSO) ಸಮೀಕ್ಷೆಯು ತೋರಿಸುತ್ತದೆ. ಭಾರತದ ಹಳ್ಳಿಗಳಲ್ಲಿ ಕೆಲವೇ ಕೈಗಳಲ್ಲಿ ಭೂಮಿಯ ಕೇಂದ್ರೀಕರಣವು ಇನ್ನೂ ವಾಸ್ತವ ಸ್ಥಿತಿಯೇ ಆಗಿದೆ. ಮತ್ತು 2018–19 ರ NSSO ಸಮೀಕ್ಷೆಯು ಗ್ರಾಮೀಣ ಕುಟುಂಬಗಳಲ್ಲಿ ಅಗ್ರ ಶೇಕಡಾ 20 ರಷ್ಟು ಎಲ್ಲಾ ಭೂಮಿಯಲ್ಲಿ ಶೇಕಡಾ 76 ರಷ್ಟನ್ನು ಹೊಂದಿದೆ ಎಂದು ತೋರಿಸುತ್ತದೆ.

ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಸರ್ಕಾರವು ವಿವಿಧ ಉದ್ದೇಶಗಳಿಗಾಗಿ ಸಂಗ್ರಹಿಸುತ್ತಿರುವ ಭೂಮಿಯ ಪ್ರಾಥಮಿಕ ಫಲಾನುಭವಿಗಳು ಕಾರ್ಪೊರೇಟುಗಳು. ಇದರಿಂದ ಸಣ್ಣ ಮತ್ತು ಅಂಚಿನ ರೈತರು ಭೂಮಿ ಕಳೆದುಕೊಳ್ಳುತ್ತಿದ್ದಾರೆ.. ಕೃಷಿ ಕಾರ್ಮಿಕರು ಕೂಡ ತಾವು ಉಳುತ್ತಿರುವ ಸಣ್ಣ ತುಂಡು ಭೂಮಿಯನ್ನೂ ಕಳೆದುಕೊಳ್ಳುತ್ತಿದ್ದಾರೆ.

ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿಗೆ ಅವರು ಅತ್ಯಲ್ಪ ಪ್ರಮಾಣದ ಪರಿಹಾರವನ್ನು ಪಡೆಯುತ್ತಿದ್ದಾರೆ. ಆದರೆ ಕೃಷಿ ಕಾರ್ಮಿಕರು ಯಾವುದೇ ರೀತಿಯಲ್ಲಿ ಪರಿಹಾರ ಪಡೆಯದೆ ಈ ಭೂಮಿಯಲ್ಲಿ ತಮ್ಮ ಉದ್ಯೋಗಾವಕಾಶವನ್ನು ಕಳೆದುಕೊಳ್ಳುತ್ತಿದ್ದಾರೆ.

ಬಿಜೆಪಿ ಸರ್ಕಾರದ ಪ್ರಕಾರ ಅನ್ನದಾತರ ಸಬಲೀಕರಣದಲ್ಲಿ ಕೃಷಿ ಕಾರ್ಮಿಕರು ಸೇರಿಲ್ಲ. ಹೆಚ್ಚು ಪ್ರಚಾರ ಕಂಡ PM-KISAN ಯೋಜನೆಯು ಕೃಷಿ ಕಾರ್ಮಿಕರನ್ನು ಒಳಗೊಂಡಿಲ್ಲ ಮತ್ತು ಅವರು ಸರ್ಕಾರದಿಂದ ಯಾವುದೇ ಸಹಾಯವನ್ನು ಪಡೆಯುವುದಿಲ್ಲ.

ಬೆಳೆ ವಿಮೆಯ ಪರಿಹಾರದ ಅಲ್ಪ ಪ್ರಯೋಜನಗಳು ಸಹ ಗೇಣಿದಾರರು ಮತ್ತು ಕೃಷಿ ಕಾರ್ಮಿಕರನ್ನು ಒಳಗೊಂಡಿರುವುದಿಲ್ಲ. ಸಾಲ ಮತ್ತು ಸಾಲದ ವ್ಯವಸ್ಥೆಯ ವಿಷಯದಲ್ಲಿ ಸಹ ಇದೇ ಆಗಿದೆ.


ಕೇರಳವನ್ನು ಹೊರತುಪಡಿಸಿ, ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರವು ಕೃಷಿ ಮತ್ತು ಗ್ರಾಮೀಣ ಕಾರ್ಮಿಕರಿಗೆ ಸಾಮಾಜಿಕ ಪಿಂಚಣಿಗಳನ್ನು ಪಾವತಿಸಲು ಯಾವುದೇ ನಿರ್ದಿಷ್ಟ ಯೋಜನೆಯನ್ನು ಹೊಂದಿಲ್ಲ. ಕೇರಳ ಕೃಷಿ ಕಾರ್ಮಿಕರ ಕಲ್ಯಾಣ ನಿಧಿ ಮಂಡಳಿಯು ಎಲ್ಲಾ ನೋಂದಾಯಿತ ಕಾರ್ಮಿಕರಿಗೆ ಪಿಂಚಣಿಯನ್ನು ಖಾತ್ರಿಗೊಳಿಸುತ್ತದೆ. LDF ನೇತೃತ್ವದ ಕೇರಳ ಸರ್ಕಾರ ಮಾತ್ರ ಪ್ರಬಲವಾದ ಸಾರ್ವಜನಿಕ ವಲಯದ ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ಖಾತ್ರಿಗೊಳಿಸುತ್ತದೆ.

2019 ರಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್–ಧನ್ (PM-SYM) ಪಿಂಚಣಿ ಯೋಜನೆಯ ಸುತ್ತ ಮೋದಿ ಸರ್ಕಾರವು ಹೆಚ್ಚಿನ ಪ್ರಚಾರವನ್ನು ಸೃಷ್ಟಿಸಿದೆ. ಇದರಲ್ಲಿ ಕೃಷಿ ಕಾರ್ಮಿಕರು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರು ಸೇರಿದ್ದಾರೆ. ರೂ. 3000/– 60 ವರ್ಷ ವಯಸ್ಸನ್ನು ತಲುಪಿದ ನಂತರ ಮಾಸಿಕ ಪಿಂಚಣಿ ಪಾವತಿಗೆ ಅವಕಾಶವಿದೆ. ಈ ಯೋಜನೆಯಡಿಯಲ್ಲಿ, ಫಲಾನುಭವಿಯಿಂದ ಶೇ.50 ಮಾಸಿಕ ಕೊಡುಗೆಯನ್ನು ಸಂಗ್ರಹಿಸಲಾಗುತ್ತದೆ. ಈ ಯೋಜನೆಯಲ್ಲಿ ಕೇವಲ 49.25 ಲಕ್ಷ ಫಲಾನುಭವಿಗಳು ಮಾತ್ರ ನೋಂದಾಯಿಸಿಕೊಂಡಿದ್ದಾರೆ. ಆದರೆ ವಯಸ್ಸಿನ ಮಿತಿಯಿಂದಾಗಿ ಒಬ್ಬರು ಸಹ ಯಾವುದೇ ಪ್ರಯೋಜನವನ್ನು ಪಡೆದಿಲ್ಲ.

ಮಹಾಸಾಂಕ್ರಾಮಿಕ ಸಮಯದಲ್ಲಿ, ವಲಸೆ ಕಾರ್ಮಿಕರ ಪರವಾಗಿ ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಿದ್ದರಿಂದಾಗಿ, ಅಗಸ್ಟ್ 2021 ರಲ್ಲಿ ಕೇಂದ್ರ ಸರ್ಕಾರವು ಅಸಂಘಟಿತ ಕಾರ್ಮಿಕರ ಇ–ಶ್ರಮ್ ಪೋರ್ಟಲ್ ಸ್ಥಾಪಿಸಿತು. ಇದರ ಉದ್ದೇಶ ಅಸಂಘಟಿತ ಕಾರ್ಮಿಕರ ರಾಷ್ಟ್ರೀಯ ದತ್ತಾಂಶ ಆಕರ ಸೃಷ್ಟಿಸುವುದು ಆಗಿತ್ತು. ಇದರಲ್ಲಿ ಅವರಿಗೆ ಯಾವುದೇ ಸಾಮಾಜಿಕ ಸವಲತ್ತು ಒದಗಿಸುವುದು ಸೇರಿರಲಿಲ್ಲ. ಕಾರ್ಪೊರೇಟ್ ಮಾಧ್ಯಮಗಳು ಇ–ಶ್ರಮ್ ಪೋರ್ಟಲ್ ಸುತ್ತ ಬಣ್ಣಬಣ್ಣದ ಕತೆ ಕಟ್ಟಿದವು. ಆದರೆ ಒಬ್ಬನೇ ಕಾರ್ಮಿಕ ಇದುವರೆಗೆ ಇದರಿಂದ ಯಾವುದೇ ಸವಲತ್ತು ಪಡೆದಿಲ್ಲ.

ಕೃಷಿ ಕೂಲಿಕಾರರ ಹಕ್ಕುಗಳಿಗೆ ಬೆಂಬಲಿಸಿ!
ಬಿಜೆಪಿ ಯನ್ನು ಸೋಲಿಸಿ!





ಬಡತನದ ಅಂಕಿಅಂಶಗಳ ಬಗ್ಗೆ ಮತ್ತೊಮ್ಮೆ ಸ್ಪಷ್ಟನೆ

ಬಡತನವು ಶೇ. 5ರ ಮಟ್ಟಕ್ಕಿಂತಲೂ ಕೆಳಗಿದೆ ಎನ್ನುವ ನೀತಿ ಆಯೋಗದ ಹೇಳಿಕೆಗೆ ಯಾವ ವಿಶ್ವಾಸಾರ್ಹತೆಯೂ ಇಲ್ಲ. ಏಕೆಂದರೆ, ಲಭ್ಯವಿರುವ ಬೆಟ್ಟದಷ್ಟು ಮಾಹಿತಿಯ ಪ್ರಕಾರ ಅರ್ಥವ್ಯವಸ್ಥೆಯು ಅಧೋಗತಿಗೆ ಇಳಿಯುತ್ತಿದೆ. ಹಾಗಾಗಿ, ಚುನಾವಣೆಯ ಸಂಧರ್ಭದಲ್ಲಿ ಜನರನ್ನು ಮರುಳು ಮಾಡಲು ಬಡತನಕ್ಕೆ ಸಂಬಂಧಿಸಿದ ಈ ಅಂಕಿ ಅಂಶಗಳನ್ನು ಸರ್ಕಾರವು ತೇಲಿ ಬಿಟ್ಟಿದೆ ಎಂದು ಊಹಿಸುವುದು ಅನಿವಾರ್ಯವಾಗುತ್ತದೆ. ಈಗ, ಅರ್ಥವ್ಯವಸ್ಥೆಯ ಪರಿಸ್ಥಿತಿಗೆ ಸಂಬಂಧಿಸಿದ ಮಾಹಿತಿಯನ್ನು ನೋಡೋಣ.

ಪ್ರೊ. ಪ್ರಭಾತ್ ಪಟ್ನಾಯಕ್ — ಅನುವಾದ: ಕೆ.ಎಂ.ನಾಗರಾಜ್

ಮೊನ್ನೆ ಮೊನ್ನೆ ನೀತಿ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಒಂದು ಅತಿರೇಕದ ಹೇಳಿಕೆಯನ್ನು ನೀಡಿದ್ದಾರೆ. ಭಾರತದಲ್ಲಿ ಬಡತನದ ಅನುಪಾತವು, 2022–23ರ ಬಳಕೆ ವೆಚ್ಚ ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ, ಶೇ. 5ಕ್ಕಿಂತಲೂ ಕೆಳಗಿದೆ ಎಂಬುದು ಅವರ ದಾವೆ. 2022–23ರಲ್ಲಿ ಒಟ್ಟು ಜನಸಂಖ್ಯೆಯ ಕೇವಲ ಶೇ. 5ರಷ್ಟು ಮಂದಿಯ (ಗ್ರಾಮೀಣದ ಮತ್ತು ನಗರ ಭಾರತದ) ತಲಾ ಬಳಕೆಯ ವೆಚ್ಚವು ಆ ವರ್ಷದ ಬಡತನ ರೇಖೆಯ ಮಟ್ಟಕ್ಕಿಂತ ಕೆಳಗಿದೆ ಎಂದೂ ಮತ್ತು ಈ ಅಂಶವು, ಸುರೇಶ್ ತೆಂಡೂಲ್ಕರ್ ನೇತೃತ್ವದ ಸಮಿತಿಯು 2011–12ರ ವರ್ಷಕ್ಕಾಗಿ ಸೂಚಿಸಿದ ಬಡತನ ರೇಖೆಯ ಅಂಕಿ-ಸಂಖ್ಯೆಯನ್ನು ಗ್ರಾಹಕ ಬೆಲೆ ಸೂಚ್ಯಂಕದೊಂದಿಗೆ ನವೀಕರಿಸಿದ ನಂತರ ಲಭಿಸಿದ ಸಂಖ್ಯೆಯನ್ನು ಆದರಿಸಿದೆ ಎಂದು ಅವರು ಹೇಳಿದ್ದಾರೆ.

ತೆಂಡೂಲ್ಕರ್ ಸಮಿತಿಯು ಈ 2011–12ರ ಬಡತನದ ರೇಖೆಗಳನ್ನು ನಿರ್ಧರಿಸುವಾಗ ಯಾವ ವಸ್ತುನಿಷ್ಠ ಮಾನದಂಡವನ್ನೂ ಗಣನೆಗೆ ತೆಗೆದುಕೊಂಡಿರಲಿಲ್ಲ. ಉದಾಹರಣೆಗೆ, ಕನಿಷ್ಠ ಪ್ರಮಾಣದ ಕ್ಯಾಲೋರಿ ಸೇವನೆಯನ್ನಾಗಲಿ ಅಥವಾ ಒಂದು ಕನಿಷ್ಠ ಅಗತ್ಯಗಳ ಬುಟ್ಟಿಯ ಸರಕುಗಳ ಬೆಲೆಗಳನ್ನಾಗಲಿ ಆಧರಿಸಿರಲಿಲ್ಲ. ತಳ ಬುಡ ಇಲ್ಲದ ಒಂದು ನಾಮಕಾವಸ್ತೆಯ ಬಡತನದ ರೇಖೆಯನ್ನು ಅದು ಪ್ರಕಟಿಸಿತು. ಇದಲ್ಲದೆ, ಈ ತೆಂಡೂಲ್ಕರ್ ಸಮಿತಿ ನಿರ್ಧರಿಸಿದ ಬಡತನ ರೇಖೆಗಳನ್ನು ನವೀಕರಿಸಲು ಬಳಸುತ್ತಿರುವ ಗ್ರಾಹಕ ಬೆಲೆ ಸೂಚ್ಯಂಕಗಳು ಶಿಕ್ಷಣ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳ ಖಾಸಗೀಕರಣವನ್ನು ಸಮರ್ಪಕವಾಗಿ ಪರಿಗಣಿಸದ ಕಾರಣ, ಅವು ಒಂದು ಗಂಭೀರವಾದ ಕೀಳಂದಾಜು ಪಕ್ಷಪಾತ ಹೊಂದಿವೆ. ಅದಕ್ಕಿಂತಲೂ ಮಿಗಿಲಾಗಿ, 2022–23ರ ಬಳಕೆಯ ವೆಚ್ಚ ಸಮೀಕ್ಷೆಯನ್ನು ಹಿಂದಿನ ಎಲ್ಲಾ ಸಮೀಕ್ಷೆಗಳಿಗಿಂತಲೂ ಒಂದು ವಿಭಿನ್ನವಾದ ರೀತಿಯಲ್ಲಿ ನಡೆಸಲಾಗಿದೆ. ಈ ಕಾರಣದಿಂದಾಗಿ, ಈ ಸಮೀಕ್ಷೆಯ ಅಂಕಿ-ಅಂಶಗಳನ್ನು ಹಿಂದಿನ ಫಲಿತಾಂಶಗಳೊಂದಿಗೆ ಹೋಲಿಸುವಂತಿಲ್ಲ. ಮತ್ತು, ಈ ಸಮೀಕ್ಷೆಯ ಅಂಕಿ-ಅಂಶಗಳನ್ನು ಪೂರ್ಣವಾಗಿ ಪ್ರಕಟಿಸದ ಕಾರಣದಿಂದಾಗಿ ಈ ಸಮೀಕ್ಷೆಯ ಅದೆಷ್ಟು ಪಕ್ಷಪಾತಿಯಾಗಿದೆ ಎಂಬುದನ್ನು ನಿಖರವಾಗಿ ಹೇಳಲಾಗದು.

ಬಡತನವು ಶೇ. 5ರ ಮಟ್ಟಕ್ಕಿಂತಲೂ ಕೆಳಗಿದೆ ಎನ್ನುವ ನೀತಿ ಆಯೋಗದ ಹೇಳಿಕೆಗೆ ಯಾವ ವಿಶ್ವಾಸಾರ್ಹತೆಯೂ ಇಲ್ಲ. ಏಕೆಂದರೆ, ಲಭ್ಯವಿರುವ ಬೆಟ್ಟದಷ್ಟು ಮಾಹಿತಿಯ ಪ್ರಕಾರ ಅರ್ಥವ್ಯವಸ್ಥೆಯು ಅಧೋಗತಿಗೆ ಇಳಿಯುತ್ತಿದೆ. ಹಾಗಾಗಿ, ಚುನಾವಣೆಯ ಸಂಧರ್ಭದಲ್ಲಿ ಜನರನ್ನು ಮರುಳು ಮಾಡಲು ಬಡತನಕ್ಕೆ ಸಂಬಂಧಿಸಿದ ಈ ಅಂಕಿ ಅಂಶಗಳನ್ನು ಸರ್ಕಾರವು ತೇಲಿ ಬಿಟ್ಟಿದೆ ಎಂದು ಊಹಿಸುವುದು ಅನಿವಾರ್ಯವಾಗುತ್ತದೆ. ಈಗ, ಅರ್ಥವ್ಯವಸ್ಥೆಯ ಪರಿಸ್ಥಿತಿಗೆ ಸಂಬಂಧಿಸಿದ ಮಾಹಿತಿಯನ್ನು ನೋಡೋಣ.

2017–18ರ ಬಳಕೆಯ ವೆಚ್ಚದ ಸಮೀಕ್ಷೆಯ ಮೂಲಕ ಕಂಡು ಬಂದ ಅಂಶಗಳು ಕಳವಳಕಾರಿಯಾಗಿದ್ದವು. ಆದ್ದರಿಂದ, ಸರ್ಕಾರವು ಈ ಸಮೀಕ್ಷೆಯ ವರದಿಯನ್ನು ಬಹಿರಂಗಪಡಿಸಲಿಲ್ಲ. ಆದರೆ, ಮಾಧ್ಯಮಗಳಲ್ಲಿ ಸೋರಿಕೆಯಾದ ವರದಿಯ ಪ್ರಕಾರ, ಯೋಜನಾ ಆಯೋಗವು ಹಲವು ವರ್ಷಗಳ ಹಿಂದೆ ನಿಗದಿಪಡಿಸಿದ ಕ್ಯಾಲೊರಿ ಮಾನದಂಡದ ಅನುಗುಣವಾಗಿ, ಪ್ರತಿ ವ್ಯಕ್ತಿಯು ದಿನಕ್ಕೆ 2100 ಕ್ಯಾಲೊರಿಗಳನ್ನು ಸೇವಿಸಲು ಸಾಧ್ಯವಾಗದ ನಗರ ಭಾರತದ ವ್ಯಕ್ತಿಗಳ ಸಂಖ್ಯೆಯ ಶೇ. 60ಕ್ಕಿಂತಲೂ ಅಧಿಕವಾಗಿತ್ತು. ಈ ಅನುಪಾತವು 1993–94ರಲ್ಲಿದ್ದ ಶೇ. 57ಕ್ಕಿಂತ ಮೇಲಿದೆ ಮತ್ತು 2011–12ರಲ್ಲಿದ್ದ ಶೇ. 65ಕ್ಕಿಂತ ಕೆಳಗಿದೆ. ಅದೇ ರೀತಿಯಲ್ಲಿ, ಪ್ರತಿ ವ್ಯಕ್ತಿಯು ದಿನಕ್ಕೆ 2200 ಕ್ಯಾಲೊರಿಗಳನ್ನು ಸೇವಿಸಲು ಸಾಧ್ಯವಾಗದ ಗ್ರಾಮೀಣ ಭಾರತದ ವ್ಯಕ್ತಿಗಳ ಸಂಖ್ಯೆಯ ಶೇ. 80ಕ್ಕಿಂತಲೂ ಅಧಿಕವಾಗಿತ್ತು. ಈ ಅನುಪಾತವು 1993–94ರಲ್ಲಿದ್ದ ಶೇ. 58ಕ್ಕಿಂತ ಮತ್ತು 2011–12ರಲ್ಲಿದ್ದ ಶೇ. 68ಕ್ಕಿಂತ ಮೇಲಿದೆ. ಹಾಗಾಗಿ, 2017–18ರ ನಿಜ ಬಡತನದ ಅನುಪಾತವು 2011–12ರ ಅನುಪಾತಕ್ಕೆ ಹೋಲಿಸಿದರೆ ಗಮನಾರ್ಹವಾಗಿ ಏರಿಕೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. (ಈ ಅಂಕಿ-ಅಂಶಗಳನ್ನು ಉತ್ಸಾ ಪಟ್ನಾಯಕ್ ಅವರ ಮುಂಬರುವ ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ).



ಸಂಕ್ಷಿಪ್ತವಾಗಿ ಹೇಳುವುದಾದರೆ, ಬಡತನವು 2011–12 ಮತ್ತು 2017–18ರ ನಡುವೆ ಗಮನಾರ್ಹವಾಗಿ ಏರಿಕೆಯಾಗಿತ್ತು. 2017–18ರ ನಂತರ ಕೊವಿಡ್–19 ಮತ್ತು ಅದರಿಂದ ಪ್ರೇರಿತವಾದ ಲಾಕ್‌ಡೌನ್ ಕಾರಣದಿಂದಾಗಿ ನೆಲಕಚ್ಚಿದ್ದ ಅರ್ಥವ್ಯವಸ್ಥೆಯು ಈಗ ಚೇತರಿಸಿಕೊಳ್ಳುತ್ತಿದೆ. ಆದಾಗ್ಯೂ, ಈಗ ನಿರುದ್ಯೋಗವು ಕೊವಿಡ್–19 ಹರಡುವ ಮೊದಲು ಇದ್ದುದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿದೆ. ಹಾಗಾಗಿ, ಈ ಸನ್ನಿವೇಶದಲ್ಲಿ, ಬಡತನದ ಅನುಪಾತವು 2011–12ಕ್ಕೆ ಹೋಲಿಸಿದರೆ ಇಳಿಕೆಯಾಗಿದೆ ಎಂಬ ದಾವೆಯು ವಿಶ್ವಾಸಾರ್ಹವಲ್ಲ.

ಕ್ಯಾಲೋರಿ ಸೇವನೆಯ ಮಟ್ಟವೇ ಬಡತನದ ಒಂದು ಸೂಚಕವಲ್ಲ ಎಂದು ವಾದಿಸಬಹುದು. ಈ ವಾದವು ಒಂದು ತಪ್ಪು ತಿಳುವಳಿಕೆಯನ್ನು ಆಧರಿಸಿದೆ. ಬಡತನವನ್ನು ಅಂದಾಜು ಮಾಡಲು ಕ್ಯಾಲೋರಿ ಸೇವನೆಯ ಅಂಶವನ್ನು ಮಾತ್ರ ಪರಿಗಣಿಸಬೇಕು ಎಂಬುದು ವಿಷಯವಲ್ಲ. ವಿಷಯವೆಂದರೆ, ವರಮಾನವು ಏರಿಕೆಯಾದಂತೆಲ್ಲಾ ಕ್ಯಾಲೋರಿ ಸೇವನೆಯ ಹೆಚ್ಚಳವು ಸ್ವತಃ ಪ್ರಕಟಗೊಳ್ಳುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ನಮ್ಮಂತಹ ದೇಶಗಳಲ್ಲಿ ಒಬ್ಬ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೂ ಸಹ ಕ್ಯಾಲೋರಿ ಸೇವನೆಯ ಪ್ರಮಾಣದಲ್ಲಿ ಇಳಿಕೆಯಾಗಬಹುದು ಎಂಬ ಪ್ರತಿಪಾದನೆಯನ್ನು ಒಪ್ಪಲಾಗದು. ಏಕೆಂದರೆ, ತಲಾ ವರಮಾನ ಮತ್ತು ತಲಾ ಧಾನ್ಯ ಸೇವನೆಯ ನಡುವೆ ಒಂದು ಸ್ಪಷ್ಟ ಧನಾತ್ಮಕ ಸಂಬಂಧವಿದೆ (ಇದು ತಲಾ ಕ್ಯಾಲೋರಿ ಸೇವನೆ ಎಂದರ್ಥ). ಈ ಪ್ರತಿಪಾದನೆಯನ್ನು ಅನುಭವ ಸಾಕ್ಷ್ಯವು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಆದ್ದರಿಂದ, ಒಂದು ವೇಳೆ ಕ್ಯಾಲೋರಿ ಸೇವನೆಯಲ್ಲಿ ಇಳಿಕೆ ಸಂಭವಿಸಿದರೆ ಅದನ್ನು ನಿಜ ವರಮಾನದ ಇಳಿಕೆ ಎಂದು ಪರಿಗಣಿಸಬೇಕಾಗುತ್ತದೆ.

ವರಮಾನಗಳ ಬಗ್ಗೆ ನಿಖರ ದತ್ತಾಂಶ ಲಭ್ಯವಿಲ್ಲ. ಹಾಗಾಗಿ, ಲಭ್ಯವಿರುವ ಬಳಕೆಯ ವೆಚ್ಚಗಳ ದತ್ತಾಂಶವನ್ನು ಕೆಲವು ಬೆಲೆ ಸೂಚ್ಯಂಕಗಳ ಮೂಲಕ ಲೆಕ್ಕ ಹಾಕಿ ದೊರೆತ ಅಂಕಿ ಅಂಶಗಳನ್ನು ಬಳಸಿಕೊಂಡು, ಅವುಗಳನ್ನು ಒಂದು ನಿರ್ದಿಷ್ಟ ಕಾಲಾವಧಿಗೆ ಸಂಬಂಧಿಸಿ, ಒಂದು ಅರ್ಥಪೂರ್ಣ ಹೋಲಿಕೆಯನ್ನು ಮಾಡಬಹುದು. ಆದರೆ, ಈ ಸೂಚ್ಯಂಕಗಳು ಪೂರ್ಣವಾಗಿ ವಿಶ್ವಾಸಾರ್ಹವಲ್ಲ. ಹಾಗಾಗಿ, ಕ್ಯಾಲೊರಿ ಸೇವನೆಯನ್ನು ನಿಜ ವರಮಾನದ ಒಂದು ಬದಲಿ (proxy) ಎಂದು ಪರಿಗಣಿಸಿ, ಈ ಕ್ಯಾಲೊರಿ ಸೇವನೆಯನ್ನು ಒಂದು ದೀರ್ಘ ಕಾಲಾವಧಿಗೆ ಸಂಬಂಧಿಸಿ ಹೋಲಿಕೆ ಮಾಡುವ ಕ್ರಮವು ಅರ್ಥಪೂರ್ಣವಾಗುತ್ತದೆ. ಈ ರೀತಿಯಲ್ಲಿ ಒಂದು ಹೋಲಿಕೆಯನ್ನು ನಾವು ಕೈಗೊಂಡರೆ, 2017–18 ರವರೆಗೆ ದೇಶದಲ್ಲಿ ಬಡತನವು ಏರಿಕೆಯಾಗಿದೆ ಎಂಬುದು ಕಂಡುಬರುತ್ತದೆ. ಆನಂತರ ಏನಾಗಿದೆ ಎಂಬುದು ನಮಗೆ ತಿಳಿದಿಲ್ಲ (ಅಂದರೆ, ಮಾಹಿತಿ ಲಭ್ಯವಿಲ್ಲ). 2022–23ರ ಬಳಕೆಯ ಸಮೀಕ್ಷೆಯು ಒಳಗೊಂಡಿರುವ ಕ್ಯಾಲೊರಿ ಸೇವನೆಯ ಮಾಹಿತಿಯನ್ನು ಸರ್ಕಾರವು ಇನ್ನೂ ಬಹಿರಂಗಪಡಿಸಿಲ್ಲ. ಅದನ್ನು ಬಹಿರಂಗಪಡಿಸಿದಾಗ, 2017–18ರ ನಂತರ ಬಡತನ ಪರಿಸ್ಥಿತಿ ಏನಾಗಿದೆ ಎಂಬುದು ತಿಳಿದುಬರುತ್ತದೆ.

ಖಚಿತ ದತ್ತಾಂಶವು ದೊರಕುವ ಸಮಯದವರೆಗೂ ಬಿಡಿ ಬಿಡಿಯಾಗಿ ದೊರಕುವ ಪರೋಕ್ಷ ಪುರಾವೆಗಳನ್ನು ಮಾತ್ರವೇ ನಾವು ಅವಲಂಬಿಸಬೇಕಾಗುತ್ತದೆ. ಲಭ್ಯವಿರುವ ಇಂತಹ ಎಲ್ಲಾ ಪುರಾವೆಗಳೂ ದೇಶದಲ್ಲಿ ಬಡತನ ಇಳಿಕೆಯಾಗಿಲ್ಲ, ಬದಲಿಗೆ, ಗಣನೀಯವಾಗಿ ಏರಿಕೆಯಾಗಿದೆ ಎಂಬುದನ್ನು ಸೂಚಿಸುತ್ತವೆ.

ಇಂತಹ ಪರೋಕ್ಷ ಪುರಾವೆಗಳ ಪೈಕಿ ಮೊದಲನೆಯದು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯಲ್ಲಿ (NFHS) ದೊರಕುತ್ತದೆ. 2019–21 ವರ್ಷಗಳ ಅವಧಿಯನ್ನು ಒಳಗೊಂಡ NFHS–5ರಲ್ಲಿ, 15–49 ವಯೋಮಾನದ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಕರಣಗಳು, 2015–16 ವರ್ಷಗಳ ಅವಧಿಯನ್ನು ಒಳಗೊಂಡ NFHS–4ಗೆ ಹೋಲಿಸಿದರೆ, ಏರಿಕೆಯಾಗಿರುವುದು ಕಂಡುಬರುತ್ತದೆ. NFHS–4ರಲ್ಲಿ ಈ ವಯೋಮಾನದ ಶೇ. 53 ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದರು. NFHS–5ರಲ್ಲಿ, ರಕ್ತಹೀನತೆಯಿಂದ ಬಳಲುತ್ತಿದ್ದ ಮಹಿಳೆಯರ ಸಂಖ್ಯೆಯು ಶೇ. 57ರಷ್ಟಿತ್ತು. NFHS–4ರಲ್ಲಿ, 21 ರಾಜ್ಯಗಳಲ್ಲಿ, ಆ ರಾಜ್ಯಗಳ ಮಹಿಳೆಯರ ಒಟ್ಟು ಸಂಖ್ಯೆಯಲ್ಲಿ ಅರ್ಧ ಭಾಗಕ್ಕಿಂತಲೂ ಹೆಚ್ಚು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದರು. NFHS–5ರಲ್ಲಿ, ಅರ್ಧ ಭಾಗಕ್ಕಿಂತಲೂ ಹೆಚ್ಚು ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದ ರಾಜ್ಯಗಳ ಸಂಖ್ಯೆಯು 25ಕ್ಕೆ ಏರಿಕೆಯಾಗಿತ್ತು. ಪಶ್ಚಿಮದ ದೇಶಗಳಲ್ಲಿ ಬಳಸುವ ಮಾನದಂಡಗಳನ್ನೇ ಭಾರತದಲ್ಲೂ ಬಳಸುವ ಕಾರಣದಿಂದಾಗಿ, ಭಾರತದ ಮಹಿಳೆಯರ ರಕ್ತಹೀನತೆಯ ಪ್ರಕರಣಗಳ ಸಂಖ್ಯೆಯು ಅಧಿಕವಾಗಿ ತೋರುತ್ತದೆ; ಈ ಕ್ರಮವು ಸರಿಯಲ್ಲ ಎಂದು ವಾದಿಸಲಾಗುತ್ತದೆ. ಒಂದು ನಿರ್ದಿಷ್ಟ ಸಮಯಕ್ಕಾಗಿ ಈ ವಾದವನ್ನು ಒಪ್ಪಿಕೊಂಡರೂ ಸಹ, ಅದು ಕಾಲ ಕಾಲದ ಹೋಲಿಕೆಗಳಿಗೆ ಅನ್ವಯವಾಗುವುದಿಲ್ಲ. ಭಾರತದ ಮಹಿಳೆಯರ ರಕ್ತಹೀನತೆಯ ಸಂಬಂಧವಾಗಿ ಹೇಳುವುದಾದರೆ, ಕಾಲಕ್ರಮದಲ್ಲಿ ಪರಿಸ್ಥಿತಿ ನಿಜಕ್ಕೂ ಹದಗೆಟ್ಟಿದೆ.

ಪರೋಕ್ಷ ಪುರಾವೆಯ ಎರಡನೇ ತುಣುಕು ಜಾಗತಿಕ ಹಸಿವು ಸೂಚ್ಯಂಕದಲ್ಲಿ(GHI) ದೊರಕುತ್ತದೆ. 2023ರಲ್ಲಿ ಭಾರತವು, ಹಸಿವಿನ ಅಗಾಧತೆಯನ್ನು ಲೆಕ್ಕ ಹಾಕುವ ಜಾಗತಿಕ ಹಸಿವು ಸೂಚ್ಯಂಕದಲ್ಲಿರುವ 125 ದೇಶಗಳ ಪಟ್ಟಿಯಲ್ಲಿ 111ನೇ ಸ್ಥಾನಕ್ಕೆ ಇಳಿದಿದೆ. ಈ ಸೂಚ್ಯಂಕವು ಒಳಗೊಂಡ ಅಂಶಗಳಲ್ಲಿ ದೋಷವಿರುವುದರಿಂದ ಈ ಸೂಚ್ಯಂಕವು ದೋಷಪೂರಿತವಾಗಿದೆ ಎಂದು ಹೇಳುವ ಮೂಲಕ ಭಾರತ ಸರ್ಕಾರವು ಸೂಚ್ಯಂಕದ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಸೂಚ್ಯಂಕದಲ್ಲಿ ಸೇರಿಸಿರುವ ಬದಲಾಯಿಸಬಹುದಾದ ಅಂಶಗಳು ಮತ್ತು ಅವುಗಳಿಗೆ ನೀಡಲಾದ ಮಹತ್ವವನ್ನು (weights) ಒಪ್ಪುವುದು ಮುಖ್ಯವಲ್ಲ. ಹಸಿವಿನ ಸೂಚ್ಯಂಕದ ಪಟ್ಟಿಯಲ್ಲಿ ದೇಶವು ನಿಜಕ್ಕೂ ಉನ್ನತ ಸ್ಥಾನ ಪಡೆಯುವುದೇ ಮುಖ್ಯವಾದ ವಿಷಯ. ತಳ ಮಟ್ಟದ ಜನರ ನಿಜ ತಲಾ ವರಮಾನವು ಒಂದು ಗಮನಾರ್ಹ ಹೆಚ್ಚಳವನ್ನು ಕಂಡಾಗ ಮಾತ್ರವೇ ದೇಶದ ಬಡತನದ ತೀವ್ರ ಕುಸಿತವನ್ನು ವಿವರಿಸಬಹುದು.

ಇದಿಷ್ಟೇ ವಿಷಯವಲ್ಲ. ಜಾಗತಿಕ ಹಸಿವಿನ ಸೂಚ್ಯಂಕವು ಬದಲಾಯಿಸಬಹುದಾದ ಕೆಲವು ಅಂಶಗಳಿಂದ ಕೂಡಿದೆ. ಅಂದರೆ, ಜನರ ಅಪೌಷ್ಟಿಕತೆ (undernourishment)–ಅಸಮರ್ಪಕ ಕ್ಯಾಲೊರಿ ಆಹಾರ ಸೇವನೆ; ಶಿಶು ಕಳಾಹೀನತೆ (child wasting)–ಐದು ವರ್ಷದೊಳಗಿನ ಶಿಶುಗಳ ಒಟ್ಟು ಸಂಖ್ಯೆಯಲ್ಲಿ ಶರೀರ ತೂಕವು ಶಿಶುಗಳ ಎತ್ತರಕ್ಕೆ ಅನುಗುಣವಾಗಿಲ್ಲದಿರುವುದು; ಕುಂಠಿತ ಶಿಶು ಬೆಳವಣಿಗೆ (child stunting)–ಐದು ವರ್ಷಗಳ ಕೆಳಗಿನ ಶಿಶುಗಳ ಒಟ್ಟು ಸಂಖ್ಯೆಯಲ್ಲಿ ಶರೀರ ತೂಕವು ಅವರ ವಯಸ್ಸಿಗೆ ಅನುಗುಣವಾಗಿಲ್ಲದಿರುವುದು ಅಥವಾ ಲಘು ತೂಕದ ಶಿಶುಗಳು; ಮತ್ತು, ಶಿಶು ಮರಣ (child mortality) – ಐದು ವರ್ಷದೊಳಗಿನ ಶಿಶುಗಳ ಒಟ್ಟು ಸಂಖ್ಯೆಯಲ್ಲಿ ಮರಣ ಹೊಂದುವ ಶಿಶುಗಳ ಪ್ರಮಾಣ. 2023ರಲ್ಲಿ ಈ ಅಂಶಗಳಿಗೆ ಸಂಬಂಧಿಸಿದ ಪರಿಸ್ಥಿತಿಯು 2008ರಲ್ಲಿ ಇದ್ದುದಕ್ಕಿಂತಲೂ ಕೆಟ್ಟದಾಗಿದೆ. ಇವುಗಳ ಪೈಕಿ ಅಪವಾದ ಎನ್ನಬಹುದಾದ ಒಂದು ಅಂಶವೆಂದರೆ, ಅಪೌಷ್ಟಿಕತೆ ಮಾತ್ರ. ಇದು ಸರಿಸುಮಾರು ಒಂದೇ ಮಟ್ಟದಲ್ಲಿ ಉಳಿದಿದೆ. ಆದರೆ, ಇದೂ ಸಹ, ವರ್ಷ 2000ರಲ್ಲಿ ಇದ್ದುದಕ್ಕಿಂತ ಕೆಟ್ಟದಾಗಿದೆ ಎಂಬುದು ನಿಸ್ಸಂಶಯವಾಗಿದೆ. ನಿಜ, ದತ್ತಾಂಶಗಳು ಒದಗುವ ಮೂಲಗಳು ಬದಲಾಗುವುದರಿಂದ, ಒಂದು ಸಮಯದ ಶ್ರೇಯಾಂಕಗಳನ್ನು ಮತ್ತೊಂದು ಸಮಯದ

ಪುಟ 14 ಕ್ಕೆ

ಗೋಮಾಂಸ ರಫ್ತು ಕಂಪನಿಗಳಿಂದ ಬಿಜೆಪಿ ಪಕ್ಷಕ್ಕೆ 4.5 ಕೋಟಿ ರೂ......

ಪುಟ 11 ರಿಂದ

ಹೊಂದಿರುವ ಹೆಪ್ಪುಗಟ್ಟಿದ ಹಲಾಲ್ ಮೂಳೆಗಳಿಲ್ಲದ ಎಮ್ಮೆ ಮಾಂಸದ ವಿಶ್ವದ ಅತಿದೊಡ್ಡ ಉತ್ಪಾದಕ ಮತ್ತು ರಫ್ತುದಾರ" ಎಂದು ಅಲ್ಲಾನಾಸನ್ಸ್ ಲಿಮಿಟೆಡ್ ಸ್ವತಃ ವಿವರಿಸುತ್ತದೆ. ಆದರೆ, ಎಮ್ಮೆ ಮಾಂಸದ ಹೆಸರಿನಲ್ಲಿ ಗೋವುಗಳ ಮಾಂಸವನ್ನೂ ಮಾರಾಟ ಮಾಡಲಾಗುತ್ತಿದೆ ಎಂದು ಹಲವರು ಹೇಳುತ್ತಾರೆ. ಈ ಮಾತುಗಳನ್ನು ಸ್ವತಃ ಗೋರಕ್ಷಕ ಸಂಘಟನೆಗಳೇ ಹೇಳುತ್ತಿವೆ.

ಎಪ್ರಿಲ್ 12, 2015ರ ಬಿಸಿನೆಸ್ ಟುಡೆ ಪತ್ರಿಕೆಯ ವರದಿ ಹೀಗೆ ಹೇಳುತ್ತದೆ: “ಎಮ್ಮೆ ಮಾಂಸದ ನೆಪದಲ್ಲಿ ಹಸುವಿನ ಮಾಂಸವನ್ನು ಅಕ್ರಮವಾಗಿ ಸ್ವದೇಶದಲ್ಲಿ ಮಾರಾಟ ಮತ್ತು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ನೀವು ದುಬೈನಲ್ಲಿ ಭಾರತೀಯ ಹಸುವಿನ ಮಾಂಸವನ್ನು ಕೇಳಿದರೆ, ನೀವು ಅದನ್ನು ಪಡೆಯಬಹುದು. ಮೋದಿ ಸರ್ಕಾರವು ಮಾಂಸ ರಫ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಾವು ಭಾವಿಸುತ್ತೇವೆ" ಎಂದು ರಾಷ್ಟ್ರೀಯ ಗೋರಕ್ಷಾ ಸೇನೆಯ ಅಧ್ಯಕ್ಷ ಅಶೂ ಮೊಂಗಿಯಾ ಹೇಳುತ್ತಾರೆ. ಆದರೆ, ಉದ್ಯಮವು ಆರೋಪವನ್ನು ತಳ್ಳಿಹಾಕುತ್ತದೆ. ಉತ್ತರ ಪ್ರದೇಶದ ಮುಜಾಫರ್‌ನಗರದಲ್ಲಿ ಮಾಂಸ ಸಂಸ್ಕರಣಾ ಘಟಕವನ್ನು ನಡೆಸುತ್ತಿರುವ ದೆಹಲಿ ಮೂಲದ ಅಲ್ ನೂರ್ ಎಕ್ಸ್ಪೋರ್ಟ್ ನ ಪಾಲುದಾರ ಸುನಿಲ್ ಸುದ್ "ಇಷ್ಟು ಬಂಡವಾಳ ಹಾಕಿ ಮಾರುಕಟ್ಟೆ ನಿರ್ಮಿಸಿದ ನಂತರ, ಗೋಮಾಂಸವನ್ನು ರಹಸ್ಯವಾಗಿ ಮಾರಾಟ ಮಾಡುವ ಮೂಲಕ ಎಲ್ಲವನ್ನೂ ಹಾಳುಮಾಡುವ ಅಪಾಯವನ್ನು ಯಾರು ತೆಗೆದುಕೊಳ್ಳುತ್ತಾರೆ?" ಎನ್ನುತ್ತಾರೆ.

ಗೋ ಮಾಂಸ ಮಾರಾಟಗಾರರು ಮತ್ತು ಬಿಜೆಪಿ ಹಾಗೂ ಶಿವಸೇನೆ ನಡುವಿನ ಚುನಾವಣಾ ಬಾಂಡ್ ನ ಕೊಡು ಕೊಳ್ಳುವಿಕೆಯ ವ್ಯವಹಾರ ಬಹಿರಂಗಗೊಂಡ ನಂತರ ಗೋರಕ್ಷಾ ಸೇನೆಯ ಆರೋಪಕ್ಕೆ ಪುಷ್ಠಿ ದೊರಕಿದೆ. ಹಿಂದುತ್ವವಾದಿಗಳಿಂದ ಕಂಪನಿಗೆ ಅಂತಹ ಅಪಾಯ ಬಾರದಿರಲಿ ಎಂದೋ, ಅಥವಾ ನಮ್ಮ ಪಕ್ಷಕ್ಕಿಷ್ಟು ಹಣ ದಾನ ಮಾಡಿದರೆ, ನಾವು ನಿಮ್ಮ ತಂಟೆಗೆ ಬರುವುದಿಲ್ಲ ಎಂದೋ ‘ಕೊಡು ಕೊಳ್ಳುವ ವ್ಯವಹಾರ’ ನಡೆದಿರುತ್ತದೆ.

ರಾಜ್ಯಗಳಲ್ಲಿ ಗೋಮಾಂಸ ನಿಷೇಧ

ಮಾರ್ಚ್ 2015ರಲ್ಲಿ ಮಹಾರಾಷ್ಟ್ರ ಸರ್ಕಾರವು ಗೋಮಾಂಸ ಮಾರಾಟ ಮತ್ತು ಸ್ವಾಧೀನದ ಮೇಲೆ ನಿಷೇಧ ಹೇರಿ, ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವ ಕಾನೂನು ಜಾರಿಗೆ ತರುತ್ತದೆ. ಆ ನಂತರ ಆ ರಾಜ್ಯದಲ್ಲಿ ಜಾನುವಾರುಗಳನ್ನು ಸಾಗಿಸುವ ಟ್ರಕ್‌ಗಳ ಮೇಲೆ ಜಾಗೃತದಳದ ದಾಳಿ ಹೆಚ್ಚಾಯಿತು. ಬಿಜೆಪಿ ಆಡಳಿತದ ಮತ್ತೊಂದು ರಾಜ್ಯ ಹರಿಯಾಣ ಕೂಡ ನಿಷೇಧವನ್ನು ಅನುಸರಿಸಿತು. ಗೋಹತ್ಯೆಯ ವಿರುದ್ಧ ಬಲವಾದ ಕಾನೂನುಗಳನ್ನು ಪ್ರೋತ್ಸಾಹಿಸಿದ ಹಿಂದೂ ರಾಷ್ಟ್ರೀಯವಾದಿ ಸರ್ಕಾರದಿಂದ ಉತ್ತೇಜಿತವಾಗಿ, "ಗೋಸಂರಕ್ಷಣೆ" ಗುಂಪುಗಳು ದೇಶಾದ್ಯಂತ ಹರಡಿಕೊಂಡಿವೆ.

ಮೇ 25, 2017 ರಂದು ಕೇಂದ್ರದಲ್ಲಿನ ಮೋದಿ ಸರ್ಕಾರ ಸಂವಿಧಾನದ 48 ನೇ ವಿಧಿಯನ್ನು ಕ್ರಿಯಾತ್ಮಕಗೊಳಿಸಿತು. ಇದು ಜನರ ಆಹಾರದ ಹಕ್ಕಿನ ಮೇಲಿನ ದಾಳಿ ಎಂದು ಇದನ್ನು ಹಲವರು ವಿರೋಧಿಸುತ್ತಾರೆ. ಇದರ ವಿರುದ್ಧ ದೇಶಾದ್ಯಂತ ದೊಡ್ಡ ಮಟ್ಟದ ಹೋರಾಟಗಳೂ ನಡೆಯುತ್ತವೆ. ಗೋರಕ್ಷಕ ಗುಂಪುಗಳಿಂದ ಹೆಚ್ಚುತ್ತಿರುವ ಹಿಂಸಾಚಾರವನ್ನು ಎದುರಿಸುತ್ತಿರುವ ಬಹುತೇಕ ಮುಸ್ಲಿಂ ಮಾಂಸ ಮತ್ತು ಚರ್ಮದ ವ್ಯಾಪಾರಿಗಳಿಗೆ ನಿಷೇಧವು ನೋವುಂಟು ಮಾಡುತ್ತದೆ. ಹಾಲು ಕೊಡದ ಮತ್ತು ವಯಸ್ಸಾದ ಜಾನುವಾರುಗಳನ್ನು ಮಾರಾಟ ಮಾಡದೇ ಇರುವುದರಿಂದ ರೈತರು ಸಾಂಪ್ರದಾಯಿಕ ಆದಾಯದ ಮೂಲದಿಂದ ವಂಚಿತರಾಗುತ್ತಾರೆ ಮತ್ತು ರೈತರು ಹಸು ಸಾಕಾಣಿಕೆಯಿಂದ ದೂರ ಸರಿಯುವಂತಾಗುತ್ತದೆ ಎಂಬ ಆತಂಕದ ಮಾತುಗಳೂ ಕೇಳಿ ಬರುತ್ತದೆ. ವ್ಯಕ್ತಿಯ ಆಹಾರದ ಆಯ್ಕೆಗೆ ಸಂಬಂಧಿಸಿದಂತೆ ವ್ಯಕ್ತಿಯ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಕೆಲವರು ನ್ಯಾಯಾಲಯದ ಮೊರೆ ಹೋಗುತ್ತಾರೆ.

2017 ರ ನಂತರ ಗುಜರಾತ್, ಮಹಾರಾಷ್ಟ್ರ, ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶದಂತಹ ರಾಜ್ಯಗಳು ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿದರೆ, ಪಶ್ಚಿಮ ಬಂಗಾಳದಂತಹ ಇತರ ರಾಜ್ಯಗಳು "ಹತ್ಯೆಗೆ ಯೋಗ್ಯ" ಪ್ರಮಾಣಪತ್ರವನ್ನು ಪಡೆದ ನಂತರ ಹಳೆಯ ಅಥವಾ ಉಪಯೋಗಕ್ಕೆ ಬಾರದ ಗೋವುಗಳ ಸಂದರ್ಭದಲ್ಲಿ ಅದನ್ನು ಅನುಮತಿಸುತ್ತವೆ. ಈ ಕಾನೂನುಗಳ ಉಲ್ಲಂಘನೆಗಾಗಿ ಶಿಕ್ಷೆಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ.

ಇಂದಿನವರೆಗೆ, ಕೇರಳ, ಅರುಣಾಚಲ ಪ್ರದೇಶ, ಮೇಘಾಲಯ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಮಣಿಪುರ ಮತ್ತು ಮಿಜೋರಾಂನಲ್ಲಿ ಗೋಹತ್ಯೆ ನಿಷೇಧಿಸುವ ಯಾವುದೇ ಕಾನೂನು ಇಲ್ಲ.

ಗೋರಕ್ಷಕರಿಂದ 40 ಕ್ಕೂ ಹೆಚ್ಚು ಜನರ ಹತ್ಯೆ

2015 ರಿಂದೀಚೆಗೆ, ಗೋಹತ್ಯೆ ಅಥವಾ ಗೋಮಾಂಸ ಹೊಂದಿದ್ದಾರೆ ಎಂಬ ಆರೋಪದ ಮೇಲೆ ಗೋರಕ್ಷಕರು ಎಂದು ಹೇಳಿಕೊಳ್ಳುವ ಗುಂಪುಗಳಿಂದ ದೇಶದಲ್ಲಿ ಮುಸ್ಲಿಂ ಪುರುಷರನ್ನು ಹತ್ಯೆಗೈದ 40 ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಗೋಮಾಂಸ ಸೇವಿಸುತ್ತಿದ್ದಾರೆ ಎಂಬ ವದಂತಿಯ ಮೇಲೆ ಬಿಜೆಪಿ ಆಡಳಿತದ ಉತ್ತರಪ್ರದೇಶದ ದಾದ್ರಿಯಲ್ಲಿ 2015ರ ಸೆಪ್ಟೆಂಬರ್ ನಲ್ಲಿ 50 ವರ್ಷದ ಮೊಹಮ್ಮದ್ ಅಖ್ಲಾಕ್ ಎಂಬ ವ್ಯಕ್ತಿಯನ್ನು ಅವರ ಮನೆಗೆ ನುಗ್ಗಿ ಗೋರಕ್ಷಕರ ಗುಂಪು ಹೊಡೆದು ಕೊಂದುಹಾಕಿತು. ಅವರ 22 ವರ್ಷದ ಮಗನನ್ನು ತೀವ್ರವಾಗಿ ಥಳಿಸಿದರು. ರಾತ್ರಿ 10 ಗಂಟೆಯ ಸುಮಾರಿಗೆ ಕುಟುಂಬವು ಗೋಮಾಂಸ ಸೇವಿಸುತ್ತಿದೆ ಎಂದು ಸ್ಥಳೀಯ ದೇವಸ್ಥಾನದಲ್ಲಿ ಘೋಷಣೆ ಮಾಡಿದ ನಂತರ ಈ ದಾಳಿ ನಡೆಯಿತು. ಅಖ್ಲಾಕ್ ಅವರ ಪುತ್ರಿ ಸಾಜಿದಾ, ಮನೆಯ "ಫ್ರಿಡ್ಜ್‌ನಲ್ಲಿ ಮಾಂಸ" ಇತ್ತು, ಅದು ಗೋಮಾಂಸವಲ್ಲ ಎಂದು ಹೇಳಿದರು. ಅಖ್ಲಾಕ್ ನ ಮನೆಯಿಲ್ಲದ್ದ ಮಾಂಸದ ಮಾದರಿಗಳನ್ನು ಪೊಲೀಸರು "ಪರೀಕ್ಷೆಗಾಗಿ ವಿಧಿವಿಜ್ಞಾನ ಇಲಾಖೆಗೆ" ಕಳುಹಿಸಿದರು.

11 ಜುಲೈ 2016 ರಂದು ಸತ್ತ ದನಗಳ ಚರ್ಮ ತೆಗೆದ ಕಾರಣಕ್ಕಾಗಿ ಬಿಜೆಪಿ ಆಡಳಿತವಿದ್ದ ಗುಜರಾತ್ ರಾಜ್ಯದ ಊನಾ ಎಂಬಲ್ಲಿ ದಲಿತ ಕುಟುಂಬದ ಏಳು ಸದಸ್ಯರ ವಿರುದ್ದ ಗೋಹತ್ಯೆ ಮಾಡುತ್ತಿದ್ದಾರೆ ಎಂದು ಸುಳ್ಳು ಆರೋಪ ಹೊರಿಸಿ ಗೋರಕ್ಷಕ ತಂಡದವರು ಥಳಿಸಿದರು. ಇವು ಸತ್ತ ದನಗಳು ಎಂದು ದಲಿತರು ಎಷ್ಟೇ ಹೇಳಿದರೂ, ಕಾಡಿ ಬೇಡಿದರೂ ಒಪ್ಪದ ಗೋರಕ್ಷಕರು ದಲಿತರನ್ನು ಕಾರಿಗೆ ಕಟ್ಟಿ ದೊಣ್ಣೆ, ಕಬ್ಬಿಣದ ಪೈಪು, ಚಾಕುವಿನಿಂದ ಥಳಿಸಿ, ಅವರಲ್ಲಿ ನಾಲ್ವರನ್ನು ಕಾರಿನಲ್ಲಿ ಉನಾ ಪಟ್ಟಣಕ್ಕೆ ಕರೆತಂದು, ಸಾರ್ವಜನಿಕವಾಗಿ ಮತ್ತೆ ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದರು.

ಗುಜರಾತಿನ ಆನಂದ್ ಜಿಲ್ಲೆಯ ಕಸೋರ್ ಗ್ರಾಮದಲ್ಲಿ ಸತ್ತ ದನದ ಚರ್ಮವನ್ನು ಸುಲಿದಿದ್ದಕ್ಕಾಗಿ ದಲಿತ ಕುಟುಂಬದ ತಾಯಿ ಮತ್ತು ಮಗನ ಮೇಲೆ ದೌರ್ಜನ್ಯ ನಡೆಸಲಾಯ್ತು. ಕರ್ನಾಟಕದ ಕನಕಪುರದಲ್ಲಿ ಇತ್ತೀಚೆಗೆ, ಗೋವುಗಳನ್ನು ವಾಹನದಲ್ಲಿ ಸಾಗಿಸುತ್ತಿದ್ದ ಚಾಲಕನೊಬ್ಬ ಗೋರಕ್ಷಕರಿಂದ ಹಲ್ಲೆಗೊಳಗಾಗಿ ಪ್ರಾಣ ಕಳೆದುಕೊಂಡ ಘಟನೆ ನಡೆದಿದೆ. ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ಮತ್ತು ದೇಶದ ಹಲವು ಕಡೆಗಳಲ್ಲಿ ಗೋರಕ್ಷಕರಿಂದ ದಾಳಿಗಳು ನಡೆದಿವೆ. ಮತ್ತೊಂದಡೆ, ಗೋ ರಕ್ಷಣೆಗಾಗಿಯೇ ಅವತಾರವೆತ್ತಿ ಬಂದಿದ್ದೇವೆ ಎಂದು ಹೇಳಿಕೊಳ್ಳುವ ಹಿಂದುತ್ವವಾದಿ ರಾಜಕೀಯ ಪಕ್ಷ ಬಿಜೆಪಿ ಗೋಮಾಂಸ ಕಂಪನಿಗಳಿಂದ ದೇಣಿಗೆ ಹೆಸರಿನಲ್ಲಿ ಹಣ ಪಡೆಯುತ್ತಿದೆ. ●

ಟಿ.ಎಂ. ಕೃಷ್ಣ ಅವರಿಗೆ ‘ಸಂಗೀತ ಕಲಾನಿಧಿ’......

ಪುಟ 16 ರಿಂದ

ದೃಷ್ಟಿಕೋನಗಳಿವೆ. ಸಂಗೀತ– ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ತಮ್ಮ ಹಿಡಿತವನ್ನು ಇಟ್ಟುಕೊಂಡು, ತಳ ಸಮುದಾಯದವರಿಗೆ ಅವಕಾಶಗಳು ದಕ್ಕದಂತೆ ಮಾಡಿ ಸಂಗೀತದ ಪ್ರಶಸ್ತಿ–ಪುರಸ್ಕಾರಗಳನ್ನೂ ಪಡೆದುಕೊಳ್ಳುವವರೂ ಬ್ರಾಹ್ಮಣರೇ. ಇಂತಹ ಪ್ರಾಬಲ್ಯವನ್ನು ವಿರೋಧಿಸುವ ರೀತಿಯಲ್ಲಿ ಬಂಡಾಯವೆದ್ದು ಪ್ರಗತಿಪರ ಆಶಯಗಳ ಹೆಸರಿನಲ್ಲಿ ಮತ್ತೆ ಪ್ರಶಸ್ತಿ–ಪುರಸ್ಕಾರ ಮತ್ತು ಖ್ಯಾತಿಗಳನ್ನು ಗಳಿಸಿಕೊಳ್ಳುವವರೂ ಅದೇ ಜಾತಿಯವರೇ ಎಂದು ಆಕ್ಷೇಪವೆತ್ತುವವರೂ ಇದ್ದಾರೆ.

ಅದೇನೇ ಇರಲಿ ಕಲೆ–ಸಂಗೀತಗಳ ಯಾವುದೇ ಪ್ರಕಾರಗಳಿರಲಿ, ಯಾವುದೇ ಕ್ಷೇತ್ರವಿರಲಿ ಅದು ಯಾವುದೋ ಒಂದು ಜಾತಿ, ಒಂದು ಧರ್ಮದವರ ಹಿಡಿತದಲ್ಲಿರುವುದು ಎಂದಿಗೂ ಆರೋಗ್ಯಕರವಲ್ಲ. ನಮ್ಮ ಸಮಾಜದ ಭಿನ್ನ ಭಿನ್ನ ಸ್ತರಗಳ, ಬೇರೆ ಬೇರೆ ಸಮುದಾಯಗಳ ಜನರು ಈ ರಂಗಗಳಲ್ಲಿ ಭಾಗಿಯಾಗಬೇಕು. ಈ ನಿಟ್ಟಿನಲ್ಲಿ ಟಿ.ಎಂ. ಕೃಷ್ಣ ಅವರ ಪ್ರಯೋಗಗಳು ಮತ್ತು ಕೊಡುಗೆಗಳು ಗಮನಾರ್ಹವಾದದ್ದು ಎಂಬ ಬಗೆಗೆ ಅನುಮಾನಗಳನ್ನೇನು ಇಟ್ಟುಕೊಳ್ಳಬೇಕಾಗಿಲ್ಲ. ಅದನ್ನು ಮೆಚ್ಚಬೇಕು. ಸಾಂಸ್ಕೃತಿಕ ಸಾಮಾಜಿಕ ರಂಗಗಳಲ್ಲಿ ಮುಂದೆ ಬರಬೇಕಾದ ಸಮಗ್ರ ಬದಲಾವಣೆಯ ಪ್ರಕ್ರಿಯೆಗೆ ಟಿ.ಎಂ. ಕೃಷ್ಣ ಅಂತಹವರು ಚಾಲನೆ ಕೊಟ್ಟಿದ್ದಾರೆ ಎಂದು ಭಾವಿಸಿ ಈ ಹೋರಾಟವನ್ನು ಮುಕ್ತ ಮನಸ್ಸಿನಿಂದ ಬೆಂಬಲಿಸಬೇಕು. ಈ ಬೆಳವಣಿಗೆ ಮುಂದೆ ಬೇರೆ ಬೇರೆ ಸಮುದಾಯಗಳವರು, ತಳ ಸಮುದಾಯದವರು ಇಂತಹ ಚಳುವಳಿಯ ನಾಯಕತ್ವ ವಹಿಸಲು ಪ್ರೇರಣೆಯಾಗಬೇಕು. ಇನ್ನು ಪ್ರಶಸ್ತಿ ಪುರಸ್ಕಾರಗಳನ್ನು ನೀಡುವ ಸಂಸ್ಥೆ, ಸಮಿತಿ, ಪ್ರಾಧಿಕಾರಗಳು ತಳ ಸಮುದಾಯದ ಕಲಾವಿದರು ಸೇರಿದಂತೆ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಡುಗೆ ನೀಡಿದ ಎಲ್ಲ ಸ್ತರದ, ಎಲ್ಲ ಸಮುದಾಯಗಳ ಜನರನ್ನೂ ಗುರುತಿಸಬೇಕು ಎಂಬ ನಿರೀಕ್ಷೆಯೂ ಸರಿಯಾದದ್ದೇ. ಆದರೆ ಚಾರಿತ್ರಿಕ ಕಾರಣಗಳಿಂದಾಗಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿರುವ ಪರಂಪರಾನುಗತ ದೋಷ, ಕೊರತೆಗಳಿಗಾಗಿ ಒಬ್ಬ ಕಲಾವಿದನನ್ನು ವೈಯುಕ್ತಿಕವಾಗಿ ಹೊಣೆ ಮಾಡುವುದು, ಸಾಧನೆಯನ್ನು ನಿರಾಕರಿಸುವುದು ತಪ್ಪಾಗುತ್ತದೆ. ಇಲ್ಲಿ ಹಿಂದೂಸ್ತಾನಿ ಸಂಗೀತವು ಹೇಗೆ ಧರ್ಮಾತೀತವಾಗಿ ಬೆಳೆದುಬಂದಿದೆ ಎಂಬುದನ್ನು ಕಂಡುಕೊಳ್ಳಲು ರಹಮತ್ ತರಿಕೆರೆಯವರ ಈ ಕೆಳಗಿನ ಬರಹ ತುಂಬಾ ಪ್ರಸ್ತುತವಾಗಿದೆ. ಅದನ್ನೂ ಈ ಸಂದರ್ಭದಲ್ಲಿ ಗಮನಿಸಬಹುದು.

ಬಡತನದ ಅಂಕಿಅಂಶಗಳ ಬಗ್ಗೆ ಮತ್ತೊಮ್ಮೆ ಸ್ಪಷ್ಟನೆ...

ಪುಟ 13 ರಿಂದ

ಶ್ರೇಯಾಂಕದೊಂದಿಗೆ ಹೋಲಿಸಬಾರದು ಎಂದು ಹಸಿವಿನ ಸೂಚ್ಯಂಕವನ್ನು ಸಿದ್ಧಪಡಿಸುವವರು ಕಟ್ಟುನಿಟ್ಟಾಗಿ ಎಚ್ಚರಿಸುತ್ತಾರೆ. ಆದಾಗ್ಯೂ, ವರ್ಷ 2008ರ ಅಥವಾ 2000ದ ಪರಿಸ್ಥಿತಿಯೊಂದಿಗೆ ಹೋಲಿಸಿದರೆ, ಹಸಿವಿನ ಸೂಚ್ಯಂಕವು ಒಳಗೊಂಡಿರುವ ಎಲ್ಲ ಸೂಚಕಗಳ ವಿಷಯದಲ್ಲೂ ಈಗಿನ ಪರಿಸ್ಥಿತಿ ಹದಗೆಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಪರಿಸ್ಥಿತಿಯು, ತಳ ಮಟ್ಟದ ಜನರ ನಿಜ ತಲಾ ವರಮಾನದಲ್ಲಿ ಹೆಚ್ಚಳವಾಗಿದೆ ಎಂಬ ದಾವೆಗೆ (ಈ ದಾವೆಯೊಂದು ಮಾತ್ರವೇ ಬಡತನದ ತೀವ್ರ ಕುಸಿತದ ವಿವರಣೆ) ಯಾವುದೇ ಆಧಾರವಿಲ್ಲ ಎಂಬುದನ್ನು ಸೂಚಿಸುತ್ತದೆ.

ಪರೋಕ್ಷ ಪುರಾವೆಯ ಮೂರನೆಯ ತುಣುಕು "ಶೂನ್ಯ ಆಹಾರ ಶಿಶುಗಳು" ಎಂದು ಕರೆಯಲ್ಪಡುವ ಅಂಶದಲ್ಲಿದೆ. ಹಿಂದಿನ 24 ಗಂಟೆಗಳಲ್ಲಿ ತಾಯಿಯ ಹಾಲನ್ನು ಹೊರತುಪಡಿಸಿ ಬೇರೆ ಯಾವುದೇ ಆಹಾರವನ್ನು ಸೇವಿಸದ ಆರು ತಿಂಗಳಿನಿಂದ ಇಪ್ಪತ್ತಮೂರು ತಿಂಗಳ ನಡುವಿನ ಶಿಶುಗಳನ್ನು "ಶೂನ್ಯ ಆಹಾರ ಶಿಶುಗಳು" ಎನ್ನುತ್ತಾರೆ. "ಶೂನ್ಯ ಆಹಾರ"ವೆಂದರೆ ಅದು ಖಂಡಿತವಾಗಿಯೂ ಈ ಶಿಶುಗಳಿಗೆ ಯಾವ ಆಹಾರವೂ ಇರುವುದಿಲ್ಲ ಎಂಬ ಅನಿಸಿಕೆ ಉಂಟಾಗುತ್ತದೆ. ಅದು ತಪ್ಪು. ಅದರ ಅರ್ಥವೇನೆಂದರೆ, ಹಿಂದಿನ 24 ಗಂಟೆಗಳಲ್ಲಿ ಅವರು ಎದೆಹಾಲನ್ನು ಹೊರತುಪಡಿಸಿ ಯಾವುದೇ ಪೂರಕ ಆಹಾರವನ್ನು ಸೇವಿಸಿಲ್ಲ ಎಂಬುದು. ಭಾರತದಲ್ಲಿ, 2023ರಲ್ಲಿ, ಅಂತಹ 6.7 ಮಿಲಿಯನ್ ಶಿಶುಗಳಿದ್ದವು. ಇದು ಒಂದು ಅಭಾವವೇ ಎಂಬುದನ್ನು ನಿರಾಕರಿಸಲಾಗದು. ಈ ಅಭಾವವು ಕುಟುಂಬದ ಕೊಳ್ಳುವ ಶಕ್ತಿಯ ಕೊರತೆಯೊಂದಿಗೆ ಸಂಬಂಧವನ್ನು ಯಾವಾಗಲೂ ಹೊಂದಿರುತ್ತದೆ ಎಂದು ಹೇಳಲಾಗದು. ಆದರೂ, ಇದು ಖಂಡಿತವಾಗಿಯೂ ಬಡತನದ ಮತ್ತೊಂದು ರೂಪದ ಅಭಿವ್ಯಕ್ತಿಯೇ ಸರಿ. ಏಕೆಂದರೆ, ಈ ಶಿಶುಗಳ ಪೋಷಕರು ತಮ್ಮ ಜೀವನೋಪಾಯಕ್ಕಾಗಿ ಗಂಟೆ ಗಂಟೆಗಟ್ಟಲೇ ಕೆಲಸ ಮಾಡಬೇಕಾಗುವ ಸಂಬಂಧವನ್ನು ಖಂಡಿತವಾಗಿಯೂ ಹೊಂದಿದೆ. ಅದೇ ವಯೋಮಾನದ (ಸಂಬಂಧಿತ) ಶಿಶುಗಳ ಒಟ್ಟು ಸಂಖ್ಯೆಯಲ್ಲಿ ಶೂನ್ಯ ಆಹಾರ ಶಿಶುಗಳ ಪ್ರಮಾಣವು ಭಾರತದಲ್ಲಿ ಶೇ. 19.3ರಷ್ಟಿದೆ. ಗಿನಿಯಾ (ಶೇ. 21.8) ಮತ್ತು ಮಾಲಿ (ಶೇ. 20.5) ದೇಶಗಳ ನಂತರ, ವಿಶ್ವದಲ್ಲಿ ಮೂರನೇ ಅತಿ ಹೆಚ್ಚು ಶೇಕಡಾವಾರು ಪ್ರಮಾಣವು ಭಾರತದಲ್ಲಿದೆ. ಬಡತನವನ್ನು ಒದ್ದೋಡಿಸಲಾಗಿದೆ ಎಂದು ಭಾವಿಸಲಾದ ನಾಡಿನ ತಳ ಭಾಗದ ಜನರ ನಿಜ ವರಮಾನವು ಏರಿಕೆಯಾಗಿದೆ ಎಂಬ ದಾವೆಯು ಸಂಪೂರ್ಣವಾಗಿ ಆಧಾರರಹಿತವಾಗಿದೆ ಎಂಬುದನ್ನು "ಶೂನ್ಯ ಆಹಾರ ಶಿಶು"ಗಳ ಪ್ರಕರಣವು ಮತ್ತೊಮ್ಮೆ ಸೂಚಿಸುತ್ತದೆ.

ಬಡತನದ ಬಗ್ಗೆ ಸರ್ಕಾರವು ಏನೆಲ್ಲಾ ಕತೆ ಕಟ್ಟಿದರೂ ಭಾರತವು ಒಂದು ಹತಾಶ ಬಡ ದೇಶ ಎಂಬುದು ಜಗತ್ತಿಗೆ ಗೊತ್ತಿದೆ. ವಿಶ್ವ ಸಂಸ್ಥೆಯ ಇತ್ತೀಚಿನ ವರದಿಯು ಭಾರತದ ಜನಸಂಖ್ಯೆಯ ಶೇ. 74ರಷ್ಟು ಮಂದಿಗೆ ದಕ್ಷಿಣ ಏಷ್ಯಾದ ಜನರಿಗೆ ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ವಿಭಾಗವು (FAO) ಸೂಚಿಸಿದ ಕನಿಷ್ಠ ಪೌಷ್ಟಿಕ ಆಹಾರವನ್ನೂ ಪಡೆಯುವುದು ಸಾಧ್ಯವಿಲ್ಲ ಎಂದು ಹೇಳಿದೆ. ಈ ಅಂಶವು ಆಘಾತಕಾರಿಯೂ ಹೌದು.

ಕೋಮುವಾದಿ ಚಕ್ರವ್ಯೂಹ ಭೇದಿಸುವವರ ಕೈಪಿಡಿ

–'ಮಹೇಂದ್ರ ಕುಮಾರ್ ನಡು ಬಗ್ಗಿಸದ ಎದೆಯದನಿ'

ಎಚ್.ಆರ್.ನವೀನ್‌ಕುಮಾರ್, ಹಾಸನ


ಧರ್ಮದ ಅಮಲಿಗೆ ಸಿಲುಕಿ ತೇಲುತ್ತಾ, ಸಮಾಜ ಕಂಠಕರಾಗಿ ಉಳಿಯುತ್ತಿರುವ ದೊಡ್ಡ ಸಂಖ್ಯೆಯ ಹಿಂದುಳಿದ ವರ್ಗದ ಯುವಜನರೇ ಕೋಮುವಾದಿ ರಾಜಕಾರಣದ ಅಸ್ತ್ರಗಳು. ಇಂತಹ ಒಂದು ಅಸ್ತ್ರವಾಗಿ ಬಳಕೆಯಾಗಿದ್ದ ಚಿಕ್ಕಮಗಳೂರು ಮೂಲದ ಮಹೇಂದ್ರ ಕುಮಾರ್, ಸ್ವಾಭಾವಿಕವಾಗಿ ಅವರ ಮನೆ ಮತ್ತು ಅವರ ಸುತ್ತಮುತ್ತಲಿನ ಪರಿಸರದ ಸೌಹಾರ್ದ ಮನಸ್ಥಿತಿಯಿಂದ ಕೋಮುವಾದಿ ಮನಸ್ಥಿತಿಗೆ ಹೊರಳಿ, ನಂತರ ಭಜರಂಗ ದಳದ ಮುಖಂಡರಾಗಿ, ಕರ್ನಾಟಕದಲ್ಲಿ ಅವರು ಮಾಡಿದ ಕೃತ್ಯಗಳಲ್ಲಿ (ದತ್ತಪೀಠ, ಚರ್ಚ್ ಮೇಲಿನ ದಾಳಿ) ಯಾವ ರೀತಿ ಯೋಜನೆಗಳನ್ನು ರೂಪಿಸಲಾಯಿತು, ಸುಳ್ಳುಗಳನ್ನು ಹೇಗೆ ವ್ಯವಸ್ಥಿತವಾಗಿ ಹುಟ್ಟುಹಾಕಲಾಯಿತು, ಇದರ ಹಿಂದೆ ಇದ್ದ ಆರ್. ಎಸ್.ಎಸ್. ಹೇಗೆ ಕೆಲಸ ಮಾಡುತ್ತಿತ್ತು, ಸಮಾಜದ ಮೇಲೆ ಅದರ ಪರಿಣಾಮಗಳೇನು ಎಂಬುದನ್ನು ಅವರ ಅನುಭವದ ಆಧಾರದಲ್ಲಿ ಬರೆದ ಸತ್ಯ ಘಟನೆಗಳ ಆಧಾರಿತ, ಪಾಪನಿವೇದನೆಯ ಅತ್ಯುತ್ತಮ ಕೃತಿ ಇದಾಗಿದೆ.

ಕರೋನಾ ಸಂದರ್ಭದಲ್ಲಿ ಅಕಾಲಿಕ ಮರಣವನ್ನಪ್ಪಿದ ಮಹೇಂದ್ರ ಕುಮಾರ್ ರವರ ಜೀವನದ ಅನುಭವಗಳ ಬರವಣಿಗೆ ಪ್ರಾರಂಭವಾಗಿ ಅರ್ಧಕ್ಕೆ ನಿಂತಿತ್ತು. ಅದನ್ನು ಅತ್ಯಂತ ಜಾಗರೂಕತೆಯಿಂದ ಸಮಾಜವನ್ನು ತಿದ್ದುವ ಕೊಡುಗೆಯಾಗಿ ನೀಡುವಲ್ಲಿ ಶ್ರಮವಹಿಸಿದ ಸಂವೇದನಾಶೀಲ ಪರ್ತಕರ್ತ ನವೀನ್ ಸೂರಿಂಜೆಯವರೂ ಅಭಿನಂದನಾರ್ಹರು. ಮಹೇಂದ್ರ ಕುಮಾರ್ ರವರೇ ಹೇಳುವಂತೆ "ಇದು ನನ್ನೊಬ್ಬನ ಆತ್ಮಕಥೆಯಲ್ಲ, ಕೋಮುವಾದದ ಸುಳಿಗೆ ಸಿಕ್ಕು ಸತ್ತ ಮತ್ತು ನಿತ್ಯ ಸಾಯುತ್ತಿರುವ ಬಡ ಹಿಂದುಳಿದ ವರ್ಗಗಳ ಯುವಕರ ಆತ್ಮಕಥೆ".

ಬಾಲ್ಯದಲ್ಲಿನ ಬಡತನ ಕುರಿತಾದ ಅವರ ಮಾತುಗಳೊಂದಿಗೆ ಹೆಜ್ಜೆ ಹಾಕುವಾಗ ಭಾರತದ ಇಂದಿನ ಬಹುಸಂಖ್ಯಾತ ಕುಟುಂಬಗಳು ಅನುಭವಿಸುವ ಸಂಕಟಗಳು ಕಣ್ಣ ಮುಂದೆ ಹಾದು ಹೋದಂತಾದವು. ಅವರ ಮಾತಿನ ಈ ಸಾಲುಗಳು ಇಡೀ ಬಾಲ್ಯದ ಬದುಕನ್ನ ಕಟ್ಟಿಕೊಡುತ್ತವೆ. "ನಮ್ಮದೊಂಥರಾ ಸಮುದ್ರದ ದಂಡೆ ಮೇಲಿನ ಬದುಕಿನಂತೆ. ಸಮುದ್ರದಲ್ಲಿ ನೀರಿದ್ದರೂ ಕುಡಿಯೋ ನೀರಿಗೆ ಪರದಾಡಬೇಕು. ಹಾಗೆಯೇ ನಾವು ಕೊಪ್ಪದ ಅತಿದೊಡ್ಡ ರೈಸ್ ಮಿಲ್ ಎದುರಿದ್ದರೂ, ನಿತ್ಯ ಕ್ವಿಂಟಾಲ್ ಗಟ್ಟಲೆ ಲಾರಿಗಟ್ಟಲೆ ಅಕ್ಕಿ ನೋಡುತ್ತಿದ್ದರೂ ಊಟದ ಅಕ್ಕಿಗಾಗಿ ಪರದಾಡಬೇಕಿತ್ತು."

ಬದುಕಿನ ಮುಂದೆ ಯಾವ ಧರ್ಮವೂ ದೊಡ್ಡದಲ್ಲಾ ಎಂಬ ಸಂದೇಶವನ್ನ ಮಹೇಂದ್ರ ಕುಮಾರ್ ತಮ್ಮ ಜೀವನದ ಅನುಭವದ ಮೂಲಕ ಕಂಡುಕೊಂಡ ಸತ್ಯ. ಇಂತಹ ಹಲವು ಅನುಭವಗಳನ್ನು ಹಂಚಿಕೊಂಡ ಇವರು "ಆ ದೈವ ಸೃಷ್ಟಿಯ ರಕ್ತಕ್ಕೆ ಯಾವುದೇ ಬೇಧಗಳಿಲ್ಲ, ನಾವು ಬದುಕುತ್ತಿರೋ, ನಮಗೆ ಜೀವನ ಕೊಟ್ಟಿರೋ ಈ ನೆಲದಲ್ಲಿ ಯಾವುದೇ ಬೇಧಗಳಿಲ್ಲ. ಈ ನೆಲಕ್ಕೆ ಯಾವುದೇ ಧರ್ಮಗಳಿಲ್ಲ. ನಾವು ಬದುಕುತ್ತಿರೋ ದೇಶಕ್ಕೆ, ಪರಿಸರಕ್ಕೆ ಧರ್ಮಗಳಿಲ್ಲ. ಆದರೆ ನಾವು ಧರ್ಮ ಅಂತ ಹೇಳಿ ಕಿತ್ತಾಟಗಳನ್ನ ಮಾಡ್ತಾ, ದಿನ ಬೆಳಗಾದರೆ ನಮ್ಮೊಳಗೆ ಬಿರುಕುಗಳನ್ನು ಸೃಷ್ಟಿಸುತ್ತಾ ಬದುಕುತ್ತಿದ್ದೇವೆ."

ಒಮ್ಮೆ ಭಜರಂಗದಳದ ಸಭೆಯಲ್ಲಿ ಭಾಗವಹಿಸಿ ಮುಸ್ಲಿಮರ ವಿರುದ್ಧ ಬೆಂಕಿ ಉಗುಳಿ ವಾಪಸ್ ಊರಿಗೆ ಹೋಗುವಾಗ, ಮಳೆಯಿಂದಾಗಿ ಇವರ ಕಾರು ಘಾಟಿನ ಪ್ರಪಾತಕ್ಕೆ ಬಿದ್ದು ಜೀವ ಕಳೆದುಕೊಳ್ಳುವ ಸಂದರ್ಭದಲ್ಲಿ ಯಾರೂ ಸಹಾಯಕ್ಕೆ ಬರದಿದ್ದಾಗ, ಟೆಂಪೋ ಡ್ರೈವರ್ ಇವರನ್ನು ರಕ್ಷಿಸುತ್ತಾನೆ. ಆನಂತರ ಅವನು ಮುಸ್ಲಿಂ ಎಂದು ಗೊತ್ತಾಗುತ್ತದೆ. ಹೀಗೆ ಧರ್ಮವನ್ನು ಮೀರಿದ ಇಂತಹ ಹತ್ತಾರು ಬದುಕಿನ ಸಹಜ ಘಟನೆಗಳನ್ನು ಮಹೇಂದ್ರ ಕುಮಾರ್ ಇಲ್ಲಿ ದಾಖಲಿಸುತ್ತಾರೆ.



ಚಿಕ್ಕಮಗಳೂರಿನ ಬಾಬಬುಡನ್ ಗಿರಿಯ ದರ್ಗಾ ಪ್ರದೇಶವನ್ನು ದತ್ತಪೀಠವನ್ನಾಗಿಸಿ ಅದನ್ನು ತಮ್ಮ ರಾಜಕೀಯ ಬೆಳವಣಿಗೆಗೆ ಮೆಟ್ಟಿಲಾಗಿಸಿಕೊಳ್ಳಲು BJP, RSS ನಡೆಸಿದ ತಂತ್ರಗಳು, ಹುಟ್ಟು ಹಾಕಿದ ಸುಳ್ಳುಗಳು ಇವುಗಳ ಕುರಿತು ಅತ್ಯಂತ ಸ್ವಾರಸ್ಯಕರವಾದ ಸತ್ಯಗಳನ್ನು ಬಯಲು ಮಾಡಿದ್ದಾರೆ.

ಕಾರ್ಪೆಂಟರ್ ನಿಂದ ದತ್ತ ಪಾದುಕೆ

ದರ್ಗಾದಲ್ಲಿ ಇಲ್ಲದ ಪಾದುಕೆಗಳನ್ನು ತರಿಕೆರೆಯ ಕಾರ್ಪೆಂಟರ್ ಮೂರ್ತಿಯಿಂದ ಮರದಲ್ಲಿ ಮಾಡಿಸಿ, ಅದಕ್ಕೆ ಬೆಳ್ಳಿ ಕವಚ ಮಾಡಿ, ಅದನ್ನೇ ಜಿಲ್ಲೆಯಾದ್ಯಂತ ಯಾತ್ರೆ ಮಾಡಿ, ಉದ್ವಿಗ್ನ ಸ್ಥಿತಿಯನ್ನು ನಿರ್ಮಾಣ ಮಾಡುವಲ್ಲಿ ಅಂದಿನ ಮಹೇಂದ್ರ ಕುಮಾರ್ ಪಾತ್ರ ದೊಡ್ಡದು. ಇದರ ಕುರಿತು ಹೀಗೆ ಬರೆಯುತ್ತಾರೆ. "ಈ ಮಧ್ಯೆ ದತ್ತ ಪಾದುಕೆ ಮಾಡಿಕೊಟ್ಟಿದ್ದ ಕಾರ್ಪೆಂಟರ್ ಮೂರ್ತಿಯವರು ನಮ್ಮನ್ನು ಸಂಪರ್ಕಿಸಿ, ಪಾದುಕೆ ಮಾಡಿರುವುದರ ಹಣ ಕೊಡುವಂತೆ ಕೇಳಿಕೊಂಡರು. ನಮ್ಮ ಹುಡುಗರು ಮೂರ್ತಿಗೆ ಸರಿಯಾಗಿ ಹೊಡೆದು ಕಳಿಸಿದರು. ಇವತ್ತು ಇಡೀ ಸರ್ಕಾರ ಆ ದತ್ತ ಪಾದುಕೆಗೆ ಕೈ ಮುಗಿಯುತ್ತಿದೆ. ಇಡೀ ಹಿಂದೂ ಸಮುದಾಯ ಅದೇ ದತ್ತ ಪಾದುಕೆಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತದೆ.

ಆ ದತ್ತ ಪಾದುಕೆಯಿಂದಲೇ ಹಲವರು ಶಾಸಕರಾದರು, ಮಂತ್ರಿಗಳಾದರು. ಆ ದತ್ತಪಾದುಕೆಯನ್ನು ಕಾಯಲು ಐಎಎಸ್ ಮಾಡಿರುವ ಜಿಲ್ಲಾಧಿಕಾರಿಗೆ ಉಸ್ತುವಾರಿ ನೀಡಲಾಗಿದೆ."

ಇಡೀ ಪುಸ್ತಕದುದ್ದಕ್ಕೂ ಈ ರೀತಿಯ ಘಟನೆಗಳ ಹಿಂದಿನ ಸತ್ಯಾಸತ್ಯತೆಗಳನ್ನು ಬಯಲು ಮಾಡಿದ್ದಾರೆ.

ಚರ್ಚ್ ಮೇಲಿನ ಸರಣಿ ದಾಳಿ

ಮಂಗಳೂರಿನಲ್ಲಿ ನಡೆದ ಚರ್ಚ್ ಮೇಲಿನ ಸರಣಿ ದಾಳಿಗಳ ಹಿಂದೆ ಇದ್ದ ಆರ್.ಎಸ್.ಎಸ್.ನ ಬ್ರಾಹ್ಮಣ್ಯದ ಆಲೋಚನೆ ಹೇಗೆ ಶೂದ್ರ ಹಿಂದುಳಿದ ಭಜರಂಗದಳದ ಯುವಕರನ್ನು ಬಲಿಪಶುವಾಗಿಸಿತು ಮತ್ತು ಈ ದಾಳಿಗಳಲ್ಲಿ ಆರ್.ಎಸ್.ಎಸ್. ಮನಸ್ಥಿತಿಯ ಪೊಲೀಸರು ನಡೆಸಿದ ದಾಳಿಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಚರ್ಚ್ ದಾಳಿಗಳ ಹಿಂದಿರಬಹುದಾದ ರಾಜಕೀಯ ಮತ್ತು ಆರ್ಥಿಕ ವಿಚಾರಗಳ ಕುರಿತು ವಿಭಿನ್ನ ದೃಷ್ಟಿಕೋನದಲ್ಲಿ ಯೋಚಿಸಿರುವ ಮಹೇಂದ್ರ ಕುಮಾರ್, ಅವರದ್ದೇ ಮಾತುಗಳಲ್ಲಿ ಹೀಗೆ ಹೇಳಿದ್ದಾರೆ.

"ಚರ್ಚ್ ದಾಳಿಯ ಸಮಯದಲ್ಲಿ ಪೊಲೀಸರಿಗೆ ಕಲ್ಲು ತೂರಾಟ ಮಾಡಿದರು ಎಂದು ನೂರಾರು ಜನರನ್ನು ಪೊಲೀಸರು ಬಂಧಿಸಿದರು. ಅದೇ ನೆಪದಲ್ಲಿ ಮಂಗಳೂರು ವಿಶೇಷ ಆರ್ಥಿಕ ವಲಯದ ವಿರುದ್ಧ ಹೋರಾಡುತ್ತಿದ್ದ ಕ್ರಿಶ್ಚಿಯನ್ ರೈತರನ್ನೂ, ಕ್ರಿಶ್ಚಿಯನ್ ಯುವಕರನ್ನೂ ಬಂಧಿಸಿದರು. ಎಸ್‌ಇಝೆಡ್ ವಿರೋಧಿ ಕ್ರಿಶ್ಚಿಯನ್ ರೈತರನ್ನು ಜೈಲಲ್ಲಿಟ್ಟು ಹಲವು ದೇವಸ್ಥಾನ, ದೈವಸ್ಥಾನಗಳನ್ನು ನೆಲಸಮ ಮಾಡಿದರು. ಈ ಸಂದರ್ಭ ವಿದ್ಯಾದಿನಕರ್ ಮತ್ತಿತರ ಹೋರಾಟಗಾರರು ಅವರನ್ನು ಬಿಡಿಸಿಕೊಂಡು ಬಂದರೂ, ಬಂಡವಾಳಶಾಹಿ ಎಂಆರ್‌ಪಿಎಲ್/ವಿಶೇಷ ಆರ್ಥಿಕ ವಲಯ ಕಂಪನಿಯು ಚರ್ಚ್ ದಾಳಿಯನ್ನು ಲಾಭ ಮಾಡಿಕೊಂಡು ಹಲವು ರೈತರ ಮನೆಗಳನ್ನೂ, ನಾಗಬನ, ದೇವಸ್ಥಾನಗಳನ್ನು ಉರುಳಿಸಿತು. ವಿಶೇಷ ಆರ್ಥಿಕ ವಲಯದ ಬಹುಕೋಟಿ ಹೂಡಿಕೆಯ ಕಂಪನಿಗಳಿಂದ ಕಿಕ್ ಬ್ಯಾಕ್ ಪಡೆದು ರಾಜ್ಯ ಸರ್ಕಾರ, ಆರ್‌ಎಸ್‌ಎಸ್ ನಮ್ಮನ್ನು ಬಲಿಕೊಟ್ಟು ಚರ್ಚ್ ದಾಳಿಯನ್ನು ರೂಪಿಸಿತೆ ಎಂಬ ಅನುಮಾನ ನನಗೆ ಈಗಲೂ ಇದೆ."

ಯುವಕರಿಗೆ ಸ್ಪಷ್ಟ ಸಂದೇಶ

ಪುಸ್ತಕದ ಕೊನೆಯಲ್ಲಿನ ಅವರ ಮಾತುಗಳೇ ಧರ್ಮದ ಅಮಲಿನಲ್ಲಿ ತೇಲುತ್ತಿರುವ ಇಂದಿನ ಯುವಕರಿಗೆ ಸ್ಪಷ್ಟ ಸಂದೇಶ "ಕೊನೆಯದಾಗಿ ಒಂದು ಮಾತು. ನನ್ನನ್ನೂ ಸೇರಿದಂತೆ ಈ ನಾಡು ಕಟ್ಟುವ ಲಕ್ಷ ಲಕ್ಷ, ಕೋಟಿ ಕೋಟಿ ಪ್ರಗತಿಪರರನ್ನು ನೀವು ಹಿಂದೂ ವಿರೋಧಿಗಳು ಎನ್ನುವಿರಿ. ಆದರೆ ನಾವೆಲ್ಲರೂ ಭಜರಂಗದಳವೂ ಸೇರಿದಂತೆ ಎಲ್ಲಾ ತೀವ್ರವಾದಿ ಸಂಘಟನೆಗಳಲ್ಲಿರುವ ಹಿಂದುಳಿದ, ದಲಿತ ಯುವಕ ಯುವತಿಯರ ಪರ ಯಾವತ್ತೂ ಇರುತ್ತೇವೆ. ಬ್ರಾಹ್ಮಣರು ಮತ್ತು ಬಲಾಡ್ಯರನ್ನು ಬೆಳೆಸುವ ಅಂತಹ ತೀವ್ರಗಾಮಿ ಸಂಘಟನೆಗಳಿಂದ ಹೊರ ಬಂದು ನಿಮ್ಮ ಬದುಕು ಕಟ್ಟಿಕೊಳ್ಳಿ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್, ಬುದ್ಧ, ಬಸವ, ಫುಲೆ, ಕುವೆಂಪು ಹಾಕಿಕೊಟ್ಟ ದಾರಿಯಲ್ಲಿ ನಡೆಯೋಣ... ದೇಶದ ಭವಿಷ್ಯ ರೂಪಿಸುತ್ತಲೇ ನಮ್ಮ ಜೀವನ ಭವಿಷ್ಯ ಕಟ್ಟಿಕೊಳ್ಳಬೇಕಿದೆ. ನಮ್ಮ ಜೀವನದಲ್ಲಿ ಶಾಂತಿ, ಸೌಹಾರ್ದ ಇದ್ದರೆ, ಅದು ದೇಶದಲ್ಲೂ ಇರುತ್ತದೆ. ಹೌದು ದೇಶವೇ ನಾವು."

ಪ್ರಸ್ತುತ ರಾಜಕೀಯವಾಗಿ, ಸಾಮಾಜಿಕವಾಗಿ ಅತ್ಯಂತ ಸಂಕಷ್ಟದಲ್ಲಿರುವ ಈ ಕಾಲಘಟ್ಟದಲ್ಲಿ ಮಹೇಂದ್ರ ಕುಮಾರ್ ಅವರ ಎದೆಯದನಿ ಸಮಾಜದ ಎಲ್ಲ ಯುವ ಮನಸ್ಸುಗಳಿಗೂ, ಅದರಲ್ಲೂ ಧರ್ಮದ ಅಮಲೇರಿಸಿಕೊಂಡಿರುವ ಯುವಜನತೆಯ ಎದೆಗಳಲ್ಲಿ ಪ್ರೀತಿಯ ಕಾಳನ್ನು ಖಂಡಿತವಾಗಿಯೂ ಬಿತ್ತುತ್ತದೆ. ಆ ಮೂಲಕ ಮಹೇಂದ್ರ ಕುಮಾರ್ ಎಲ್ಲರೊಳಗೂ ಯಾವಾಗಲೂ ಜೀವಂತವಾಗಿರುತ್ತಾರೆ.

ಅತ್ಯಂತ ಪ್ರಮುಖ ವಿಷಯಗಳನ್ನು, ಅತ್ಯಂತ ಸರಳವಾಗಿ ಮಂಡಿಸಿರುವ ಈ ಕೃತಿಯನ್ನು ಎಲ್ಲರೂ ಓದಲೇಬೇಕು. ಲಡಾಯಿ ಪ್ರಕಾಶನ ಪುಸ್ತಕವನ್ನು ಪ್ರಕಟಿಸಿದ್ದು, 204 ಪುಟಗಳ ಪುಸ್ತಕದ ಮುಖಬೆಲೆ 200 ರೂಗಳು. ●

ಜನಾರ್ದನರೆಡ್ಡಿ ಬಿಜೆಪಿಗೆ ಆನೆ ಬಲವೇ...ಭಾರವೇ... ಪುಟ 7 ರಿಂದ

ಆರಂಭಿಸಿದೆ.

ಈ ಸನ್ನಿವೇಶದಲ್ಲಿ ಬಳ್ಳಾರಿ ಪ್ರವೇಶಕ್ಕೆ ಜನಾರ್ದನರೆಡ್ಡಿಯವರಿಗೆ ಪ್ರವೇಶ ಇಲ್ಲ. ಅವರ ಬಲ ಕೇಂದ್ರೀಕೃತವಾಗಿ ಇರುವುದು ಈ ಕ್ಷೇತ್ರದಲ್ಲೇ. ಅವರ ಬೆಂಬಲಿಗರು ಇಲ್ಲಿ ಕಣಕ್ಕೆ ಇಳಿಯಬೇಕಿದೆ, 'ಮುಕ್ತ ಮನಸ್ಸಿ'ನಿಂದ 'ಶ್ರೀರಾಮುಲು' ಅವರಿಗೆ ಕೆಲಸ ಮಾಡಬೇಕಿದೆ. ಕೊಪ್ಪಳದಲ್ಲಿ ಜ.ರೆಡ್ಡಿಗೆ ಓಡಾಟ ಸುಲಭ. ವಿಶೇಷವೆಂದರೆ ಗಂಗಾವತಿಯಲ್ಲಿ ಬಹುತೇಕವಾಗಿ ಜನಾರ್ದನರೆಡ್ಡಿಯವರ ಬೆಂಬಲಿಗರು ಬಿಜೆಪಿಯವರೇ ಆಗಿರುವುದು. ಅಂದರೆ ರೆಡ್ಡಿಯವರ ಫ್ಯಾಕ್ಟರ್ ನಿಂದ ಬಿಜೆಪಿಗೆ ಆನೆ ಬಲ ಬಂದು ಬಿಡುವುದು ಎಂದು ಭಾವಿಸುವುದು ಕಷ್ಟ. ಅದು ಭಾರವೂ ಆಗಬಹುದು. ಅವರು ಎಷ್ಟು ತೊಡಗುತ್ತಾರೆ ಎನ್ನುವುದೂ ಒಂದು ಪ್ರಶ್ನೆ.

ಇವೇನೇ ಇರಲಿ, ಕೊಪ್ಪಳ, ಬಳ್ಳಾರಿ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಎದುರಿಸುವಲ್ಲಿ ಗಾ.ಜ.ರೆಡ್ಡಿ ಬಣವನ್ನು ಸೇರಿಯೇ ಎದುರಿಸುವುದು ಇಂಡಿಯಾ ಕೂಟಕ್ಕೆ ಮುಖ್ಯ ಸವಾಲು ಕೂಡ.

ಇಲ್ಲಿ ಬರುವ ಪ್ರಶ್ನೆ ಎಂದರೆ ನ್ಯಾ. ಸಂತೋಷ್ ಹೆಗ್ಡೆಯವರ ನೇತೃತ್ವದಲ್ಲಿ ಲೋಕಾಯುಕ್ತ ವರದಿ ಎತ್ತಿ ತೋರಿಸಿದ ಲಕ್ಷಾಂತರ ಕೋಟಿಗಳ ಭಾರೀ ಗಣಿ ಹಗರಣ, ಹಲವಾರು ಕ್ರಿಮಿನಲ್ ಕೇಸ್ ಗಳು, ರಾಷ್ಟ್ರದ ಅಮೂಲ್ಯ ಗಣಿ ಸಂಪತ್ತಿನ ಎಗ್ಗಿಲ್ಲದ ಲೂಟಿಯ ಕಳಂಕ ಮತ್ತು ರಾಜಕೀಯ ಮೇಲುಗೈ ಸಾಧಿಸಲು ತಗ್ಗದ ತವಕ! ಇಷ್ಟೆಲ್ಲಾ ಇರುವಾಗಲೂ ಬಿಜೆಪಿ–ಮೋ–ಶಾ ಗಳು ಕೇವಲ ಚುನಾವಣಾ ಲಾಭಕ್ಕಾಗಿ ಅಕ್ರಮ, ಅನೈತಿಕತೆಯನ್ನು ಅಪ್ಪಿಕೊಳ್ಳುತ್ತಿರುವುದು ಅದರ ದಿವಾಳಿತನವನ್ನು ತೋರಿಸುತ್ತದೆ. ಈ ಕ್ರಮಗಳಿಂದ ಮುಂದಿನ ದಿನಗಳಲ್ಲಿ ಬಿಜೆಪಿಗೂ ಹಲವು ಸಮಸ್ಯೆಗಳು ಎದುರಾಗಲಿವೆ. ಹಾಗೆ ಬಳ್ಳಾರಿಯ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲೂ ಬೀರುವ ಅಪಾಯಕಾರಿ ಪರಿಣಾಮಗಳನ್ನು ಎದುರಿಸುವ ಸವಾಲು ಜನರ ಮುಂದಿದೆ. ●

ಬರ ಪರಿಹಾರ: ಸಮರ್ಥನೀಯ ನಡೆ... ಪುಟ 3 ರಿಂದ

ಗಹನವಾದ ಇನ್ನೊಂದು ಪ್ರಶ್ನೆಯೆಂದರೆ: ಕೇಂದ್ರ ಮತ್ತು ರಾಜ್ಯಗಳ ನಡುವೆ ಇರುವ ಸಮಸ್ಯೆಯನ್ನೇ ಮುಂದಿಟ್ಟು ಜನತೆಗೆ ಪರಿಹಾರ ಒದಗಿಸಲು ವಿಳಂಬಿಸುವುದು ಯಾರೇ ಮಾಡಿದರೂ ಅದು ಅಕ್ಷಮ್ಯ. ರಾಜ್ಯ ಸರ್ಕಾರವು ಕೂಡ ಸಾಧ್ಯವಿರುವ ಎಲ್ಲ ಕ್ರಮಗಳನ್ನು ಈ ಕೂಡಲೇ ಕೈಗೊಳ್ಳಬೇಕಾಗಿದೆ. ಅದಕ್ಕೆ ಹೆಚ್ಚಿನ ನೆರವು ಮುತುವರ್ಜಿ ನೀಡಬೇಕಾಗಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವ್ಯಾಪಕಗೊಳಿಸುವುದು ಮತ್ತು ಪರಿಣಾಮಕಾರಿಯಾಗಿ ಜಾರಿಗೊಳಿಸುವುದರ ಮೂಲಕವಾಗಿ ಗ್ರಾಮೀಣ ಪ್ರದೇಶದ ನಿರುದ್ಯೋಗ ಮತ್ತು ಹಸಿವನ್ನು ಸ್ವಲ್ಪ ಮಟ್ಟಿಗಾದರೂ ತಣಿಸಬಹುದು. ಹಾಗೆ ವಲಸೆ ತಡೆಗೆ ಹಲವು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು.

ಸರ್ವೋಚ್ಚ ನ್ಯಾಯಾಲಯದ ಮುಂದೆ ಕರ್ನಾಟಕದ ಮನವಿ ಕೇವಲ ಹಣಕಾಸಿನ ನೆರವಿನ ಬಗ್ಗೆ ಅಲ್ಲ, ಇದು ಬದುಕುಳಿಯುವಿಕೆ, ಸಹಾನುಭೂತಿ ಮತ್ತು ಆಡಳಿತದ ಹೊಣೆಗಾರಿಕೆಯ ಕರ್ತವ್ಯವಾಗಿದೆ. ನ್ಯಾಯಾಲಯವು ಈ ಪ್ರಕರಣದಲ್ಲಿ ಜನಪರ, ಜೀವಪರವಾಗಿ ತೀರ್ಮಾನಿಸಲಿ, ಪರಿಹಾರ ಹರಿಯಲಿ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE April 1-7, 2024 Price: Rs. 10/- Date of Publication: 29 March 2024 RNI No. KARKAN /2006/17926 Posted on 02-04-2024
Posted at BG PSO, BG - 560026 **Posted at Periodical Rate -** Rs. 2

ಟಿ.ಎಂ. ಕೃಷ್ಣ ಅವರಿಗೆ, 'ಸಂಗೀತ ಕಲಾನಿಧಿ' ಪುರಸ್ಕಾರ ಮತ್ತು ವಿವಾದಗಳು



ಆರ್. ರಾಮಕೃಷ್ಣ

ಖ್ಯಾತ ಕರ್ನಾಟಕ ಸಂಗೀತದ ಹಾಡುಗಾರ ಟಿ.ಎಂ. ಕೃಷ್ಣ ಅವರಿಗೆ 2024 ನೇ ಸಾಲಿನ 'ಮದ್ರಾಸ್ ಮ್ಯೂಸಿಕ್ ಅಕಾಡೆಮಿ' ಕೊಡ ಮಾಡುವ 'ಸಂಗೀತ ಕಲಾನಿಧಿ' ಪುರಸ್ಕಾರ ದೊರೆತಿದೆ. ಹಾಗೂ ಈ ಬೆಳವಣಿಗೆಯನ್ನು ಸಂಗೀತ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ವಿವಾದಕ್ಕೆ ಬಳಸಲು ಕಾರಣವಾಗಿದೆ.

ಕರ್ನಾಟಕ ಸಂಗೀತದ ಹಾಡುಗಾರ್ತಿಯರಾದ ಗಾಯತ್ರಿ–ರಂಜನಿ ಮತ್ತು ಹಲವರು ಕೃಷ್ಣ ಅವರಿಗೆ ಈ ಪುರಸ್ಕಾರ ದೊರೆತಿರುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಟಿ.ಎಂ. ಕೃಷ್ಣ ಅವರು ಕರ್ನಾಟಕ ಸಂಗೀತವನ್ನು 'ಸಂಗೀತದ ಆಚೆಗಿನ ವಿಷಯಗಳಿಗೆ ಬಳಸಿಕೊಂಡು' ಕಲುಷಿತಗೊಳಿಸಿದ್ದಾರೆ ಎನ್ನುವುದು ಅವರ ಮುಖ್ಯವಾದ ಆಕ್ಷೇಪವಾಗಿದೆ. ಸ್ವತಃ ಬ್ರಾಹ್ಮಣ ಮೂಲದ ಕುಟುಂಬದಿಂದ ಬಂದ ಟಿ.ಎಂ. ಕೃಷ್ಣ ಅವರು ಕರ್ನಾಟಕ ಸಂಗೀತವು ಬ್ರಾಹ್ಮಣರ ಕಪಿಮುಷ್ಠಿಯಲ್ಲಿದೆ ಎಂದೂ, ಅದು ಎಲ್ಲರಿಗೂ ದಕ್ಕುವಂತವಾಗಬೇಕು ಎಂದೂ ಪ್ರತಿಪಾದಿಸಿದವರು ಮತ್ತು ಈ ನಿಟ್ಟಿನಲ್ಲಿ ಹಲವಾರು ಪ್ರಯತ್ನಗಳನ್ನು ಹಾಗೂ ಹೊಸ ಪ್ರಯೋಗಗಳನ್ನು ನಡೆಸಿದವರು. ಸಂಗೀತದ ಶೈಲಿ, ವಸ್ತು ಮುಂತಾದ ಎಲ್ಲ ವಿಷಯಗಳಲ್ಲೂ ಹೊಸ ಹೊಸ ಪ್ರಯೋಗಗಳನ್ನು ನಡೆಸಿರುವವರು. ಕೃಷ್ಣ ತಳಸಮುದಾಯಗಳ ಕೇರಿಗಳಿಗೆ ಕರ್ನಾಟಕ ಸಂಗೀತವನ್ನು ತೆಗೆದುಕೊಂಡು ಹೋಗುತ್ತೇನೆ ಎಂದು ಹೊರಟರು. ತಳಸಮುದಾಯದ ಅನೇಕ ಕಲಾವಿದರನ್ನು ಜೊತೆಗೂಡಿಸಿಕೊಂಡು ಸಂಗೀತ ಕಛೇರಿಗಳನ್ನು ನಡೆಸಿದರು. ಆ ಮೂಲಕ ಕರ್ನಾಟಕ ಸಂಗೀತವನ್ನು ಒಂದು ಜಾತಿಯ ಹಿಡಿತದಿಂದ ಹೊರತರಲು ಪ್ರಯತ್ನಿಸಿದರು. ಕೃಷ್ಣ ಅವರು ಸಂಗೀತ ಮಾತ್ರವಲ್ಲದೆ ಸಾಮಾಜಿಕ ಬೆಳವಣಿಗೆಗಳಿಗೆ ಪ್ರತಿಕ್ರಿಯಿಸುವವರು. ಸಾಂದರ್ಭಿಕವಾಗಿ ಕೃಷ್ಣರವರು ಹಲವು ಸಾಮಾಜಿಕ ಪ್ರಶ್ನೆಗಳಲ್ಲಿ ಅಂಬೇಡ್ಕರ್, ಪೆರಿಯಾರ್, ಲೆನಿನ್ ಮುಂತಾದವರ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ. ಈ ಹಿನ್ನೆಲೆ ಏನೇ ಇದ್ದರೂ ಟಿ.ಎಂ. ಕೃಷ್ಣ ಅವರಿಗೆ ಪ್ರಶಸ್ತಿ ದೊರೆತಿದ್ದರಲ್ಲಿ ತಳಸಮುದಾಯದ ಜನರು, ಶೋಷಿತರು ಸಂಭ್ರಮ ಪಡುವಂತಹದ್ದೇನಿಲ್ಲ ಎಂದು ವಾದಿಸುವ ದನಿಯೂ ಈ ವಿಷಯದಲ್ಲಿ ಕೇಳಿ ಬರುತ್ತಿದೆ.

ಟಿ.ಎಂ.ಕೃಷ್ಣ ಹಿನ್ನೆಲೆ

ಕೃಷ್ಣ ಅವರು 'ಮದ್ರಾಸ್ ಮ್ಯೂಸಿಕ್ ಅಕಾಡೆಮಿ'ಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದ ಕಾಂಗ್ರೆಸ್ ರಾಜಕಾರಣಿ ಮತ್ತು ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಭಾರತೀಯ ಹಣಕಾಸು ಮಂತ್ರಿ ಮತ್ತು ಕೈಗಾರಿಕೋದ್ಯಮಿ ಟಿ.ಟಿ. ಕೃಷ್ಣಮಾಚಾರಿ ಅವರ ಮೊಮ್ಮಗ. ಕೃಷ್ಣ ಮದ್ರಾಸ್‌ನಲ್ಲಿ 22 ಜನವರಿ 1976 ರಂದು ಟಿ.ಎಂ. ರಂಗಾಚಾರಿ–ಪ್ರೇಮಾ ರಂಗಾಚಾರಿ ದಂಪತಿಗಳ ಮಗನಾಗಿ ಜನಿಸಿದರು. ಅವರ ತಾಯಿ ಮತ್ತು ತಾಯಿಯ ಚಿಕ್ಕಪ್ಪ ಡಾ. ಶ್ರೀರಾಮ್ ಸುಬ್ರಮಣ್ಯಂ ಅವರು ತಮಿಳುನಾಡಿನ ಆನೈಕಟ್ಟಿಯಲ್ಲಿ ಬುಡಕಟ್ಟು ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗಾಗಿ 'ವಿದ್ಯಾ ವನಂ' ಎಂಬ ಶಾಲೆಯನ್ನು ಸ್ಥಾಪಿಸಿದ ಇತಿಹಾಸವಿದೆ. ಸಂಗೀತ ಹಾಗೂ ಸಾಂಸ್ಕೃತಿಕ ವಾತಾವರಣ ಇದ್ದ ಹಾಗೂ ರಾಜಕೀಯದ ಸಂಪರ್ಕಗಳೂ ಇದ್ದ ಇಂತಹ ಪ್ರಭಾವಿ ಹಿನ್ನೆಲೆಯ ಕುಟುಂಬದಲ್ಲಿ ಬೆಳೆದ ಟಿ.ಎಂ. ಕೃಷ್ಣ ಅವರಿಗೆ 2016 ರಲ್ಲಿ 'ರಾಮನ್ ಮ್ಯಾಗ್ಸೆಸೆ' ಪುರಸ್ಕಾರ ಸಹ ದೊರೆತಿದೆ. ಭಾರತೀಯ ಸಮಾಜದಲ್ಲಿರುವ ಸಾಮಾಜಿಕ ಕಂದರಗಳ ಅಂದರೆ ಜಾತಿ ಕಂದರಗಳ ನಿವಾರಣೆಗಾಗಿ ನಡೆಸಿದ ಪ್ರಯತ್ನಗಳಿಗಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಪ್ರಶಸ್ತಿ ಸಮಿತಿ ಹೇಳಿದೆ.

ಈ ಒಟ್ಟು ವಿಷಯಗಳನ್ನು ನೋಡುವುದರಲ್ಲಿ ಭಿನ್ನ ಭಿನ್ನ

ಪುಟ 14 ಕ್ಕೆ

ಹಿಂದೂಸ್ತಾನಿ ಸಂಗೀತ ಹುಟ್ಟಿ ಬೆಳೆದಿದ್ದೇ ಧರ್ಮಾತೀತ ಗುರುಶಿಷ್ಯ ಸಂಬಂಧಗಳಿಂದ

ಹಿಂದೂಸ್ತಾನಿ ಸಂಗೀತ ಹುಟ್ಟಿ ಬೆಳೆದಿದ್ದೇ ಧರ್ಮಾತೀತ ಗುರುಶಿಷ್ಯ ಸಂಬಂಧಗಳಿಂದ. ಮಲ್ಲಿಕಾರ್ಜುನ ಮನ್ಸೂರರ ಗುರು ಬುರ್ಜಿಖಾನರು. ಭೀಮಸೇನ ಜೋಶಿ–ಗಂಗೂಬಾಯಿಯರ ಗುರುಗಳಾದ ಸವಾಯಿ ಗಂಧರ್ವರು ಕರೀಂಖಾನರ ಪಟ್ಟ ಶಿಷ್ಯ. ರಾಜೀವ ತಾರಾನಾಥರು ಅಲಿಅಕಬರ್ ಖಾನರ ಮನೆಯಲ್ಲಿದ್ದು ಕಲಿತರು. ಆದರೆ ಮಹಾರಾಷ್ಟ್ರದ ಕೆಲವು ಸಂಗೀತ ಪಂಡಿತರು, ಹಿಂದೂಸ್ತಾನಿ ಸಂಗೀತವನ್ನು ಮ್ಲೇಚ್ಛರ ಹಿಡಿತದಿಂದ ತಪ್ಪಿಸಬೇಕೆಂದು ಪ್ರಯತ್ನಿಸಿದರು. ಈ ಬಗ್ಗೆ ಜಾನಕಿ ಭಾಕ್ಲೆಯವರು ತಮ್ಮ 'ಟು ಮೆನ್ ಅಂಡ್ ಮ್ಯೂಸಿಕ್' ಪುಸ್ತಕದಲ್ಲಿ ವಿಶೇಷ ಚರ್ಚೆ ಮಾಡಿರುವರು. ಹಿಂದೂಸ್ತಾನಿ ಸಂಗೀತದ ಧರ್ಮಾತೀತ ಗುಣವನ್ನು ಸುಲಭವಾಗಿ ನಾಶ ಮಾಡಲು ಸಾಧ್ಯವಾಗಲಿಲ್ಲ.

ಆದರೆ ಈಚೆಗೆ ರಾಜಕೀಯ ಕ್ಷೇತ್ರದಲ್ಲಿ ಹುಟ್ಟಿದ ವಿಷಮತೆಗಳು ಕಲಾಕ್ಷೇತ್ರಗಳಿಗೆ ತೀವ್ರವಾಗಿ ಹರಡುತ್ತಿವೆ. ಕರಾವಳಿಯ ಅದ್ಭುತ ಕಲೆ ಯಕ್ಷಗಾನದ ದೊಡ್ಡ ಭಾಗವು ಇದರ ಬಲಿಪಶುವಾಗಿ ದಶಕಗಳಾದವು. ಸಂಗೀತ ಸಾಹಿತ್ಯ ರಂಗಭೂಮಿ ಸಿನಿಮಾ ಮೊದಲಾದ ಕಲೆಗಳ ಲೋಕದೊಳಗೆ ಅಂತರ್ಗತವಾಗಿಯೇ ಮಾನವೀಯ ಸಂವೇದನೆ ಸಮಾನತೆಯ ಪ್ರಜ್ಞೆ ಇರುತ್ತದೆ ಎಂಬ ಕೆಲವರ ಮುಗ್ಧ ನಂಬಿಕೆಯನ್ನು ಛಿದ್ರಗೊಳಿಸುತ್ತಿವೆ. ಹಿಂದೂಸ್ತಾನಿ ಸಂಗೀತದಲ್ಲಿ ಧರ್ಮದ ಆಧಾರದಲ್ಲಿ ಕಲಾವಿದರನ್ನು ಆಚೆಗಿಡುವ ಕೆಲಸ ಸೂಕ್ಷ್ಮವಾಗಿ ನಡೆಯುತ್ತಿದೆ. ರಾಜಕುಮಾರ್ ಅವರ ವಿಷಯದಲ್ಲಿಯೂ ಚಿತ್ರರಂಗದಲ್ಲಿ ತಾರತಮ್ಯ ಮಾಡಲಾದ ಕತೆಗಳಿವೆ.

ಆದರೆ ಪ್ರಿವಿಲೇಜ್ಡ್ ಸಾಮಾಜಿಕ ಹಿನ್ನೆಲೆಯಿಲ್ಲದ ಶಿಶುನಾಳ, ಕುವೆಂಪು, ರಾಜಕುಮಾರ್, ವೆಂಕಟೇಶ ಕುಮಾರ್ ಇವರೆಲ್ಲ ತಮ್ಮ ಪ್ರತಿಭೆ ಮತ್ತು ಸಾಧನೆಯ ಬಲದಿಂದ ಮೇಲೆದ್ದು ಆಕಾಶದುದ್ದ ಬೆಳೆದರು. ಇವರ ಬೆಳೆತದ ಹಿನ್ನೆಲೆಯಲ್ಲಿ ಗೋವಿಂದಭಟ್ಟ, ಟಿ.ಎಸ್. ವೆಂಕಣ್ಣಯ್ಯ, ಪುಟ್ಟರಾಜ ಗವಾಯಿ ಮೊದಲಾದ ಹೃದಯವಂತ ಗುರುಗಳೂ ಇರುವರು. ಹುಬ್ಬಳ್ಳಿಯ ಸಿದ್ಧಾರೂಢರು ಅಬ್ದುಲ್ ಕರೀಂಖಾನರನ್ನು ಅವರ ಕಷ್ಟದ ದಿನಗಳಲ್ಲಿ ಆಶ್ರಮದಲ್ಲಿಟ್ಟು ಸಲಹಿದರು.

ಟಿ.ಎಂ. ಕೃಷ್ಣ ಸಾಮಾಜಿಕವಾಗಿ ದಮನಿತ ಸ್ತರದಿಂದ ಬಂದವರಲ್ಲ. ಆದರೆ ಅವರು ಮಾಡಿದ ಪ್ರಯೋಗಗಳು ಕೆಲವರಲ್ಲಿ ಸಂಗೀತದ ಪಾವಿತ್ರ್ಯ ಕೆಡಿಸುತ್ತಿದ್ದಾನೆ ಎಂಬ ಆತಂಕ ಹುಟ್ಟಿಸಿವೆ. ಕೃಷ್ಣ 'ಸೆಬಾಸ್ಟಿಯನ್ ಅಂಡ್ ಸನ್ಸ್' ಪುಸ್ತಕದಲ್ಲಿ ದಲಿತ ಕ್ರೈಸ್ತರು ತಯಾರಿಸುವ ಮೃದಂಗಗಳ ಹಿಂದಿನ ಶ್ರಮ ಮತ್ತು ಕುಶಲತೆಗಳ ಮೇಲೆ ಬರೆದರು. ಕಛೇರಿಗಳಲ್ಲಿ ಏಸು ಮತ್ತು ಅಲ್ಲಾನ ಸ್ತುತಿಯಿರುವ ಕೃತಿಗಳನ್ನು ಹಾಡಿದರು. ಸಂಗೀತವನ್ನು ಕೇರಿಗಳಿಗೆ ಒಯ್ದರು. ಕೇರಿಗಳಿಂದ ಕಲಿತರು. ಅವರ ಬರೆಹಗಳಲ್ಲಿ ಕಲಾಲೋಕದಲ್ಲಿರುವ ಜಾತಿ ವ್ಯವಸ್ಥೆ ಬಗ್ಗೆ ವಿಮರ್ಶೆಗಳಿವೆ. ನಮ್ಮ ಸಂವಿಧಾನದ ಮೌಲ್ಯಗಳ ಪ್ರತಿಪಾದನೆಯಿದೆ.

ಸಂಗೀತ ಲೋಕದೊಳಗಿನ ವೈಯಕ್ತಿಕ ಅಸೂಯೆ–ಜಗಳಗಳು ಆಳವಾಗಿರುತ್ತವೆ. ವಿಚಿತ್ರವಿರುತ್ತವೆ. ಉಸ್ತಾದ್ ಅಬ್ದುಲ್ ಕರೀಂಖಾನರು ಕೊಲ್ಹಾಪುರದಲ್ಲಿ ಹಾಡುವ ಕಾಲಕ್ಕೆ, ಅಲ್ಲಾದಿಯಾ ಖಾನರು ತಂಬೂರಿ ಸಿಗದಂತೆ ಮಾಡಿದ್ದರು. ಈ ಬಗ್ಗೆ ಜಾನಕಿ ಪುಸ್ತಕದಲ್ಲಿ ನಿರೂಪಣೆಯಿದೆ. ಚೆನ್ನೈ ಅಕಾಡೆಮಿ ಪ್ರಕರಣದಲ್ಲಿಯೂ ಇಂತಹ ವೈಯಕ್ತಿಕ ಜಗಳಗಳಿರಬಹುದು. ಇದರ ಜತೆಗೆ ಕಲಾಲೋಕದಲ್ಲಿ ಇತ್ತೀಚಿಗೆ ವ್ಯಾಪಿಸುತ್ತಿರುವ ಮತೀಯ ನಂಜಿನ ಅಂಶವೂ ಅಲ್ಲಿ ಸೇರಿಕೊಂಡಂತಿದೆ.

–ರಹಮತ್ ತರಿಕೆರೆ

ಕೆ. ನೀಲಾ ಮತ್ತು ರಾಮಕ್ಕ ಅವರಿಗೆ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ'

ರಾಜ್ಯದಲ್ಲಿ, ವಿಶೇಷವಾಗಿ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಜನ ಜಾಗೃತಿ ಮೂಡಿಸುತ್ತಿರುವ ಕೆಲಸಕ್ಕಾಗಿ ಸಾಮಾಜಿಕ ಹೋರಾಟಗಾರ್ತಿ, ಸಾಹಿತಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ, ಸಿ.ಪಿ.ಐ.(ಎಂ) ಪಕ್ಷದ ರಾಜ್ಯ ನಾಯಕಿ ಕೆ. ನೀಲಾ ಅವರಿಗೆ ನಾಡೋಜ ಡಾ. ಬರಗೂರು ಪ್ರತಿಷ್ಠಾನವು ಕೊಡ ಮಾಡುವ 'ರಾಜಲಕ್ಷ್ಮಿ ಬರಗೂರು ಪ್ರಶಸ್ತಿ'ಯ ಪುರಸ್ಕಾರವನ್ನು ನೀಡಲಾಗಿದೆ. ಅದೇ ರೀತಿ ತುಮಕೂರಿನ ಬುಡಕಟ್ಟು ಸಮುದಾಯದ ಮಕ್ಕಳ ಶಿಕ್ಷಣಕ್ಕಾಗಿ ಶ್ರಮಿಸುತ್ತಿರುವ ಸಾಮಾಜಿಕ ಹೋರಾಟಗಾರ್ತಿ ರಾಮಕ್ಕ ಅವರಿಗೆ ಸಹ ಈ ಪುರಸ್ಕಾರ ದೊರೆತಿದೆ.

ಮಾರ್ಚ್ 24, 2024 ರಂದು ಬೆಂಗಳೂರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಖ್ಯಾತ ಕಲಾವಿದೆ ಉಮಾಶ್ರೀ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಸಮಾರಂಭದಲ್ಲಿ ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ, ಖ್ಯಾತ ವಕೀಲರಾದ ಸಿ.ಎಚ್. ಹನುಮಂತರಾಯಪ್ಪ, ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ರಾಜಪ್ಪ ದಳವಾಯಿ ಮುಂತಾದವರು ಪಾಲ್ಗೊಂಡಿದ್ದರು.



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**